(8) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಿದ ವಿಷಯಗಳು :

ಆಶ್ರಯ ಯೋಜನೆಯಡಿಯಲ್ಲಿ ಮನೆಗಳ ಹಂಚಿಕೆಯಲ್ಲಿ ಆಗಿದೆ ಎನ್ನಲಾದ ತಾರತಮ್ಯ.

+ ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :—ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದೆ. ಕರ್ನಾಟಕ ರಾಜ್ಯದಲ್ಲಿ ಆಶ್ರಯ ಯೋಜನೆ ಅಡಿಯಲ್ಲಿ ಮನೆಗಳನ್ನು ಹಂಚತಕ್ಕ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಂಡಿದೆ. ಇದೇನೂ ಹೊಸ ಕಾರ್ಯಕ್ರಮ ಅಲ್ಲ. ಶ್ರೀಮಾನ್ ದೇವರಾಜ್ ಅರಸ್ ಅವರ ಕಾಲದಿಂದಲೂ ಇದೆ. ಪ್ರಪ್ರಥಮವಾಗಿ ಶ್ರೀಮಾನ್ ಬಸವಲಿಂಗಪ್ಪನವರು ಸೈಟ್ ಲೆಸ್ ಮತ್ತು ಹೌಸ್ ಲೆಸ್ ಜನರಿಗೆ ಏನಾದರೂ ಒಂದು ಕಾರ್ಯಕ್ರಮ ಮಾಡಬೇಕೆಂದು ಅವರು ಅರ್ಬನ್ ಮತ್ತು ಮುನಿಸಿಪಾಲಟಿ, ಹೌಸಿಂಗ್ ಮಿನಿಸ್ಟರ್ ಇದ್ದಾಗ ಪ್ರಾರಂಭ ಮಾಡಿದ್ದರು. ಆದಾದ ನಂತರ ಕರ್ನಾಟಕ ರಾಜ್ಯದಲ್ಲಿ ಇದು ಪ್ರಾಮುಖ್ಯತೆಗೆ ಬಂತು. ಕೊನೆಗೆ 20 ಅಂಶದ ಕಾರ್ಯಕ್ರಮದಲ್ಲೂ ಅಳವಡಿಸಿಕೊಂಡು ಇದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು ಎಂದು ಹೇಳಿ ಪ್ರತಿ ಸರ್ಕಾರ ಕೂಡ ಈ ಒಂದು ಯೋಜನೆ ಮಾಡಿತು. ಒಂದು ಸಾರಿ ಜನತಾ ಹೌಸಿಂಗ್ ಸ್ಕೀಮ್ ಆಯಿತು. ಆಮೇಲೆ ಬೇರೆ ಬೇರೆ ರೂಪದಲ್ಲಿ ಆಯಿತು. ಆಶ್ರಯ ಯೋಜನೆ ಎಂದು ಬಂತು. ಕೇಂದ್ರದಲ್ಲಿರತಕ್ಕ ಇಂದಿರಾ ಆವಾಸ್ ಯೋಜನೆ. ಹೀಗೆ ಬೇರೆ ಬೇರೆ ರೂಪದಲ್ಲಿ ಬಂತು, ಇವತ್ತು ಈ ಒಂದು ಯೋಜನೆಯನ್ನು ನಾವು ಕಾಣುತ್ತಿದ್ದೇವೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಮಾರು 1996 ರಲ್ಲಿ ಒಂದು ಸರ್ವೆ ಮಾಡಿದರು. ಆ ಸರ್ವೆ ಪ್ರಕಾರ ಹೌಸ್ ಲೆಸ್ ಮತ್ತು ಸೈಟ್‌ಲೆಸ್ ಜನ ಎಷ್ಟು ಕುಟುಂಬಗಳು ಕರ್ನಾಟಕದಲ್ಲಿ ಇದ್ದಾವೆ ಎಂದು ನೋಡಿದರೆ 19 ಲಕ್ಷ, 34 ಸಾವಿರ, 49 ಅಂದರೆ ಹೆಚ್ಚು ಕಡಿಮೆ 19 ಲಕ್ಷ 50 ಸಾವಿರ ಎಂದರೆ ತಪ್ಪಾಗಲಿಕ್ಕಿಲ್ಲ. ಹೆಚ್ಚು ಕಡಿಮೆ ಅಷ್ಟು ಜನರು ಇದ್ದಾರೆ. ಇಷ್ಟೊಂದು ಜನರಿಗೆ ಕನಿಷ್ಟ ಪಕ್ಕ ಮನೆಗಳನ್ನು ಕೊಡಬೇಕು. ಅವರಿಗೆ ಒಂದು ತಲೆಯ ಮೇಲೆ ಸೂರು, ಒಂದು ಆಶ್ರಯ ಕೊಡಬೇಕು ಎನ್ನತಕ್ಕ ದೃಷ್ಟಿಯಿಂದ ಎಲ್ಲಾ ಸರ್ಕಾರಗಳೂ ಯೋಜನೆಯನ್ನು ಹಾಕಿಕೊಂಡಿದೆ. ಅದರಂತೆ ಈ ಸರ್ಕಾರ ಕೂಡ ಯೋಜನೆಯನ್ನು ಹಾಕಿಕೊಂಡು ಅನೇಕ ತಾಲ್ಲೂಕುಗಳಿಗೆ ಮತ್ತು ಅಸೆಂಬ್ಲಿ ಕ್ಷೇತ್ರಗಳಿಗೆ ಮನೆ ಹಂಚಿಕೆಗಳನ್ನು ಕೂಡ ಮಾಡಿದ್ದಾರೆ. ಇದನ್ನು ಹೇಗೆ ಮಾಡಿದ್ದಾರೆ ಎಂದರೆ 1998-99 ರ ಸಾಲಿನಲ್ಲಿ ಒಂದು ಲಕ್ಷ ಹೆಚ್ಚುವರಿ ಆಶ್ರಯ ಮನೆಗಳನ್ನು ಕ್ಷೇತ್ರಾವಾರು ಹಂಚಿಕೆ ಮಾಡಿದ್ದಾರೆ. ಈ ಕ್ಷೇತ್ರಾವಾರು ಮನೆ ಹಂಚಿಕೆ ಮಾಡುವುದರಲ್ಲಿ ಎಷ್ಟೊಂದು ತಾರತಮ್ಯ, ಎಷ್ಟೊಂದು ಫೇವರಿಟಿಸಂ ತೋರಿಸಿದ್ದಾರೆ ಎಂದರೆ ತಮಗೆ ಯಾವ ಶಾಸಕರಿಗೆ ಸಹಾಯ ಮಾಡಬೇಕೋ ಅವರಿಗೆ ಸಾವಿರಾರು ಮನೆಗಳನ್ನು ಹಂಚಿಕೆ ಮಾಡಲಾಗಿದೆ. ಯಾರು ಶಾಸಕರು ಅವರಿಗೆ ಬೇಕಾಗಿಲ್ಲ, ಅವರಿಗೆ 100 ಮತ್ತು 200 ಮನೆಗಳನ್ನು ಕೊಟ್ಟಿದ್ದಾರೆ. ಕೆಲವು

ಕಡೆ ಅಂತೂ ಒಂದೂ ಕೂಡ ಇಲ್ಲ. ಆ ಒಂದು ಸ್ಥಿತಿಯಲ್ಲಿ ಇವತ್ತು ಸರ್ಕಾರದ ಮಂತ್ರಿಗಳು ಆಡಳಿತ ನಡೆಸಿದರೆ, ಯಾವ ರೀತಿಯಾಗಿ ನೀವು ಇಡೀ ಜನರನ್ನು ಸಮಾನತೆ ದೃಷ್ಟಿಯಿಂದ ನೋಡುತ್ತೀರೆಂದು ನಾವು ಭಾವಿಸಬೇಕು? ನಿಮ್ಮ ಕರ್ತವ್ಯ ಏನೆಂದರೆ ಯಾರಿಗೆ ಮನೆ ಇಲ್ಲ, ಅವರಿಗೆ ಮನೆ ಕೊಡತಕ್ಕದ್ದು ಮತ್ತು ಆದ್ಯತೆಯ ಮೇಲೆ ಕೊಡತಕ್ಕದ್ದು ಮತ್ತು ಸರಿಸಮಾನವಾಗಿ ಪ್ರತಿ ಒಂದು ತಾಲ್ಲೂಕಿಗೆ, ತಾಲ್ಲೂಕು ಅಳತೆಗೋಲು ಇದ್ದರೆ ತಾಲ್ಲೂಕಿಗೆ ಕೊಡುವುದು. ಅಸೆಂಬ್ಲಿ ಕ್ಷೇತ್ರ ಅಳತೆಗೋಲು ಇದ್ದರೆ, ಅಸೆಂಬ್ಲಿ ಕ್ಷೇತ್ರಕ್ಕೆ ಕೊಡುವುದು. ಜಿಲ್ಲೆ ಇದ್ದರೆ ಜಿಲ್ಲಾವಾರು ಕೊಡುವುದು ಆ ರೀತಿಯಾಗಿ ನೀವು ಹಂಚಬೇಕಾಗಿತ್ತೇ ಹೊರತಾಗಿ, ನೀವು ಹಂಚಿದ್ದು ಹೇಗೆ ಅಂದರೆ ಮನಸ್ಸು ಬಂದ ಹಾಗೆ ಹಂಚಿದ್ದೀರಿ. ಬಹುಶಃ ಇದು 'ತೊಘಲಕ್‌ನ ದರ್ಬಾರು' ಆಗಿದೆ. ನಾನು ತಮ್ಮ ಗಮನಕ್ಕೆ ಒಂದು ವಿಚಾರವನ್ನು ತರುತ್ತೇನೆ. ಇವರು ಸುಮಾರು ಐದಾರು ಜಿ.ಓ.ಗಳನ್ನು ಹೊರಡಿಸಿದ್ದಾರೆ. 16.1.98ಕ್ಕೆ ಒಂದು ಜಿ.ಓ. ಸುಮಾರು ಒಂದು ಲಕ್ಷ ಮನೆಯನ್ನು ಹಂಚತಕ್ಕದ್ದು, ಆಮೇಲೆ 31.12.98ಕ್ಕೆ ಒಂದು ಜಿ.ಓ. ಅದರಲ್ಲಿ ಸುಮಾರು 1620 ಮನೆಗಳು ಎಕ್ಸ್‌ಕ್ಲೂಸೀವ್‌ಆಗಿ ಕೊಪ್ಪಳಕ್ಕೆ ಕೊಟ್ಟಿರುವುದು. ಆಮೇಲೆ 16.11.98 ಕ್ಕೆ ಇನ್ನೊಂದು ಜಿ.ಓ. ಪ್ರಕಾರ ಸಾವಿರ ಮನೆಗಳು. ಟಾರ್ಗೆಟ್ ಇಟ್ಟುಕೊಂಡು ಸುಮಾರು 175 ತಾಲ್ಲೂಕುಗಳಿಗೆ ಹಂಚಿದ್ದಾರೆ. ಈ ಜಿ.ಓ. ಆದ ಮೇಲೆ ಇನ್ನೊಂದು ಜಿ.ಓ. 19.1.98ರಲ್ಲಿ ಜಾರಿ ಆಗಿದೆ. ಅದರಲ್ಲಿ ಸುಮಾರು ಮುನ್ನೂರು ಮನೆಗಳನ್ನು ಹಂಚತಕ್ಕ ಕೆಲಸ ಪ್ರತಿ ಒಂದು ಎಂಎಲ್‌ಎಗೆ. ಅದರಲ್ಲಿ ತಮಗೆ ಬೇಕಾದವರಿಗೆ ಹಂಚತಕ್ಕ ಕೆಲಸ ಮಾಡಿದ್ದಾರೆ.

1.00 ಪಿ.ಎಂ.

ಅದಾದ ನಂತರ 23.11.98 ಕ್ಕೆ ಇನ್ನೊಂದು ಜಿ.ಓ. ಹೊರಡಿಸಿ ಅದರಲ್ಲಿ 32 ಅಸೆಂಬ್ಲಿ ಸೆಗ್‌ಮೆಂಟ್ಸ್‌ಗೆ ಒಂದೊಂದು ಮತಕ್ಷೇತ್ರಕ್ಕೂ 250 ಮನೆಗಳಂತೆ ಹಂಚಿದ್ದಾರೆ. ಇದಲ್ಲದೆ ಹದಿನೈದು ಜಿ.ಓ.ಗಳನ್ನು ಹೊರಡಿಸಿ ಒಬ್ಬೊಬ್ಬರಿಗೂ ವೈಯಕ್ತಿಕವಾಗಿ ಮನೆಗಳನ್ನು ಹಂಚಿದ್ದಾರೆ.ಇಷ್ಟು ಜಿ.ಓ.ಗಳನ್ನು ಹೊರಡಿಸುವ ಮೂಲಕ ಅವರಿಗೆ ಫೇವರೇಟ್ ಆಗಿರುವವರ ಮತಕ್ಷೇತ್ರಗಳಿಗೆ ಮನೆಗಳನ್ನು ಹಂಚಿರುವುದರ ಬಗ್ಗೆ ತಮ್ಮ ಗಮನಕ್ಕೆ ತರುತ್ತೇನೆ. ಕೆಲವೊಂದು ಮತಕ್ಷೇತ್ರಗಳಿಗೆ ಸಂಬಂಧಿಸಿದಂತೆ ಯಾವ ರೀತಿಯಾಗಿ ನಡೆದುಕೊಂಡಿದ್ದಾರೆಂದರೆ ಕೆಲವರನ್ನು ಅನಾಥರನ್ನಾಗಿ ಮಾಡಿದ್ದು, ಅವರನ್ನು ಕೇಳುವವರೇ ಇಲ್ಲದಂತಾಗಿದೆ. ಇನ್ನೂ ಕೆಲವರಿಗೆ ಮಲತಾಯಿ ಧೋರಣೆ ಅನುಸರಿಸಿದ್ದಾರೆ. ಅಂದರೆ, ಹಂಚುವಾಗ ಮನೆಗಳನ್ನು ಕಡಿಮೆ ಸಂಖ್ಯೆಯಲ್ಲಿ ಕೊಟ್ಟಿದ್ದಾರೆ. ಆದರೆ, ಅವರಿಗೆ ಬಹಳ ಬೇಕಾದಂತಹವರಿಗೆ, ಪ್ರೀತಿಪಾತ್ರರಾದವರಿಗೆ ಒಂದು ಸಾವಿರ ಮನೆಗಳನ್ನು ಹಂಚಿದ್ದಾರೆ. ಇದನ್ನು ಯಾವ ಕಾರಣಕ್ಕೆ ಕೊಟ್ಟರೋ? ಅನುಸರಿಸಿದ ಅಳತೆಗೋಲು ಯಾವುದು?

ಯಾವ ಉದ್ದೇಶಕ್ಕಾಗಿ ಕೊಟ್ಟರು? ಮನೆಗಳನ್ನು ಹಂಚುವಾಗ ಏನಾದರೊಂದು ಕ್ರೈಟಿರಿಯಾ ಫಿಕ್ಸ್ ಮಾಡಬೇಕಲ್ಲಾ. ಯಾವುದೋ ಒಂದು ಅತ್ಯಂತ ಹಿಂದುಳಿದ ಭಾಗದಲ್ಲಿ ಸಾವಿರಾರು ಮನೆಗಳು ಬಿದ್ದುಹೋಗಿರುವ ಕಾರಣದಿಂದ ಕ್ಯಾಬಿನೆಟ್ ಡಿಸಿಷನ್ ತೆಗೆದುಕೊಂಡು ವಿಶೇಷವಾದ ಸವಲತ್ತನ್ನು ಕೊಡಬೇಕೆನ್ನುವಂಥ ದೃಷ್ಟಿಯಿಂದ ಇಷ್ಟು ಸಂಖ್ಯೆಯಲ್ಲಿ ಮನೆಗಳನ್ನು ಕೊಟ್ಟಿದ್ದಾರೆಯೇ? ಹೇಗೆ? ಇದ್ಯಾವುದೂ ಇಲ್ಲ. ಮನೆಗಳನ್ನು ಹಂಚುವಲ್ಲಿ ಯಾವುದೇ ಕ್ರೈಟಿರಿಯಾ ಇಲ್ಲ, ಯಾವ ನೀತಿ-ನಿಯಮಗಳನ್ನೂ ಅನುಸರಿಸಿಲ್ಲ. ಮನಸ್ಸಿಗೆ ಬಂದಂತೆ ಹಂಚುವುದೇ? ಹುಚ್ಚುಮುಂಡೆ ಮದುವೆಯಲ್ಲಿ ಉಂಡವನೇ ಜಾಣ ಎಂಬಂತೆ ಯಾರ್ಯಾರು ಕೇಳಿಕೊಂಡರೋ ಅಥವಾ ಯಾರ್ಯಾರಿಗೆ ಮನೆಗಳನ್ನು ಕೊಡಬೇಕೆಂದು ಮನಸ್ಸಿಗೆ ಬಂತೋ ಅವರಿಗೆಲ್ಲಾ ಮನೆಗಳನ್ನು ಕೊಟ್ಟುಕೊಂಡು ಹೋದರು. ಈ ಕುರಿತು ನಾನು ಉದಾಹರಣೆಗೆ ಹೇಳುವುದಾದರೆ, ಔರಾದ್, ಗುರುಪಾದಪ್ಪ ನಾಗಮಾರಪಲ್ಲಿಯವರು ಪ್ರತಿನಿಧಿಸುತ್ತಿರುವ ಕ್ಷೇತ್ರವಾಗಿದ್ದು, ಅದು ಜನತಾದಳದ ಕ್ಷೇತ್ರವಾಗಿದೆ. ಇಲ್ಲಿಗೆ ದಿನಾಂಕ: 16-11-98 ರಂದು ಜಿ.ಓ. ಹೊರಡಿಸಿ ಅದರಂತೆ 200 ಮನೆಗಳನ್ನು ಕೊಟ್ಟಿದ್ದಾರೆ. ತದನಂತರ ದಿನಾಂಕ: 19-11-98 ಮತ್ತು 23.11.98ರಂದು ಹೊರಡಿಸಿದ ಜಿ.ಓ.ಗಳಲ್ಲಿ ಆ ಕ್ಷೇತ್ರಕ್ಕೆ ಒಂದೂ ಮನೆಯೂ ಸಿಕ್ಕಿರುವುದಿಲ್ಲ. ಔರಾದ್ ಮತಕ್ಷೇತ್ರದಿಂದ ಜನತಾದಳದ ಅಭ್ಯರ್ಥಿಯಾಗಿ ಚುನಾಯಿತರಾಗಿ ಬಂದಂಥ ಶಾಸಕರು ಈಗ ಭಿನ್ನಮತೀಯರಾಗಿ ಲೋಕಶಕ್ತಿ ಪಕ್ಷದತ್ತ ತಮ್ಮ ಒಲವು ತೋರಿಸಿದ್ದಾರೆ. ಅದೇ ರೀತಿ ಡಾ : ವಿಜಯಕುಮಾರ್ ಖಂಡ್ರೆಯವರು ಪ್ರತಿನಿಧಿಸುತ್ತಿರುವ ಭಾಲ್ಕಿ ಮತಕ್ಷೇತ್ರಕ್ಕೆ 200 ಮನೆಗಳನ್ನು ಹಂಚಿದ್ದು ಹೊರತುಪಡಿಸಿದರೆ ಉಳಿದ ಜಿ.ಓ.ಗಳಲ್ಲಿ ಯಾವುದೇ ಮನೆಗಳನ್ನು ಹಂಚಿರುವುದಿಲ್ಲ. ಹುಲಸೂರು ಬಿ.ಜೆ.ಪಿ.ಯ ಮತಕ್ಷೇತ್ರವಾಗಿದ್ದು ಅಲ್ಲಿಗೆ ಒಂದೂ ಮನೆಯನ್ನು ಕೊಟ್ಟಿರುವುದಿಲ್ಲ. ಅದೇಕೋ ಏನೋ ನನಗೆ ಗೊತ್ತಾಗಿಲ್ಲ. ಇನ್ನು ಬೀದರ್ ಬಿ.ಎಸ್.ಪಿ.ಯ ಮತಕ್ಷೇತ್ರವಾಗಿದ್ದು ಈ ಪಕ್ಷ ಸರ್ಕಾರಕ್ಕೆ ಬೆಂಬಲ ನೀಡಿರುವುದರಿಂದ ಅಲ್ಲಿಗೆ ಹೆಚ್ಚುವರಿಯಾಗಿ 200 ಮನೆಗಳನ್ನು ಕೊಟ್ಟಿದ್ದಾರೆ. ಅಲ್ಲದೆ, 19.11.98ರ ಜಿ.ಓ.ನಲ್ಲಿ 200 ಮನೆಗಳನ್ನು ಕೊಟ್ಟಿದ್ದು ಒಟ್ಟು 400 ಮನೆಗಳು. ಅನಂತರ, ಹುಮ್ನಾಬಾದ್‌ಗೆ ಇದು ಸಚಿವರಾದ ಮಿರಾಜುದ್ದೀನ್ ಪಟೇಲ್‌ರವರ ಮತಕ್ಷೇತ್ರವಾಗಿದ್ದು ಇಲ್ಲಿಗೆ 700 ಮನೆಗಳನ್ನು ಕೊಟ್ಟಿದ್ದಾರೆ. ಮೊದಲನೇ ಜಿ.ಓ.ನಲ್ಲಿ 200, ಎರಡನೇ ಜಿ.ಓ.ನಲ್ಲಿ 200 ಮತ್ತು 16.11.98 ರಂದು ಹೊರಡಿಸಿದ ಜಿ.ಓ.ನಲ್ಲಿ 300, ಒಟ್ಟು 700 ಮನೆಗಳನ್ನು ಕೊಟ್ಟಿದ್ದಾರೆ. ಬಸವಕಲ್ಯಾಣ ಸಚಿವರಾದ ಬಸವರಾಜ ಪಾಟೀಲ್ ಅಟ್ಟೂರ್‌ರವರ ಮತಕ್ಷೇತ್ರವಾಗಿದ್ದು ಅಲ್ಲಿಗೂ ಸಹ 700 ಮನೆಗಳನ್ನು ಕೊಟ್ಟಿದ್ದಾರೆ. ಅಂದರೆ, ಒಂದೇ ಜಿಲ್ಲೆಯಲ್ಲಿ ಒಂದು ಮತಕ್ಷೇತ್ರಕ್ಕೆ 200, ಇನ್ನೊಂದು ಮತಕ್ಷೇತ್ರಕ್ಕೆ 400, ಮತ್ತೊಂದು ಮತಕ್ಷೇತ್ರಕ್ಕೆ 700 ಮನೆಗಳನ್ನು ಹಂಚಿ ಕೆಲವು ಮತಕ್ಷೇತ್ರಗಳಿಗೆ ಯಾವುದೇ ಮನೆ ಹಂಚಿರುವುದಿಲ್ಲ. ಈ ರೀತಿಯಾಗಿ ಮನೆಗಳನ್ನು

ಹಂಚುವ ಮೂಲಕ ನೀವೇನು ರಾಜ್ಯವಾಳುವುದಕ್ಕೆ ಬಂದಿದ್ದೀರೋ ಅಥವಾ ದೇಶದಲ್ಲಿರುವ ಬಡ ಜನರಿಗೆ ಸಹಾಯ ಮಾಡಲು ಅಧಿಕಾರಕ್ಕೆ ಬಂದಿದ್ದೀರೋ? ನಿಮಗೆ ಖುಷಿ ಬಂದಂತೆ ಎಷ್ಟು ಬೇಕೋ ಅಷ್ಟು ಮನೆಗಳನ್ನು ಹಂಚುವ ನೀತಿಯನ್ನು ಇಟ್ಟುಕೊಂಡು ಬಂದಿರುವುದರಬಗ್ಗೆ ಸ್ವಲ್ಪ ಸ್ಪಷ್ಟವಾಗಿ ಹೇಳಬೇಕು.

ಶ್ರೀ ಜಿ.ಟಿ. ದೇವೇಗೌಡ :— ಮಾನ್ಯ ಅಧ್ಯಕ್ಷರೆ, ಅವರ ಸರ್ಕಾರ ಅಧಿಕಾರದಲ್ಲಿದ್ದಂಥ ಸಮಯದಲ್ಲಿ ಯಾವ ರೀತಿ ನೀತಿ-ನಿಯಮಗಳನ್ನು ಅನುಸರಿಸಿದ್ದಾರೆಂಬುದನ್ನೂ ಸಹ ಸಭೆಗೆ ಹೇಳಬೇಕು. ನಿಮ್ಮ ಕಾಲದಲ್ಲಿ ಯಾವ ರೀತಿ ನಿಯಮಗಳನ್ನು ಮಾಡಿದ್ದಿರಿ? ಅದನ್ನು ನಮ್ಮ ಸರ್ಕಾರ ಯಾವ ರೀತಿ ಉಲ್ಲಂಘನೆ ಮಾಡಿದೆಯೆಂಬುದನ್ನೂ ಹೇಳಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಾನು ಎಲ್ಲಾ ಇತಿಹಾಸವನ್ನೂ ಹೇಳುತ್ತೇನೆ. ಅದೇ ರೀತಿ ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ಮತಕ್ಷೇತ್ರಕ್ಕೆ 700 ಮನೆಗಳನ್ನು ಹಂಚಿದ್ದರೆ ಕಮಲಾಪುರ ಬಿ.ಜೆ.ಪಿ. ಪ್ರತಿನಿಧಿಸುತ್ತಿರುವ ಕ್ಷೇತ್ರವಾಗಿದ್ದು ಅಲ್ಲಿಗೆ ಒಂದೂ ಮನೆ ಹಂಚಿಕೆಯಾಗಿರುವುದಿಲ್ಲ. ಆಳಂದ ಕೆ.ಸಿ.ಪಿ.ಯ ಸುಭಾಷ್ ಗುತ್ತೇದಾರರವರು ಪ್ರತಿನಿಧಿಸುತ್ತಿದ್ದು ಅಲ್ಲಿಗೆ ಒಂದು ಸಾವಿರ ಮನೆಗಳನ್ನು ಹಂಚಿದ್ದಾರೆ.

ಶ್ರೀ ಸುಭಾಷ್ ಗುತ್ತೇದಾರ್ :— ಕಮಲಾಪುರ ಮತಕ್ಷೇತ್ರಕ್ಕೆ ಒಂದೂ ಮನೆ ಹಂಚಿಕೆಯಾಗಿಲ್ಲವೆಂದು ಹೇಳುತ್ತಿದ್ದೀರಲ್ಲಾ, ಅಲ್ಲಿಗೆ ಮನೆಗಳನ್ನು ಹಂಚಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಇರಲಿ, ಅದು ಜಿ.ಓ.ನಲ್ಲಿ ಬರಲಿ. ಆಳಂದ ಮತಕ್ಷೇತ್ರಕ್ಕೆ ಮೊದಲನೇ ಜಿ.ಓ.ನಲ್ಲಿ 16.11.98 ರಲ್ಲಿ 200 ಮನೆಗಳು, 19.11.98 ರಲ್ಲಿ 300 ಮನೆಗಳು, ಅನಂತರ 23.11.98ಕ್ಕೆ 500 ಮನೆಗಳು, ಒಟ್ಟು 1,000 ಮನೆಗಳು. ಅದೇ ರೀತಿಯಾಗಿ ಗುಲ್ಬರ್ಗಾಕ್ಕೆ 700 ಮನೆಗಳು, ಶಹಾಬಾದ್‌ಗೆ 700 ಮನೆಗಳು, ಅಫಜಲಪುರ ಮತಕ್ಷೇತ್ರಕ್ಕೆ 1,000 ಮನೆಗಳು, ಇದು ಮಾಲೀಕಯ್ಯ ಗುತ್ತೇದಾರ್‌ರವರು ಪ್ರತಿನಿಧಿಸುತ್ತಿರುವ ಕ್ಷೇತ್ರವಾಗಿದೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಸೇಡಂ ಮತ್ತು ಅಫಜಲ್‌ಪುರಗಳೆಂಬ ಎರಡು ಸಣ್ಣ ತಾಲ್ಲೂಕುಗಳಿವೆ. ಯಾವ ಕ್ರೈಟೆರಿಯಾ ಅಡಾಪ್ಟ್ ಮಾಡಿಕೊಂಡು, ಯಾವ ಕಾನೂನಿನ ಪ್ರಕಾರ ಯಾವ ರೀತಿ ಮನೆಗಳನ್ನು ಹಂಚಿದ್ದಾರೆಂಬುದೇ ಗೊತ್ತಾಗುತ್ತಿಲ್ಲ. ಮನೆಗಳನ್ನು ಹಂಚುವಾಗ ಒಂದೊಂದು ಮತಕ್ಷೇತ್ರಕ್ಕೂ 50,100ರ ಸಂಖ್ಯೆಯಲ್ಲಿ ಹೆಚ್ಚು-ಕಡಿಮೆಯಾಗಿದ್ದರೆ ಒಪ್ಪಿಕೊಳ್ಳೋಣ. ಅಥವಾ ಅಲ್ಲಿ ಏನೋ ಅನಾಹುತವಾಗಿರುವುದರಿಂದ ವಿಶೇಷವಾದ ಕೊಡುಗೆ ಕೊಟ್ಟಿದ್ದಾರೆಂದರೆ ನಾನು ಒಪ್ಪುತ್ತೇನೆ. ಇನ್ನು ಚಿತ್ತಾಪುರ ಮತಕ್ಷೇತ್ರವನ್ನು ಬಾಬುರಾವ್ ಚಿಂಚನಸೂರ್‌ರವರು ಪ್ರತಿನಿಧಿಸುತ್ತಿದ್ದು, ಅವರ ಕ್ಷೇತ್ರಕ್ಕೆ ಕೇವಲ 200 ಮನೆಗಳನ್ನು ಕೊಟ್ಟಿದ್ದಾರೆ. ಇದು ಅತ್ಯಂತ ದೊಡ್ಡ ತಾಲ್ಲೂಕಾಗಿದೆ. ಅನಂತರ ಸೇಡಂ ಕ್ಷೇತ್ರಕ್ಕೆ 500 ಮನೆಗಳು,

ಜೇವರ್ಗಿ ಕ್ಷೇತ್ರಕ್ಕೆ ಕೊನೆಯ ಗಳಿಗೆಯಲ್ಲಿ 500 ಮನೆಗಳನ್ನು ಕೊಟ್ಟಿರುವುದರಿಂದ ಅಲ್ಲಿಗೆ ಒಟ್ಟು 1,000 ಮನೆಗಳನ್ನು ಕೊಟ್ಟಂತಾಯಿತು. ಅದೇ ರೀತಿ ಗುರುಮಿಠಕಲ್ ಕ್ಷೇತ್ರಕ್ಕೆ 300, ಯಾದ್ಗೀರ್ ಕ್ಷೇತ್ರಕ್ಕೆ 600 ಮನೆಗಳು, ಶಹಾಪುರ ಕ್ಷೇತ್ರ ಜನತಾದಳದ ಶಾಸಕರು ಪ್ರತಿನಿಧಿಸುತ್ತಿದ್ದು, ಇಲ್ಲಿಗೆ ಮೊದಲು 200, ನಂತರ 300 ಕೊನೆಯಲ್ಲಿ 300 ಮನೆಗಳು, ಒಟ್ಟು 800 ಮನೆಗಳು, ಇದು ಶರಣಬಸಪ್ಪ ದರ್ಶನಾಪುರ್‌ರವರ ಕ್ಷೇತ್ರವಾಗಿದೆ. ಶೋರಾಪುರ ಕ್ಷೇತ್ರಕ್ಕೆ 900 ಮನೆಗಳು, ದೇವದುರ್ಗಕ್ಕೆ 1,000 ಮನೆಗಳು, ರಾಯಚೂರು ಕ್ಷೇತ್ರಕ್ಕೆ 600 ಮನೆಗಳು, ಕಲ್ಮಲ ಕ್ಷೇತ್ರಕ್ಕೆ 800 ಮನೆಗಳು ಮಾನ್ವಿ ಕ್ಷೇತ್ರಕ್ಕೆ 1,250 ಮನೆಗಳನ್ನು ಕೊಟ್ಟಿದ್ದಾರೆ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ :— ಮಾನ್ಯ ಅಧ್ಯಕ್ಷರೆ, ದೇವದುರ್ಗ ಮತಕ್ಷೇತ್ರಕ್ಕೆ ಅತಿವೃಷ್ಟಿಯಾದಾಗ ಮಂಜೂರು ಮಾಡಿದ 600 ಮನೆಗಳು ಬಾಕಿ ಇದ್ದು ಇನ್ನೂ ಕೊಟ್ಟಿರುವುದಿಲ್ಲ. ಅಲ್ಲಿರುವ ಮನೆಗಳೆಲ್ಲರೂ ಅತಿವೃಷ್ಟಿಯಾದಾಗ ಮುಳುಗಿ ಹೋಗಿ ಭೂಮಿಯೊಳಗೆ ಕುಸಿದು ಹೋಗಿದೆ. ಆ ಕಾರಣಕ್ಕೋಸ್ಕರ ಪುನರ್ವಸತಿ ಕಾರ್ಯಕ್ರಮದಡಿ ಮತ್ತೆ 300 ಮನೆಗಳನ್ನು ಕೊಟ್ಟಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಲಿಂಗಸುಗೂರು ಕ್ಷೇತ್ರಕ್ಕೆ 1,000 ಮನೆಗಳು, ಅದೇ ರೀತಿ ಕುಷ್ಟಗಿ, ಯಲಬುರ್ಗಾ, ಕನಕಗಿರಿ ಮತಕ್ಷೇತ್ರಗಳಿಗೆ ಹಂಚಲಾಗಿರುವ ಮನೆಗಳ ಅಂಕಿ-ಅಂಶಗಳನ್ನು ಗಮನಿಸಿದರೆ ಒಂದೆಡೆ 500 ಮನೆಗಳನ್ನು ಹಂಚಿದ್ದರೆ ಇನ್ನೊಂದೆಡೆ 200 ಮನೆಗಳನ್ನು ಹಂಚಿದ್ದಾರೆ. ಗಂಗಾವತಿ ಕ್ಷೇತ್ರಕ್ಕೆ 200 ಮನೆಗಳನ್ನು ಹಂಚಿದ್ದು, ಇದು ಕಾಂಗ್ರೆಸ್ ಪಕ್ಷದ ಶಾಸಕರು ಪ್ರತಿನಿಧಿಸುತ್ತಿರುವ ಕ್ಷೇತ್ರವಾಗಿದೆ. ಅನಂತರ, ಕನಕಗಿರಿ ಕ್ಷೇತ್ರಕ್ಕೆ 300 ಮನೆಗಳನ್ನು ಹಂಚಿದ್ದರೆ, ಕೊಪ್ಪಳಕ್ಕೆ 700 ಮನೆಗಳು, ಶಿರಗುಪ್ಪ ಕ್ಷೇತ್ರಕ್ಕೆ 700, ಅಲ್ಲಂ ವೀರಭದ್ರಪ್ಪನವರು ಪ್ರತಿನಿಧಿಸುತ್ತಿರುವ ಕ್ಷೇತ್ರವಾದ ಕುರುಗೋಡುವಿಗೆ 200 ಮನೆಗಳನ್ನು ಹಂಚಿದ್ದಾರೆ. ಅದೇ ರೀತಿ ಎಂ.ಪಿ. ಪ್ರಕಾಶ್‌ರವರು ಪ್ರತಿನಿಧಿಸುತ್ತಿರುವ ಕೂಡ್ಲಿಗಿ ಮತಕ್ಷೇತ್ರಕ್ಕೆ....

(ಗೊಂದಲ)

ಅಧ್ಯಕ್ಷರು :— ದೇವೇಗೌಡರೆ, ಮಾನ್ಯ ವಿರೋಧ ಪಕ್ಷದ ನಾಯಕರು ಈ ಸದನದ ನಿಯಮಗಳಿಗನುಗುಣವಾಗಿಯೇ ನನ್ನ ಅನುಮತಿ ಪಡೆದು ತಮ್ಮ ಹಕ್ಕನ್ನು ಊರ್ಜಿತಗೊಳಿಸುವುದಕ್ಕೆ ಈ ವಿಚಾರವನ್ನು ಪ್ರಸ್ತಾಪಿಸುತ್ತಿದ್ದಾರೆ. ಅವರು ಹೇಳಿದ ನಂತರ ಅದಕ್ಕೆ ಉತ್ತರಿಸಲು ಮಂತ್ರಿಗಳು ತಯಾರಾಗಿ ಬಂದಿದ್ದಾರೆ. ಆದರೆ, ನೀವು ನನ್ನ ಅನುಮತಿ ಇಲ್ಲದೆ ಮಾತನಾಡುತ್ತಿದ್ದೀರಿ. ನಿಮ್ಮ ಲೆಕ್ಕಾಚಾರವೇನೆಂಬುದು ಗೊತ್ತಾಗಲಿಲ್ಲ. ಇದೇನು ಸಾಹುಕಾರ ಚೆನ್ನಯ್ಯನವರ ಗರಡಿಯೇ? ಈ ಸದನದಲ್ಲಿ ಸಭಾನಾಯಕರು

ಮಾತನಾಡುವ ಸಮಯದಲ್ಲಿ ಎಷ್ಟು ಗೌರವವನ್ನು ನಾವು ಕೊಡಬೇಕೋ ಅಷ್ಟೇ ಗೌರವವನ್ನು ವಿರೋಧ ಪಕ್ಷದ ನಾಯಕರಿಗೂ ಕೊಡಬೇಕಾಗುತ್ತದೆ. ಹೊಸಬರು ಸಾಕಷ್ಟು ಇದ್ದೀರಿ, ತಾವೆಲ್ಲಾ ಕಲಿತುಕೊಳ್ಳಬೇಕಾಗಿರುವುದು ಸಾಕಷ್ಟು ಇದೆ. ತಾವುಗಳು ತಾಳ್ಮೆ ಇಟ್ಟುಕೊಳ್ಳಬೇಕು, ವಿರೋಧ ಪಕ್ಷದ ನಾಯಕರು ಅವರ ಅಭಿಪ್ರಾಯವನ್ನು ಪೂರ್ಣವಾಗಿ ವ್ಯಕ್ತಪಡಿಸಲಿ, ಆನಂತರ ತಮಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಾನು ಇದನ್ನೇಕೆ ತಮ್ಮ ಗಮನಕ್ಕೆ ತರುತ್ತಿದ್ದೇನೆಂದರೆ, ಹಂಚಿಕೆಯಲ್ಲಿ ಬಹಳ ವ್ಯತ್ಯಾಸಗಳಾಗಿದೆ. ಕೂಡ್ಲಗಿಗೆ 1150, ಹಡಗಲಿಗೆ 800, ವೀರಭದ್ರಪ್ಪನವರ ಮತಕ್ಷೇತ್ರವಾದ ಬಳ್ಳಾರಿಗೆ 200, ಒಟ್ಟಿನಲ್ಲಿ ಈ ಹಂಚಿಕೆಯಲ್ಲಿ ಎಷ್ಟು ತಾರತಮ್ಯವಿದೆ ಎಂಬ ವಿಚಾರವನ್ನು ತಮ್ಮ ಮುಂದೆ ತರುತ್ತಿದ್ದೇನೆ. ಎರಡು ಮೂರು ಕಡೆ ಈ ರೀತಿ ತಾರತಮ್ಯವಾಗಿದ್ದರೆ ಪರವಾಗಿರಲಿಲ್ಲ, ಆದರೆ ವಿರೋಧ ಪಕ್ಷದ ಶಾಸಕರು ಎಲ್ಲೆಲ್ಲಿ ಇದ್ದಾರೆ ಮತ್ತು ಅವರ ಪಕ್ಷದಲ್ಲಿ ಯಾರು ಭಿನ್ನಮತಿಯರಿದ್ದಾರೆ ಅವರೆಲ್ಲರಿಗೂ ಇದೇ ಮಾನದಂಡವನ್ನು ಉಪಯೋಗ ಮಾಡಿದ್ದಾರೆ. ಉದಾಹರಣೆಗೆ, ಚಿತ್ರದುರ್ಗಕ್ಕೆ 750, ಆದರೆ ದಾವಣಗೆರೆಗೆ 200, ಅಂದರೆ ಅವರಿಗೆ ಎಲ್ಲೆಲ್ಲಿ ಬೇಕಾಗಿದೆಯೋ ಅಲ್ಲಿಗೆ ಸಾವಿರ, ಏಳು ನೂರಾ ಐವತ್ತರವರೆಗೆ ಕೊಟ್ಟಿದ್ದಾರೆ. ನಾನು ಬೇಕಾದರೆ ಇದರ ಬಗ್ಗೆ ಪೂರ್ಣವಾಗಿ ಓದಬಹುದು, ಆದರೆ ಅವೆಲ್ಲವನ್ನೂ ಓದಲು ಬಹಳ ಸಮಯಬೇಕಾಗುತ್ತದೆ. ಬೆಂಗಳೂರಿಗೆ ಅರ್ಬನ್ ಏರಿಯಾವೆಂದು ಬೇರೆ ರೀತಿಯಾಗಿ ಅಲಾಟ್‌ಮೆಂಟ್ ಮಾಡಿದ್ದಾರೆ. ಅದರ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ರೂರಲ್ ಏರಿಯಾಗಳಲ್ಲಿ ಆಶ್ರಯ ಯೋಜನೆಯ ಅಡಿಯಲ್ಲಿ ಏನು ಮನೆಗಳನ್ನು ಹಂಚಿಕೆ ಮಾಡಿದ್ದಾರೆ ಅದರ ಎಲ್ಲಾ ಅಂಕಿಅಂಶಗಳು ನನ್ನ ಹತ್ತಿರ ಇದೆ. ಮುನ್ನಾರು ಜಿ.ಓ.ಗಳಲ್ಲಿ ಯಾವ್ಯಾವ ರೀತಿ ಅಲಾಟ್‌ಮಾಡಿದ್ದಾರೆ ಎಂಬುದನ್ನು ಸದನದ ಮುಂದಿಟ್ಟಿದ್ದೇನೆ. ಹಾಸನದ ಗಂಡಸಿಗೆ 200 ಮಾತ್ರ ಕೊಟ್ಟಿದ್ದಾರೆ, ಆದರೆ ಅರಸೀಕೆರೆಗೆ 750, ಬೇಲೂರಿಗೆ 750, ಸಕಲೇಶಪುರಕ್ಕೆ 400, ಅರಕಲಗೂಡಿಗೆ 500 ಹಾಸನಕ್ಕೆ 500 ಕೊಟ್ಟಿದ್ದಾರೆ. ಹೊಳೆನರಸೀಪುರಕ್ಕ 500 ಕೊಟ್ಟಿದ್ದಾರೆ ಅದರ ಜೊತೆಗೆ ಇಂಡಿವಿಜುಯಲ್ ಜಿ.ಓ.ನಲ್ಲಿ ಎಷ್ಟು ಕೊಟ್ಟಿದ್ದಾರೆ ಎಂಬುದನ್ನು ನೋಡಬೇಕು. ಒಬ್ಬೊಬ್ಬರಿಗೆ ಒಂದೊಂದು ಇಂಡಿವಿಜುಯಲ್ ಜಿ.ಓ. ಮಾಡಿ ಕೊಟ್ಟಿದ್ದಾರೆ. ಹಾಗೆಯೇ ದಕ್ಷಿಣಕನ್ನಡ ಜಿಲ್ಲೆಯ ಸೂಳ್ಯಕ್ಕೆ 200 ಪುತ್ತೂರಿಗೆ 500, ವಿಠ್ಲಕ್ಕೆ 200, ಬೆಳ್ತಂಗಡಿಗೆ 500, ಮಂಗಳೂರಿಗೆ 200, ಉಲ್ಲಾಳಕ್ಕೆ 200 ಈ ರೀತಿಯಾಗಿ ಕೊಟ್ಟಿದ್ದಾರೆ. ಬಿಜಾಪುರದ ತಿಕ್ಕೋಟಕ್ಕೆ ಸಾವಿರ, ಮುದ್ದೇಬಿಹಾಳಕ್ಕೆ 800, ಸಿಂಧಗಿ 800 ಕೊಟ್ಟಿದ್ದಾರೆ. ಇಷ್ಟೊಂದು ತಾರತಮ್ಯವೇಕೆ? ಎಲ್ಲಿ ಮನೆಗಳು ಮಳೆಗಾಳಿಯಿಂದ ಬಿದ್ದುಹೋಗಿದೆ, ಎಲ್ಲಿ ಅತಿವೃಷ್ಟಿಯಿಂದ ಮನೆಗಳು ನಾಶವಾಗಿದೆ, ಪ್ರಕೃತಿ ವಿಕೋಪದಿಂದ ಎಲ್ಲಿ ಮನೆಗಳು ನಾಶವಾಗಿದೆ ಅಂಥ ಕಡೆಗಳಿಗೆ

ಸರ್ಕಾರವೇ ವಿಶೇಷವಾದ ಆಜ್ಞೆಯನ್ನು ಹೊರಡಿಸಿ ಮನೆಗಳನ್ನು ಕೊಟ್ಟಿದ್ದರೆ ನಮ್ಮ ಅಭ್ಯಂತರವೇನೂ ಇರುತ್ತಿರಲಿಲ್ಲ ಆದರೆ ಇಲ್ಲಿ ಮಳೆಯಿಂದ ಮನೆಗಳು ಹಾನಿಯಾಗಿರುವವರಿಗೆ, ಎಲ್ಲಿ ಮನೆಗಳ ಅವಶ್ಯಕತೆ ಇದೆ ಅವರಿಗೆ ಮತ್ತು ಎಲ್ಲಾ ಮತಕ್ಷೇತ್ರಕ್ಕೆ ಸರಿಸಮಾನವಾಗಿ ಮನೆಗಳನ್ನು ಹಂಚಬೇಕು ಎಂಬ ನೀತಿಯನ್ನು ಅಳವಡಿಸಿಕೊಳ್ಳದೆ ತಮಗೆ ಇಷ್ಟಬಂದಂತೆ ಹಂಚಲು ಜನರು ಅಧಿಕಾರವನ್ನು ಕೊಟ್ಟಿದ್ದಾರೆಯೇ? ತಮ್ಮ ಸರ್ಕಾರ ಆ ರೀತಿ ಮಾಡುವುದಕ್ಕಾಗಿ ಇದೆಯೇ? ನಮಗೆ ಕಾನೂನುಬಾಹಿರವಾಗಿಯೇನು ಅಧಿಕಾರ ಬಂದಿಲ್ಲವೆಂದು ಕೆಲವರು ಹೇಳುತ್ತಿದ್ದರು, ಆದರೆ ಕಾನೂನು, ರೂಲ್ಸ್ ಇಲ್ಲದಿದ್ದರೂ ಸಹ ಒಂದು ನೀತಿ, ನಿಯಮವನ್ನು ಹಾಕಿಕೊಂಡು ನಾವು ಕೆಲಸ ಮಾಡಬೇಕಾಗುತ್ತದೆ, ಎಲ್ಲೋ ಒಂದೆರಡು ಮತಕ್ಷೇತ್ರಗಳಿಗೆ ವ್ಯತ್ಯಾಸವಾಗಿದ್ದರೆ ಪರವಾಗಿರಲಿಲ್ಲ, ಆದರೆ ಹತ್ತಾರು ಮತಕ್ಷೇತ್ರಕ್ಕೆ ಈ ರೀತಿಯಾಗಿದೆ. ಹತ್ತು ಹದಿನೈದು ಮತಕ್ಷೇತ್ರಕ್ಕೆ ಸಾವಿರ ಮನೆಗಳು, ಕೆಲವು ಮತಕ್ಷೇತ್ರಕ್ಕೆ ಎಂಟುನೂರು ಮನೆಗಳು, ಉಳಿದ ಸುಮಾರು ಎಂಭತ್ತು ಮತಕ್ಷೇತ್ರಗಳಿಗೆ ಕೇವಲ ಇನ್ನೂರು ಮನೆಗಳನ್ನು ಕೊಟ್ಟಿದ್ದಾರೆಂದರೆ ನಾವು ಏನು ಹೇಳಬೇಕು? ತಮಗೆ ಅಧಿಕಾರವನ್ನು ಕೊಟ್ಟರೆ ನ್ಯಾಯಯುತವಾಗಿ ನಡೆದುಕೊಳ್ಳುತ್ತೀರಿ ಎಂದು ಹೇಳೋಣವೆ? ಈ ರೀತಿ ಪಕ್ಷಪಾತದಿಂದ ನಡೆದುಕೊಳ್ಳತಕ್ಕವರು ಅಧಿಕಾರದಲ್ಲಿ ಇರಬಾರದು, ತಾವು ರಾಜೀನಾಮೆ ಕೊಟ್ಟುಹೋಗಿ ಎಂದು ಈ ಸದನದಲ್ಲಿ ಎಷ್ಟು ಸಲ ತಮಗೆ ಹೇಳುವುದು? ತಾವು ಅಸಮತೋಲನ ಮಾಡುತ್ತಿದ್ದೀರೆಂದು ಹೋದ ಸಲದ ಅಧಿವೇಶನದಲ್ಲೇ ಎಲ್ಲಾ ಶಾಸಕರು ಇಲ್ಲಿ ಧರಣಿ ಮಾಡಿದ ಮೇಲೆ ತಮ್ಮ ಕೊಠಡಿಯಲ್ಲಿ ಸಭೆಯಾಗಿ ಎಲ್ಲಾ ಸರಿಯಾಯಿತು, ಅಂದರೆ ಪ್ರತಿಸಲ ಧರಣಿ ಮಾಡುವುದು, ಒಬ್ಬರಿಗೊಬ್ಬರು ಬೈಯುವುದು, ಕಚ್ಚಾಡುವುದು ಅನಂತರ ನೀವು ಸರಿಪಡಿಸುವುದೆ? ತಾವು ನ್ಯಾಯವಾಗಿ ನಡೆದುಕೊಳ್ಳಬೇಕು, ನೀತಿನಿಯಮಗಳನ್ನು ಇಟ್ಟುಕೊಳ್ಳಬೇಕು, ಅದರ ಪ್ರಕಾರ ತಾವು ಮುಂದುವರೆಯಬೇಕು ಎಂದು ಜನರು ತಮಗೆ ಅಧಿಕಾರವನ್ನು ಕೊಟ್ಟರೆ ತಾವು ಇಂಥ ಚಿಕ್ಕವಯಸ್ಸಿನಲ್ಲಿ ಅಧಿಕಾರವನ್ನು ಈ ರೀತಿಯಾಗಿ ದುರ್ಬಳತೆ ಮಾಡಿದರೆ ಹೇಗೆ? ತಾವು ಯಾರಿಗೆ ಸಮಾಧಾನಮಾಡಲು ಈ ರೀತಿ ಮಾಡಿದಿರಿ? ಇದರಿಂದ ತಾವು ಮಾಡಿದ ಸಾಧನೆಯಾದರು ಏನು? ಯಾವ ಪುರುಷಾರ್ಥಕ್ಕೆ ಈ ರೀತಿ ಮಾಡಿದಿರಿ? ಆದ್ದರಿಂದ ತಾವು ಈ ಎಲ್ಲಾ ಜಿ.ಓ.ಗಳನ್ನು ಸಂಪೂರ್ಣವಾಗಿ ವಾಪಸ್ ಪಡೆದುಕೊಳ್ಳಬೇಕು. ಇದನ್ನು ಮತ್ತೆ ಪರಿಶೀಲನೆ ಮಾಡಿ ಎಲ್ಲರಿಗೂ ಸರಿಸಮಾನವಾಗಿ ಹಂಚಬೇಕು. ಎಲ್ಲಿ ಪ್ರಕೃತಿ ವಿಕೋಪದಿಂದ ಮನೆಗಳು ಬಿದ್ದುಹೋಗಿವೆ, ಎಲ್ಲಿ ಮನೆಗಳು ಬಿದ್ದುಹೋಗಿವೆ ಅಂಥ ಕಡೆಗಳಲ್ಲಿ ವಿಶೇಷವಾದ ಗಮನವನ್ನು ಕೊಟ್ಟು ಹಣವನ್ನು ಬಿಡುಗಡೆ ಮಾಡಿ. ಅದಕ್ಕೆ ನಮ್ಮಗಳ ಅಭ್ಯಂತರವಿಲ್ಲ. ಆದರೆ ತಾವು ಪ್ರತಿಯೊಂದು ಮತಕ್ಷೇತ್ರಕ್ಕೂ ಸರಿಸಮಾನವಾಗಿ ಹಂಚಿ ಈ ಕೆಲಸವನ್ನು ಮಾಡಿದ್ದರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಇಲ್ಲದಿದ್ದರೆ

ನಾವು ಈ ವಿಚಾರವನ್ನು ಇಲ್ಲಿಗೇ ಬಿಡದೆ ಚರ್ಚೆ ಮುಂದುವರಿಸಬೇಕಾಗುತ್ತದೆ. ತಾವು ಈಗಾಗಲೇ ಹೊರಡಿಸಿರುವ ಜಿ.ಓ.ಗಳನ್ನು ರ್‍ಯಾಟಿಫೈ ಮಾಡಿ ಎಲ್ಲಾ ಶಾಸಕರಿಗೆ ಸರಿಸಮಾನವಾಗಿ ಹಂಚತಕ್ಕ ಕೆಲಸವನ್ನು ಮಾಡಿದಾಗ ಮಾತ್ರ ನಾವು ಸಮಾಧಾನವನ್ನು ಪಡೆದುಕೊಳ್ಳಬಹುದು. ಅದನ್ನು ಬಿಟ್ಟು ತಾವು ಹಠ ಹಿಡಿದು ಇದನ್ನೇ ಇಟ್ಟುಕೊಳ್ಳುವುದಾಗಿದ್ದರೆ, ನಾವು ಏನು ಮಾಡಬೇಕು ಸದನದ ಕಾರ್ಯಕಲಾಪಗಳಿಗೆ ಅಡ್ಡಿ ಮಾಡಬೇಕು ಎಂಬ ಉದ್ದೇಶ ನಮಗಿಲ್ಲ, ಆ ಕೆಲಸವನ್ನು ನಾವು ಮಾಡುವುದೂ ಇಲ್ಲ. ನಾವು ಇದುವರೆಗೆ ತಮಗೆ ಸಹಕಾರ ನೀಡಿಕೊಂಡು ಬಂದಿದ್ದೇವೆ, ಈಗಲೂ ಸಹಕಾರ ನೀಡುತ್ತೇವೆ ಎಂದು ಭರವಸೆಯನ್ನು ಕೊಟ್ಟು ಈ ಮಾತನ್ನು ಹೇಳುತ್ತೇನೆ. ಆದ್ದರಿಂದ ತಾವು ದಯವಿಟ್ಟು ಇದರ ಬಗ್ಗೆ ಸಮಾಧಾನಕರವಾದ ಉತ್ತರವನ್ನು ಹೇಳಬೇಕು. ಅದನ್ನು ಬಿಟ್ಟು ನನಗೆ ಅಧಿಕಾರವಿದೆ, ನಾವು ಕೊಟ್ಟಿದ್ದನ್ನು ಒಪ್ಪಿಕೊಳ್ಳಿ, ಇಲ್ಲದಿದ್ದರೆ ನಿಮಗೆ ಏನು ಬೇಕಾದರೂ ಮಾಡಿ ಎಂದರೆ ನಮಗೆ ಬೇರೆ ದಾರಿಗಳಿದೆ. ಇಡೀ ಸದನ ಇದೇ ಸರಿಯೆಂದು ಒಪ್ಪಿಕೊಂಡರೆ ಬೇರೆ ವಿಚಾರ. ಆದರೆ ಇಲ್ಲಿ ವಿರೋಧ ಪಕ್ಷದವರು, ಆಡಳಿತ ಪಕ್ಷದವರು ಇಬ್ಬರೂ ಇದ್ದಾರೆ. ಒಟ್ಟಿನಲ್ಲಿ ಹಂಚಿಕೆಯಲ್ಲಿ ಅನ್ಯಾಯಮಾತ್ರ ಆಗಿದೆ. ಸಂಪೂರ್ಣವಾದ ವಿವೇಚನೆಯಿಲ್ಲದೆ ಅವರು ಈ ಕೆಲಸವನ್ನು ಮಾಡಿದ್ದಾರೆ. ಆ ಸ್ಥಾನದಲ್ಲಿ ಕುಳಿತು ನ್ಯಾಯಯುತವಾಗಿ ಹೇಗೆ ನಡೆದುಕೊಳ್ಳಬೇಕಾಗಿತ್ತು ಆ ಕೆಲಸವನ್ನು ಅವರು ಮಾಡಿಲ್ಲ. ಆದ್ದರಿಂದ ಆ ಸ್ಥಾನದಲ್ಲಿ ಅವರು ಇರಲಿ ಅರ್ಹರಲ್ಲವೆಂಬ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ. ನಾನು ಎಂದೂ ಅವರ ಬಗ್ಗೆ ಈ ರೀತಿ ಹೇಳಿರಲಿಲ್ಲ. ಅವರ ಮೇಲೆ ಅನೇಕ ಸಲ ಕೆಲವರು ಗೊತ್ತಿಲ್ಲದೆ ಟೀಕೆ ಮಾಡಿದಾಗ ನಾನೇ ಅವರ ರಕ್ಷಣೆಗೆ ಬಂದಿದ್ದೇನೆ. ಆದರೆ ಅವರ ಈ ಕೆಲಸವನ್ನು ನೋಡಿದಾಗ ಅವರ ಕೃತಿ ನೋಡಿದಾಗ ನಾನು ಹೇಳಬೇಕಾಗುತ್ತದೆ. intentionally and purposely he has done to favour certain people, and to suppress certain people and to disregard certain MLAS, ಎಂದು ನಾನು ಹೇಳಬೇಕಾಗುತ್ತದೆ. ಎಲ್ಲೆಲ್ಲಿ ಇನ್ನೂರು ಮನೆಗಳನ್ನು ಕೊಟ್ಟಿದ್ದೀರಿ ಅಲ್ಲಿ ಬಡವರು ಇಲ್ಲವೆ? ಅಲ್ಲಿ ಸಂಪೂರ್ಣವಾಗಿ ಶ್ರೀಮಂತರೇ ಇದ್ದಾರಾ? ತಾವು ಹಂಚಿಕೆಯಲ್ಲಿ ಏನು ಆಧಾರ ಇಟ್ಟುಕೊಂಡಿದ್ದೀರಿ? ಇದನ್ನು ಸರಿಪಡಿಸಬೇಕು. ಇದಕ್ಕೆ ಸಮಾಧಾನಕರವಾದ ಉತ್ತರವನ್ನು ಸರ್ಕಾರದಿಂದ ಬಯಸುತ್ತೇನೆ. ಇದನ್ನು ಸರಿಪಡಿಸದಿದ್ದರೆ ಮುಂದಿನ ಕ್ರಮವನ್ನು ಎಲ್ಲಾ ಶಾಸಕರು ಇದ್ದಾರೆ ಅವರು ತೆಗೆದುಕೊಳ್ಳುತ್ತಾರೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಬಿ. ಶಿವರಾಂ (ಗಂಡಸಿ) :— ಸನ್ಮಾನ್ಯ ಅಧ್ಯಕ್ಷರೇ, ಈ ಆಶ್ರಯ ಯೋಜನೆ ಅಡಿಯಲ್ಲಿ ಮನೆಗಳ ಹಂಚಿಕೆಯಲ್ಲಿ ತಾರತಮ್ಯವಾಗಿರುವ ಬಗ್ಗೆ ಈಗಾಗಲೇ ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ. ಪ್ರಾರಂಭದಲ್ಲಿ ಈ

ಒಂದು ತಾರತಮ್ಯದ ಬಗ್ಗೆ ನಾನು ಒಂದು ಪತ್ರಿಕಾ ಹೇಳಿಕೆಯೊಂದನ್ನು ನೀಡಿದೆ. ದೂರದರ್ಶನದಲ್ಲೂ ಕೂಡ ಅದು ಬಂತು. ಇದಾದ ನಂತರ ಆಶ್ರಯ ಯೋಜನೆಯಡಿ ಮನೆಗಳ ಹಂಚಿಕೆಯಲ್ಲಿನ ತಾರತಮ್ಯದ ಬಗ್ಗೆ ಮಾನ್ಯ ಸಿಂಧ್ಯಾರವರು ಮತ್ತು ಮಾನ್ಯ ಬೈರೇಗೌಡರೂ ಕೂಡ ಸಚಿವ ಸಂಪುಟದ ಸಭೆಯಲ್ಲಿ ಮಾತನಾಡಿದರು ಎಂಬುದು ಪತ್ರಿಕೆಗಳಲ್ಲಿ ಪ್ರಕಟವಾಯಿತು. ಅದು ನಿಜವೋ ಸುಳ್ಳೋ ನನಗೆ ಗೊತ್ತಿಲ್ಲ. ಇದಾದ ನಂತರ ಮಾನ್ಯ ಲೋಕಸಭಾ ಸದಸ್ಯರಾದ ಜಾಲಪ್ಪನವರೂ ಕೂಡ....

ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :— ಮಾನ್ಯ ಅಧ್ಯಕ್ಷರೇ, ಪತ್ರಿಕೆಗಳಲ್ಲಿ ಏನೇನೋ ಸುದ್ದಿಗಳು ಬರುತ್ತಿರುತ್ತವೆ. ಅದೆಲ್ಲವನ್ನೂ ಕೂಡ ಮಾನ್ಯ ಸದಸ್ಯರು ಆಧಾರವಾಗಿಟ್ಟುಕೊಂಡು ಇಲ್ಲಿ ಮಾತನಾಡುವುದಾದರೆ ಅದು ಸಮಂಜಸವೆನಿಸಲಾರದು. ಮಾನ್ಯ ಸದಸ್ಯರು ನನ್ನ ಹೆಸರನ್ನು ಉಲ್ಲೇಖಿಸಿದ್ದರಿಂದ ನಾನು ಈ ಮಾತು ಹೇಳಬೇಕಾಯಿತು.

ಶ್ರೀ ಬಿ. ಶಿವರಾಂ :— ನಾನು ಮಾನ್ಯ ಬೈರೇಗೌಡರ ಹೆಸರು ಪತ್ರಿಕೆಗಳಲ್ಲಿ ಬಂತು ಎಂದು ಹೇಳಿದೆನೇ ವಿನಃ ಅವರು ಏನು ಮಾತನಾಡಿದರು ಎಂಬುದನ್ನು ನಾನು ಹೇಳಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಸದಸ್ಯರು ಮಾನ್ಯ ಬೈರೇಗೌಡರ ವಿರುದ್ಧ ಯಾವ ರೀತಿಯಾದ ಆರೋಪವನ್ನೂ ಕೂಡ ಮಾಡಲಿಲ್ಲ. ಮನೆಗಳ ಹಂಚಿಕೆಯಲ್ಲಿ ತಾರತಮ್ಯವಾಗಿರುವುದು ಮಾನ್ಯ ಬೈರೇಗೌಡರಿಗೂ ಕೂಡ ಮನವರಿಕೆಯಾದ ಮೇಲೆ ಅವರು ಈ ಬಗ್ಗೆ ಸಚಿವ ಸಂಪುಟದ ಸಭೆಯಲ್ಲಿ ಪ್ರಸ್ತಾಪಿಸಿ ಮಾನ್ಯ ರೇವಣ್ಣನವರನ್ನು ತರಾಟೆಗೆ ತೆಗೆದುಕೊಂಡರು ಎಂದು ಪತ್ರಿಕೆಗಳಲ್ಲಿ ಬಂದಿರುವ ಬಗ್ಗೆ ಮಾನ್ಯ ಸದಸ್ಯರು ಇಲ್ಲಿ ಹೇಳಿದರು. ಮಾನ್ಯ ಬೈರೇಗೌಡರು ಸಚಿವ ಸಂಪುಟದ ಸಭೆಯಲ್ಲಿ ಆ ರೀತಿ ಮಾತನಾಡಿದ್ದಾರೋ ಇಲ್ಲವೋ ಎಂಬುದನ್ನು ಇಲ್ಲಿ ಆತ್ಮಸಾಕ್ಷಿಯಾಗಿ ಹೇಳಬೇಕು.

ಶ್ರೀ ಸಿ. ಬೈರೇಗೌಡ :— ಮಾನ್ಯ ಅಧ್ಯಕ್ಷರೇ, ಸಚಿವ ಸಂಪುಟದ ಸಭೆಯಲ್ಲಿ ನಾನಂತೂ ಈ ವಿಚಾರವನ್ನು ಪ್ರಸ್ತಾಪ ಮಾಡಲಿಲ್ಲ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜ್ :— ಮಾನ್ಯ ಅಧ್ಯಕ್ಷರೇ, ಮಾನ್ಯ ಬೈರೇಗೌಡರು ಸತ್ಯವನ್ನೇ ಹೇಳುತ್ತಿದ್ದಾರೆ. ಯಾರು ತಾರತಮ್ಯ ಮಾಡಿದ್ದಾರೆ ಎಂಬುದಾದರೂ ಅವರಿಗೆ ಗೊತ್ತಿದೆಯಲ್ಲವೇ?

ಶ್ರೀ ಡಿ.ಆರ್. ಪಾಟೀಲ್ :— ಮಾನ್ಯ ಅಧ್ಯಕ್ಷರೇ, ಮಾನ್ಯ ಬೈರೇಗೌಡರು ಮನೆಗಳ ಹಂಚಿಕೆಯಲ್ಲಿ ಸರ್ಕಾರ ತಾರತಮ್ಯ ಮಾಡಿರುವುದು ಯೋಗ್ಯವೋ ಅಯೋಗ್ಯವೋ ಎಂಬುದನ್ನಷ್ಟೇ ಹೇಳಲಿ.

ಶ್ರೀಅರಗ ಜ್ಞಾನೇಂದ್ರ :— ಒಬ್ಬ ಮಂತ್ರಿಗಳಾಗಿ ಮಾನ್ಯ ಬೈರೇಗೌಡರು ಈ ಪ್ರಶ್ನೆಗೆ ಉತ್ತರ ನೀಡಲಿ.

ಶ್ರೀ ಸಿ. ಬೈರೇಗೌಡ :— ಅದಕ್ಕೆ ಸಂಬಂಧಪಟ್ಟಂತಹ ಮಾನ್ಯ ಮಂತ್ರಿಗಳು ಉತ್ತರಕೊಡುತ್ತಾರೆ. ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಸದನದಲ್ಲಿ ಇಲ್ಲದೇ ಇದ್ದಾಗ ಬೇಕಾದರೆ ನಾನು ಉತ್ತರ ಕೊಡುತ್ತಿದ್ದೆ. ಆದರೆ ಅವರು ಸದನದಲ್ಲಿ ಇರುವಾಗ ನಾನು ಈ ಬಗ್ಗೆ ಉತ್ತರ ಕೊಡುವುದು ಸರಿಯಲ್ಲ.

ಶ್ರೀ ಹೆಚ್.ಡಿ. ರೇವಣ್ಣ :— ಮಾನ್ಯ ಅಧ್ಯಕ್ಷರೇ, ಮನೆಗಳ ಹಂಚಿಕೆಯಲ್ಲಿ ತಾರತಮ್ಯ ಆಗಿದೆಯೋ ಇಲ್ಲವೋ ಎಂಬುದನ್ನು ನಾನು ಉತ್ತರ ಕೊಡುವ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಬಿ. ಶಿವರಾಂ :— ಲೋಕಸಭಾ ಸದಸ್ಯರಾದ ಮಾನ್ಯ ಜಾಲಪ್ಪನವರೂ ಕೂಡ ಈ ಮನೆಗಳ ಹಂಚಿಕೆಯಲ್ಲಿನ ತಾರತಮ್ಯದ ಬಗ್ಗೆ ಪ್ರಸ್ತಾಪ ಮಾಡಿದರು. ನಿನ್ನೆಯ 'ಪ್ರಜಾವಾಣಿ' ದಿನಪತ್ರಿಕೆಯಲ್ಲಂತೂ ಇದರ ಬಗ್ಗೆ ಸರ್ಕಾರಿ ಆದೇಶ ಸಂಖ್ಯೆಗಳಿಂದ ಹಿಡಿದು ಎಲ್ಲಾ ರೀತಿಯ ಪೂರ್ಣ ಮಾಹಿತಿಯ ಲೇಖನ ಪ್ರಕಟವಾಗಿದೆ. ಇದರಿಂದ ಈ ವಿಷಯ ಬಹುಶಃ ಎಲ್ಲರಿಗೂ ಗೊತ್ತಾಗಿದೆ. ಮಾನ್ಯ ಅಧ್ಯಕ್ಷರೇ ನಾನು ಇದರ ಬಗ್ಗೆ 2-3 ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ ಇಚ್ಛಿಸುತ್ತೇನೆ. ಸರ್ಕಾರ ಮೂಲಭೂತವಾಗಿ ಮನೆಗಳನ್ನು ಹಂಚಿಕೆ ಮಾಡುವುದಕ್ಕೆ ಏನನ್ನು ಆಧಾರವಾಗಿಟ್ಟುಕೊಂಡಿದೆ? ವಸತಿಹೀನರ ಬಗ್ಗೆ ಸರ್ವೆ ನಡೆದಿದೆ ಎಂಬ ವಿಚಾರವನ್ನು ಸರ್ಕಾರಿ ಆದೇಶದಲ್ಲಿ ಸ್ಪಷ್ಟವಾಗಿ ನಮೂದಿಸಲಾಗಿದೆ. ಇಡೀ ರಾಜ್ಯದಲ್ಲಿ 1996-97ನೇ ಜೂನ್ ತಿಂಗಳಿನಲ್ಲಿ ನಡೆಸಿದ ಸರ್ವೆ ಪ್ರಕಾರ 7,81,861 ಮನೆರಹಿತರನ್ನು ಗುರುತಿಸಲಾಗಿದೆ ಎಂದು ಸರ್ಕಾರ ಹೇಳಿದೆ. ಬಹುಶಃ ಈ ಅಂಕಿ ಅಂಶಗಳನ್ನು ನೋಡಿದರೆ, ರಾಜ್ಯದಲ್ಲಿ ಯಾವ್ಯಾವ ತಾಲ್ಲೂಕಿನಲ್ಲಿ ಅಥವಾ ವಿಧಾನ ಸಭಾ ಕ್ಷೇತ್ರದಲ್ಲಿ ಎಷ್ಟೆಷ್ಟು ಜನ ಮನೆರಹಿತರು ಇದ್ದಾರೆ ಎಂಬ ಅಂಕಿ-ಅಂಶಗಳು ಸರ್ಕಾರದ ಮುಂದಿವೆ ಎಂದು ನಾವು ಭಾವಿಸಬಹುದಾಗಿದೆ. ಆ ಸರ್ವೆ ಪ್ರಕಾರ, ಒಂದು ಕ್ಷೇತ್ರದಲ್ಲಿ ಕಡಿಮೆ ಇರಬಹುದು, ಮತ್ತೊಂದು ಕ್ಷೇತ್ರದಲ್ಲಿ ಜಾಸ್ತಿ ಇರಬಹುದು; ಮನೆಗಳನ್ನು ಹಂಚಿಕೆ ಮಾಡಿದ್ದರೆ, ನಾವು ಆ ಬಗ್ಗೆ ಉಲ್ಲೇಖಿಸಿ ಈ ರಾಜ್ಯದಲ್ಲಿ ದುರ್ಬಲವರ್ಗದವರ ಬಗ್ಗೆ ಸರ್ಕಾರಕ್ಕೆ ಬಹಳ ಕಳಕಳಿ ಇರುವುದರಿಂದ ಇಷ್ಟೊಂದು ಮನೆಗಳನ್ನು ಮಂಜೂರಾತಿ ಮಾಡಿದ್ದಾರೆ ಎಂದು

ಸಂತೋಷಪಡಬಹುದಾಗಿತ್ತು. ಕೇವಲ ಸರ್ಕಾರಿ ಆದೇಶದಲ್ಲಿ ಮಾತ್ರ ಸರ್ವೆ ಮಾಡಿದ್ದರ ಬಗ್ಗೆ ಉಲ್ಲೇಖ ಇದೆಯೇ ಹೊರತು, ಮನೆಗಳ ಹಂಚಿಕೆಯಲ್ಲಿ ಯಾವ ರೀತಿಯಾದಂತಹ ರೀತಿ ನೀತಿಗಳೂ ಕೂಡ ಇಲ್ಲ. ಈ ಮನೆಗಳ ಹಂಚಿಕೆಯ ಬಗ್ಗೆ ನನಗೆ ಈ ಸಂದರ್ಭದಲ್ಲಿ ಸರ್ಕಾರದಿಂದ ಒಂದು ಸ್ಪಷ್ಟೀಕರಣ ಬೇಕಾಗಿದೆ. ಮನೆಗಳನ್ನು ತಾಲ್ಲೂಕುವಾರು ಹಂಚಿಕೆ ಮಾಡಲಾಗುತ್ತಿದೆಯೋ? ಕ್ಷೇತ್ರವಾರು ಹಂಚಿಕೆ ಮಾಡಲಾಗುತ್ತಿದೆಯೋ? ಹೋಬಳಿವಾರು ಹಂಚಿಕೆ ಮಾಡಲಾಗುತ್ತಿದೆಯೋ ಅಥವಾ ಗ್ರಾಮ ಪಂಚಾಯಿತಿವಾರು ಹಂಚಿಕೆ ಮಾಡಲಾಗುತ್ತಿದೆಯೋ ಎಂಬ ಬಗ್ಗೆ ಸರ್ಕಾರದಿಂದ ನನಗೆ ಸ್ಪಷ್ಟೀಕರಣ ಬೇಕಾಗಿದೆ. ಮಾನ್ಯ ಅಧ್ಯಕ್ಷರೇ, ಒಂದು ವಿಚಾರವಂತೂ ನಿಜ. ಈಗ ತಾಲ್ಲೂಕಿಗೆ ಒಂದರಂತೆ ಆಶ್ರಯ ಸಮಿತಿ ಇದೆ. ಈ ಸಮಿತಿಯನ್ನು ಕ್ಷೇತ್ರವಾರು ಮಾಡಿ ಎಂದು ನಾವು ಹಿಂದೆ ಒತ್ತಾಯಮಾಡಿದ್ದೆವು. ಏಕೆಂದರೆ ಬಹಳ ಜನ ನನ್ನಂತಹ ನತದೃಷ್ಟರಾದ ಶಾಸಕರು ಇದ್ದಾರೆ. ನಮ್ಮ ಪರಿಸ್ಥಿತಿ ಏನಾಗಿದೆ ಎಂದರೆ, ನಮಗೆ ತಾಲ್ಲೂಕು ಕೇಂದ್ರ ಎಂಬುದು ಇಲ್ಲ. ನಮ್ಮ ಕ್ಷೇತ್ರದ ವ್ಯಾಪ್ತಿ ಮೂರು ತಾಲ್ಲೂಕಿನ ಹೋಬಳಿಗಳಲ್ಲಿ ಬರುತ್ತದೆ. ಇಂತಹ ಪರಿಸ್ಥಿತಿಯಲ್ಲಿ 'ಆರಾಧನಾ ಸಮಿತಿ' ಗಳಂತೆ 'ಆಶ್ರಯ ಸಮಿತಿ'ಗಳನ್ನೂ ಕೂಡ ಕ್ಷೇತ್ರವಾರು ರಚಿಸಬೇಕೆಂದು ನಾವು ಎಷ್ಟೇ ಮನವಿ ಮಾಡಿಕೊಂಡರೂ ಕೂಡ ಆಶ್ರಯ ಸಮಿತಿಗಳು ತಾಲ್ಲೂಕುವಾರು ಆಗಿಯೇ ಮುಂದುವರೆಸಲಾಗಿದೆ. ಅದರ ಪ್ರಕಾರವೇ ಈಗ ತಾಲ್ಲೂಕಿನ ವ್ಯಾಪ್ತಿಗೆ ಯಾರ ಕ್ಷೇತ್ರ ವಿಸ್ತಾರ ಹೆಚ್ಚು ಬರುತ್ತದೆಯೋ ಅವರು ಸಮಿತಿಯ ಶಾಸಕರಾಗಿ, ಉಳಿದ ಶಾಸಕರುಗಳನ್ನು ಸಮಿತಿಯ ಸಹ ಸದಸ್ಯರನ್ನಾಗಿ ಮಾಡಿಕೊಂಡು ಸಮಿತಿ ಕಾರ್ಯನಿರ್ವಹಿಸುತ್ತಿದೆ. ತಾಲ್ಲೂಕುವಾರು ಆಶ್ರಯ ಸಮಿತಿ ಇರುವಾಗ ಮನೆಗಳನ್ನು ತಾಲ್ಲೂಕುವಾರು ಹಂಚತಕ್ಕ ವ್ಯವಸ್ಥೆ ಆಗಬೇಕೇ? ಅಥವಾ ಹೋಬಳಿ, ಕ್ಷೇತ್ರ, ಗ್ರಾಮದ ಮೂಲಕ ಆಗಬೇಕೇ ಎಂಬುದು ನನ್ನ ಎರಡನೆಯ ಮೂಲಭೂತವಾದಂತಹ ಪ್ರಶ್ನೆಯಾಗಿದೆ. ಈ ಎಲ್ಲಾ ರೀತಿಯ ಗೊಂದಲ ಸರ್ಕಾರದ ಆದೇಶದಿಂದಲೇ ಸೃಷ್ಟಿಯಾಗಿದೆ. ಮೊದಲಿನ ಎರಡು ಸರ್ಕಾರಿ ಆದೇಶಗಳಲ್ಲಿ ಮನೆಗಳನ್ನು ತಾಲ್ಲೂಕುವಾರು ಹಂಚಿಕೆ ಮಾಡಲಾಗಿದೆ. ದಿನಾಂಕ 16.11.98, 19.11.98 ಮತ್ತು 7.4.98ರ ಸರ್ಕಾರಿ ಆದೇಶಗಳಲ್ಲಿ ಕ್ರಮವಾಗಿ 200 ಮತ್ತು 150 ಮನೆಗಳನ್ನು ತಾಲ್ಲೂಕುವಾರು ಹಂಚಿಕೆ ಮಾಡಲಾಗಿದೆ. ನಂತರ ಬಂದ ಕೆಲವು ಸರ್ಕಾರಿ ಆದೇಶಗಳಲ್ಲಿ ಕ್ಷೇತ್ರವಾರು ಮನೆಗಳ ಹಂಚಿಕೆ ಮಾಡಲಾಗಿದೆ. ಇನ್ನೂ ಕೆಲವು ಸರ್ಕಾರಿ ಆದೇಶಗಳಲ್ಲಿ ಹೋಬಳಿ ಮಟ್ಟದಲ್ಲಿ ಮತ್ತು ಗ್ರಾಮ ಪಂಚಾಯಿತಿಗಳ ಮಟ್ಟದಲ್ಲಿ ಮನೆಗಳ ಹಂಚಿಕೆ ಮಾಡಲಾಗಿದೆ. ಆಶ್ರಯ ಸಮಿತಿಗಳು ತಾಲ್ಲೂಕು ಮಟ್ಟದಲ್ಲಿ ಇರುವುದರಿಂದ ತಾಲ್ಲೂಕಿಗೆ ಇಂತಿಷ್ಟು ಮನೆಗಳು ಎಂದು ಕೊಟ್ಟು ಅಲ್ಲಿ ಮನೆಗಳನ್ನು ಹಂಚಿಕೆ ಮಾಡತಕ್ಕ ವ್ಯವಸ್ಥೆ ಇದೆಯೇ, ಇಲ್ಲವೇ ಎಂಬ ಪ್ರಶ್ನೆಗೆ ನನಗೆ ಮಾನ್ಯ ಸಚಿವರಿಂದ ಉತ್ತರ ಬೇಕಾಗಿದೆ. ಮನೆಗಳನ್ನು ತಾಲ್ಲೂಕು ಮಟ್ಟದಲ್ಲಾಗಲೀ, ಕ್ಷೇತ್ರ ಮಟ್ಟದಲ್ಲಾಗಲೀ ಅಥವಾ ಹೋಬಳಿ

ಮಟ್ಟದಲ್ಲಾಗಲೀ ಹಂಚಿಕೆ ಮಾಡುವಂತಹ ಅಧಿಕಾರ ತಾಲ್ಲೂಕು ಮಟ್ಟದಲ್ಲಿರುವ ಆಶ್ರಯ ಸಮಿತಿಗೆ ಇದೆಯೋ ಅಥವಾ ಸರ್ಕಾರದ ಮಂತ್ರಿಗಳಿಗೆ ಇದೆಯೋ? ಏಕೆಂದರೆ ಈ ಸರ್ಕಾರಿ ಆದೇಶಗಳನ್ನು ನೋಡುತ್ತಾ ನೋಡುತ್ತಾ ನಮಗೆ ಒಂದು ರೀತಿಯ ಕನ್‌ಫ್ಯೂಷನ್ ಆಗಿ ಬಿಟ್ಟಿದೆ. ಇದ್ಯಾವ ರೀತಿ ಮನೆಗಳನ್ನು ಹಂಚಿಕೆ ಮಾಡಲಾಗುತ್ತಿದೆ? ಅದಕ್ಕೇನಾದರೂ ಒಂದು ರೀತಿ, ನೀತಿ, ಕಾನೂನು, ವ್ಯವಸ್ಥೆ ಇದೆಯೇ? ಎನ್ನುವ ಪ್ರಶ್ನೆ ನನಗೆ ಉದ್ಭವಿಸಿದೆ. ಇಷ್ಟು ವಿಚಾರಗಳ ಬಗ್ಗೆ ನಾನು ಕೆಡಿಪಿ ಮೀಟಿಂಗ್ ನಲ್ಲಿ ಮಾನ್ಯ ಉಸ್ತುವಾರಿ ಸಚಿವರ ಜೊತೆಗೆ ಚರ್ಚೆ ಮಾಡಿದೆ. ನಾವು ಮನೆಗಳನ್ನು ಹೆಚ್ಚುವರಿಯಾಗಿ ಕೊಟ್ಟಿದ್ದೇವೆ, ಯಾರ್‍ಯಾರು ಕಾಗದಗಳನ್ನು ಕೊಟ್ಟಿದ್ದಾರೋ ಅವರಿಗೆ ಕೊಟ್ಟಿದ್ದೇವೆ ಎಂಬ ಮಾತನ್ನು ಅವರು ಅಂದು ಹೇಳಿದರು. ನೀವೂ ಕಾಗದ ಕೊಟ್ಟಿದ್ದರೆ ನಿಮಗೂ ಮನೆಗಳನ್ನು ಹಂಚಿಕೆ ಮಾಡುತ್ತಿದ್ದೆವು ಎಂಬ ಮಾತನ್ನು ಅವರು ಹೇಳಿದರು. ಶಾಸಕರು ಕೊಡುವ ಕಾಗದದ ಆಧಾರದ ಮೇಲೆ ಮನೆಗಳನ್ನು ಹಂಚಿಕೆ ಮಾಡಲಾಗುತ್ತದೆಯೋ ಅಥವಾ ಸರ್ಕಾರವೇ ಕಾನೂನಿನ ರೀತ್ಯ ದುರ್ಬಲವರ್ಗದ ವಸತಿಹೀನರ ಬಗ್ಗೆ ಏನು ಸರ್ವೆ ನಡೆಸಿದೆಯೋ, ಅದರ ಪ್ರಕಾರ ಮನೆಗಳನ್ನು ಹಂಚಿಕೆ ಮಾಡಲಾಗುತ್ತದೆಯೋ ತಾಲ್ಲೂಕುವಾರು ಅಥವಾ ಕ್ಷೇತ್ರವಾರು ಮನೆಗಳನ್ನು ಹಂಚಿಕೆ ಮಾಡಲಾಗುತ್ತದೆಯೋ ಎಂಬ ಬಗ್ಗೆ ನನಗೆ ಸ್ಪಷ್ಟೀಕರಣ ಕೊಡಬೇಕು. ಈ ನಾಲ್ಕು ವಿಚಾರಗಳಿಗೆ ಸರ್ಕಾರ ಸ್ಪಷ್ಟೀಕರಣ ಕೊಡಬೇಕೆಂಬುದು ನನ್ನ ಮೂಲಭೂತವಾದಂತಹ ಪ್ರಶ್ನೆಯಾಗಿದೆ. ಮಾನ್ಯ ಮಂತ್ರಿಗಳು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ನಾನು ಯಾವ ರೀತಿಯ ತಾರತಮ್ಯವನ್ನೂ ಕೂಡ ಮಾಡಿಲ್ಲ, ಕಾಂಗ್ರೆಸ್‌ನ ಶಾಸಕರ ಕ್ಷೇತ್ರಗಳಿಗೂ ಮನೆಗಳನ್ನು ಕೊಟ್ಟಿದ್ದೇನೆ, ಬಿಜೆಪಿಯವರ ಶಾಸಕರ ಕ್ಷೇತ್ರಗಳಿಗೂ ಮನೆಗಳನ್ನು ಕೊಟ್ಟಿದ್ದೇನೆ ಎಂಬ ಮಾತನ್ನು ಹೇಳಿ, ಈ ವಿಷಯವನ್ನು ಸುಮ್ಮನೆ ತೇಲಿಸುವುದರಿಂದ ನಮಗೆ ತೃಪ್ತಿಯಾಗುವುದಿಲ್ಲ. ದಯವಿಟ್ಟು ಮಾನ್ಯ ಮಂತ್ರಿಗಳು ಈ ನಾಲ್ಕು ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಉತ್ತರವನ್ನು ಕೊಡಬೇಕು. ಮನೆಗಳ ಹಂಚಿಕೆಯಲ್ಲಿ ಎಷ್ಟರ ಮಟ್ಟಿಗೆ ತಾರತಮ್ಯವಾಗಿದೆ ಎಂಬ ಬಗ್ಗೆ ನಾನು ಒಂದು ಜಿಲ್ಲೆಯ ನಿದರ್ಶನವನ್ನು ಮಾತ್ರ ಕೊಡಲಿಕ್ಕೆ ಇಚ್ಛೆ ಪಡುತ್ತೇನೆ. ಹಾಸನ ಜಿಲ್ಲೆಯಲ್ಲಿ 8 ತಾಲ್ಲೂಕುಗಳಿವೆ. ಮತ್ತು 8 ವಿಧಾನ ಸಭಾ ಕ್ಷೇತ್ರಗಳೂ ಕೂಡ ಇವೆ. ನನಗೆ ಮಾತ್ರ ಯಾವುದೇ ತಾಲ್ಲೂಕು ಒಟ್ಟಾರೆ ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವುದಿಲ್ಲ. ಮಾನ್ಯ ಬಿ.ಬಿ. ಶಿವಪ್ಪನವರ ಮತಕ್ಷೇತ್ರದಲ್ಲಿ ಎರಡು ತಾಲ್ಲೂಕುಗಳಿವೆ. ತಾಲ್ಲೂಕುವಾರು ಹಂಚಿರುವ ಆದೇಶವನ್ನು ನೋಡಿ ಒಂದೊಂದು ತಾಲ್ಲೂಕಿಗೆ 150-150 ಮನೆಗಳನ್ನು ಹಂಚಲಾಗುವುದು ಎಂದು ಭಾವಿಸಿದ್ದೆ. ಬಹಳ ಬುದ್ಧಿವಂತಿಕೆಯಿಂದ ಆದೇಶ ಹೊರಡಿಸಿ ಸಕಲೇಶಪುರದಲ್ಲಿ 150 ಮನೆಗಳು ಮತ್ತು ಆಲೂರಿಗೆ 150 ಮನೆಗಳನ್ನು ಹಂಚಿ ಅಲ್ಲಿ ಮಾತ್ರ ಸರಿಯಾಗಿ 300 ಮನೆಗಳನ್ನು ಹಂಚಲಾಗಿದೆ. ಎಲ್ಲಾ ತಾಲ್ಲೂಕಿಗೆ 300 ಮನೆಗಳಂತೆ ಬರಬೇಕಾದರೆ ಇಲ್ಲಿ ನೋಡಿ ಯಾವ ತರಹ ಬರುತ್ತದೆ?

1.30 ಪಿ.ಎಂ.

ಎಲ್ಲಾ ತಾಲ್ಲೂಕುಗಳಿಗೂ 300 ಎಂದು ಬರಬೇಕಾದರೆ ಇಲ್ಲಿ ನೋಡಿ ಯಾವ ತರಹ ಬರುತ್ತದೆ. ಆದರೆ ನನ್ನ ಕ್ಷೇತ್ರದಲ್ಲಿ ಬರಬೇಕಾದರೆ ತಾಲ್ಲೂಕು ಬಂದು ಬಿಡುತ್ತದೆ. ಈ ಒಂದು ಪ್ರತಿಯನ್ನು ಮಾಡಿರುವುದನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ. ಹಂಚಿಕೆ ಯಾವ ರೀತಿ ಇದೆ ಎಂದರೆ 7.4.98 ರ ಈ ಆದೇಶದಲ್ಲಿ ತಾಲ್ಲೂಕು ವೈಸ್ ಎಲ್ಲರಿಗೂ 175 ಮನೆ ಕೊಡುತ್ತೇವೆ ಎಂದು 22.5.98 ಕ್ಕೆ ಒಂದು ಆದೇಶ ಬರುತ್ತದೆ, ಅದರಲ್ಲಿ ಹಾಸನ, ಹೊಳೆನರಸೀಪುರ ಮತ್ತು ಚನ್ನರಾಯಪಟ್ಟಣ ಈ ಮೂರು ಕ್ಷೇತ್ರಗಳಿಗೆ 500 ಎಂದು ಹಾಕಿ, ಚನ್ನರಾಯಪಟ್ಟಣ ಎಂದು ಮಾಡಿ ಬ್ರಾಕೆಟ್‌ನಲ್ಲಿ ಶ್ರವಣಬೆಳಗೊಳ ಕ್ಷೇತ್ರಕ್ಕೆ 300 ಮತ್ತು ದಂಡಿಗನಹಳ್ಳಿ ಹೋಬಳಿಗೆ 200 ಅದು ತಾಲ್ಲೂಕು, ಕ್ಷೇತ್ರ. ಇದು ಸರ್ಕಾರದ ಆದೇಶದಲ್ಲಿ ಚೆನ್ನಾಗಿದೆ. ಇದು ನಾಲ್ಕನೇ ಆದೇಶ. 28.5.98ಕ್ಕೆ ಮತ್ತೆ ಕಾನ್‌ಸ್ಟಿಟ್ಯೂಯನ್ಸಿ ಅರಕಲಗೂಡು 100, ಅರಸೀಕೆರೆಗೆ 100, ಬೇಲೂರು 100, ಸಕಲೇಶಪುರ 100, ಹಾಸನ, ಹೊಳೇನರಸೀಪುರ, ಚನ್ನರಾಯಪಟ್ಟಣ ಮತ್ತು ಆಲೂರು ಅದರಲ್ಲಿ ಇಲ್ಲ. 21.7.98ಕ್ಕೆ ಹೊಳೆನರಸೀಪುರಕ್ಕೆ 150, 16.11.98 ಕ್ಕೆ ಎಲ್ಲಾ ತಾಲ್ಲೂಕುಗಳಿಗೆ 200, 200 ಕೊಟ್ಟು ಆಲೂರು ತಾಲ್ಲೂಕು ಮತ್ತು ಸಕಲೇಶಪುರ ತಾಲ್ಲೂಕಿಗೆ ಮಾತ್ರ 100-100 ಕೊಟ್ಟಿದ್ದಾರೆ. 19.11.98ಕ್ಕೆ ಕ್ಷೇತ್ರವಾರು 300 ಎಲ್ಲಾ ಅರಕಲಗೂಡು, ಮತ್ತು ಅರಸೀಕೆರೆ ಸೇರಿ. 23-11-98ಕ್ಕೆ ಹೊಳೇನರಸೀಪುರಕ್ಕೆ 500. 23.11.98ಕ್ಕೆ ಮತ್ತೊಂದು ಆದೇಶ ಹೊರಡಿಸಿದ್ದಾರೆ. ಅರಸೀಕೆರೆಗೆ 250, ಬೇಲೂರು 250, 23-11-98ಕ್ಕೆ ಒಂದು, ಎರಡು ಮತ್ತು ಮೂರು ಎಂದು ಕೆಟಗರಿ ಆರ್ಡರ್ ಮಾಡಿದ್ದಾರೆ. ಅದರಲ್ಲಿ ಹಾಸನಕ್ಕೆ 500, ಹೊಳೇನರಸೀಪುರಕ್ಕೆ 500, ಮತ್ತು ಚನ್ನರಾಯಪಟ್ಟಣಕ್ಕೆ 500 ಎಂದು ಕೊಟ್ಟಿದ್ದಾರೆ. ಒಟ್ಟು ಕ್ಷೇತ್ರಗಳ ಲೆಕ್ಕ ತೆಗೆದುಕೊಂಡು ಎಷ್ಟೆಷ್ಟು ಬಂದಿದೆ ಎಂದು ಮಾಹಿತಿ ಹೇಳುತ್ತೇನೆ. ಅರಕಲಗೂಡು ತಾಲ್ಲೂಕು ಹಾಸನ ಜಿಲ್ಲೆ 1998-99ನೇ ಸಾಲಿನ ಆಶ್ರಯ ಯೋಜನೆಯ ಮನೆಗಳು ಗ್ರಾಮಾಂತರದ್ದು ಮಾತ್ರ ಪಟ್ಟಣದ ಬಗ್ಗೆ ಹೇಳುತ್ತಿಲ್ಲ. ಅರಕಲಗೂಡು ತಾಲ್ಲೂಕಿಗೆ 775 ಮನೆ, ಅರಸೀಕೆರೆ ತಾಲ್ಲೂಕಿಗೆ 890 ಮನೆ, ಅದರಲ್ಲಿ ನನಗೆ ಬಂದಿರುವ ಭಾಗ 135. ಹಾಸನಕ್ಕೆ 526 ಒಟ್ಟು ಬಂದಿರುವುದು 1,675 ನನಗೆ ಕೊಟ್ಟಿರುವುದು ಆ ಎರಡೂ ಹೋಬಳಿಗೆ ಸೇರಿ 149. ಆ ಕ್ಷೇತ್ರಕ್ಕೆ ಉಳಿದಿರತಕ್ಕಂಥದ್ದು 1,526. ಹೊಳೆನರಸೀಪುರ, ದಂಡಿಗನಹಳ್ಳಿ ಹೋಬಳಿ ಮತ್ತು ಚನ್ನರಾಯಪಟ್ಟಣ ತಾಲ್ಲೂಕು ಬಿಟ್ಟು ಈ ಕಡೆ ನಮ್ಮ ಕ್ಷೇತ್ರಕ್ಕೆ ಸೇರಿಸಿಕೊಂಡರೆ, ಚನ್ನರಾಯಪಟ್ಟಣ ತಾಲ್ಲೂಕಿನ ದಂಡಿಗನ-ಹಳ್ಳಿ ಹೋಬಳಿ, ಹೊಳೇನರಸೀಪುರಕ್ಕೆ ಏನು ಬರುತ್ತದೆ, ಅದಕ್ಕೆ ಈ ಆದೇಶದ ಸಂಖ್ಯೆ ಪ್ರಕಾರ ಒಟ್ಟು ಬಂದಿರತಕ್ಕಂತಹ ಗ್ರಾಮಾಂತರ ಪ್ರದೇಶದ ಆಶ್ರಯ ಮನೆಯ ಸಂಖ್ಯೆ 2,650. ಚನ್ನರಾಯಪಟ್ಟಣ ತಾಲ್ಲೂಕು ಶ್ರವಣಬೆಳಗೊಳ ಕ್ಷೇತ್ರಕ್ಕೆ 1,400, ಬೇಲೂರು

1,025 ಮತ್ತು ಶ್ರೀ ಶಿವಪ್ಪನವರ ಕ್ಷೇತ್ರವಾದ ಆಲೂರು ತಾಲ್ಲೂಕಿಗೆ ಸೇರಿ ಎರಡು-ಎರಡು, ಎಲ್ಲಾ ಸೇರಿಸಿ ಒಟ್ಟು 925. 9,425 ಮನೆಗಳನ್ನು ಈ ವರ್ಷದಲ್ಲಿ ಹಾಸನ ಜಿಲ್ಲೆಗೆ ಕೊಟ್ಟಿದ್ದಾರೆ. ಅದರಲ್ಲಿ ಗಂಡಸಿ ಕ್ಷೇತ್ರಕ್ಕೆ ಎರಡು ತಾಲ್ಲೂಕಿನಿಂದ ಎರಡು-ಎರಡು ಹೋಬಳಿ ಏನು ಬರುತ್ತದೆ, ನಾವು ಹಂಚಿಕೆಗೆ ಪಡೆದಿರತಕ್ಕಂತಹ ಮನೆಯ ಗುರಿ ಎಷ್ಟೆಂದರೆ, 274, ಅಲ್ಲಿ ಬಡವರು ಇಲ್ಲವೆ? ಅದು ಕ್ಷೇತ್ರವಾರು ಕೊಟ್ಟರೇ? ಯಾವ ರೀತಿ ಮನೆಗಳು ಹಂಚಿಕೆಯಾಯಿತು? ಯಾವ ಮಾನದಂಡ ಉಪಯೋಗಿಸಿದ್ದೀರಿ? ಈ ಪ್ರಶ್ನೆ ಇದೆ. ಇದನ್ನು ಸದನದಲ್ಲಿ ಪ್ರಶ್ನೆ ಮಾಡಬೇಕಾ? ಇಲ್ಲವಾ? ಇದೇ ರೀತಿಯ ತಾರತಮ್ಯ ಕಳೆದ ಸಾರಿ 1996-97 ನೇ ಸಾಲಿನ ಆಶ್ರಯ ಯೋಜನೆಯ ಮನೆ ಹಂಚಿಕೆ ವಿಚಾರದಲ್ಲಿ ಕೂಡ ಇದೇ ಸದನದಲ್ಲಿ ಸುದೀರ್ಘವಾಗಿ ಚರ್ಚೆಯಾಗಿ ಧರಣಿ ಮಾಡಿದಂತಹ ಕಾಲದಲ್ಲಿ ಇಡೀ ಹಾಸನ ಜಿಲ್ಲೆಯ ಗಂಡಸಿ ಕ್ಷೇತ್ರಕ್ಕೆ ಅನ್ಯಾಯವಾಗಿದೆ ಎನ್ನತಕ್ಕಂತಹ ದೃಷ್ಟಿಯಿಂದ ಆದೇ ರೀತಿ ಉಳಿದಂತಹ ತಾಲ್ಲೂಕುಗಳಿಗೂ ಮತ್ತು ಕ್ಷೇತ್ರಗಳಿಗೂ ಕೂಡ ಹೆಚ್ಚುವರಿ ಮನೆಗಳನ್ನು ಕೊಡುತ್ತೇವೆಂದು ತೀರ್ಮಾನವಾದ ಆದೇಶದ ಮೂಲಕ 100 ಮನೆಗಳನ್ನು ಹೋದಸಾರಿ ಕೊಟ್ಟರು. ಇದು ಒಂದು ಸಂಪ್ರದಾಯ ಆಗಿ ಬಿಟ್ಟಿದೆಯಾ? ಹೋದ ಸಾರಿಯೂ ಅದೇ ತರಹದ ತಾರತಮ್ಯ, ಈ ಸಾರಿಯೂ ಅದೇ ತರಹದ ತಾರತಮ್ಯ. ಈ ಸರ್ಕಾರಕ್ಕೆ ನಾಚಿಕೆಯಾಗಬೇಕು. ಒಂದು ಸಾರಿ ಹೇಳಿದರೆ ಅರ್ಥವಾಗುವುದಿಲ್ಲ. ಮೊದಲ ಸಾರಿ ತಪ್ಪು ಮಾಡುತ್ತಿರುವುದಾ? ಇದು ಎರಡನೇ ಸಾರಿ.

ಶ್ರೀ ಸಿ.ಎಸ್. ಪುಟ್ಟೇಗೌಡ (ಚನ್ನರಾಯಪಟ್ಟಣ) :— ಮಾನ್ಯ ನಮ್ಮ ಸದಸ್ಯರಾದ ಶ್ರೀಮಾನ್ ಶಿವರಾಮ್‌ರವರು ಹಾಸನ ಜಿಲ್ಲೆಯಲ್ಲಿ ಅನಧಿಕೃತ ಬಾವಿಯನ್ನು ಸರ್ಕಾರ ರೆಗ್ಯುಲರೈಸ್ ಮಾಡಿದರೆ ನಾನು ಮಾಡಿದೆ ಎಂದು ಹೇಳುವ ಶಾಸಕರು ಇದನ್ನು ಏಕೆ ಮಾಡಿಸಲಿಲ್ಲ, ಇವರಿಗೆ ಗೊತ್ತಾಗಲಿಲ್ಲವಾ? ಸರ್ಕಾರ ಯಾವುದೇ ಕಾರ್ಯಕ್ರಮ ಮಾಡಿದರೂ ನಾನು ಮಾಡಿದ್ದು ಎಂದು ಮೊದಲು ಪತ್ರಿಕೆಯಲ್ಲಿ ಹೇಳುವವರು ಇದನ್ನು ಏಕೆ ನಮ್ಮ ಮೇಲೆ ದೂರನ್ನು ಹೊರಿಸುತ್ತಿದ್ದಾರೆ, ಅಂಕಿಅಂಶ ತರಿಸಿ ಎಂಟು ತಾಲ್ಲೂಕುಗಳನ್ನೂ ನೋಡಿ. ಇವರು ಹೇಳುವ ವಿಶ್ವ ಯೋಜನೆಯಲ್ಲಿ ಇವರ ಸರ್ಕಾರದಲ್ಲಿ ಶ್ರೀಮಾನ್ ವೀರಪ್ಪಮೊಯಿಲಿಯವರು ಮತ್ತು ಶ್ರೀಮಾನ್ ಬಂಗಾರಪ್ಪನವರ ಕಾಲದಲ್ಲಿ ತೆಂಗಿನ ನಾರನ್ನು ವಿಶ್ವ ಯೋಜನೆಯಲ್ಲಿ ಸೇರಿಸಿ ಎಲ್ಲಾ ಗಂಡಸಿ ಕ್ಷೇತ್ರಕ್ಕೆ ಪೂರ್ತಿ ಮಾಡಿಕೊಂಡರು. ಇವರು ಶಾಸಕರಾಗಿರಲಿಲ್ಲವೇ? ಹೊಳೇನರಸೀಪುರ ಮತ್ತು ಚನ್ನರಾಯಪಟ್ಟಣಕ್ಕೆ ಒಂದೂ ಇಲ್ಲ ಬಯಲು ನಾಡು ಅಭಿವೃದ್ಧಿ ಮಂಡಳಿ ದುಡ್ಡು ಇವರಿಗೆ ಬೇಕು, ಮಲೆನಾಡು ಅಭಿವೃದ್ಧಿ ಮಂಡಳಿ ದುಡ್ಡೂ ಬೇಕು. ಗಂಡಸಿ ಕ್ಷೇತ್ರ ಯಾವ ಬಯಲು ನಾಡು ಎಂಬುದು ನಮಗೆ ಗೊತ್ತಾಗಿಲ್ಲ. ನಾವು ತಬ್ಬಲಿಗಳು ಆಗಬಾರದ್ದು ಆಗುತ್ತದೆ. ಬಾಗೂರು ನವಿಲೆಯಲ್ಲಿ ಕುಡಿಯುವುದಕ್ಕೆ ನೀರು ಇಲ್ಲ, ಯಾವ ಕಾರ್ಯಕ್ರಮದಲ್ಲೂ ಸಹ 1947ನೇ ಇಸವಿಯಿಂದ ಇವತ್ತಿನವರೆಗೆ ಸರಿಸಮಾನವಾಗಿ ಹಂಚಿಕೆಯಾಗಿಲ್ಲ.

ಶ್ರೀ ಬಿ. ಶಿವರಾಮು :— ಪುಟ್ಟೇಗೌಡರು ಬಹಳ ಆತ್ಮೀಯರು. ಒಳ್ಳೆಯ ವಿಚಾರ ಪ್ರಸ್ತಾಪ ಮಾಡಿದ್ದಾರೆ. ಬಹಳ ಸಂತೋಷ. ವಿಶ್ವಯೋಜನೆಯನ್ನು ಗಂಡಸಿ ಕ್ಷೇತ್ರಕ್ಕೆ ತೆಗೆದುಕೊಂಡಿದ್ದೇವೆಂದು ಹೇಳುತ್ತಾರೆ, ನೀರು ಹಂಚಿಕೊಂಡು ಕೋಟ್ಯಾಂತರ ರೂಪಾಯಿ ತೆಗೆದುಕೊಳ್ಳುತ್ತಿದ್ದಾರೆ, ನಾವು ಭಾಗ ಕೇಳಿದ್ದೆವಾ? ಇದು ಸಂಪನ್ಮೂಲ. ಇದು ಐದು ಕೋಟಿ ಜನರ ಹಣ. ಯಾರೋ ಒಬ್ಬರ ದುಡ್ಡು ಅಲ್ಲ. ಸಾಲ ತೆಗೆದುಕೊಂಡರೂ ಕೂಡ. ಯಾವ ಅಭಿವೃದ್ಧಿಗೆ ಸಾಧ್ಯ ಇದೆ ಆ ಭಾಗದಲ್ಲಿ ಮಾಡುವುದಕ್ಕೆ ಸಾಧ್ಯ ಇದೆ; ಇವತ್ತು ಆ ಪ್ರಶ್ನೆ ಮೂಲಭೂತವಾಗಿ ಬರುವುದಿಲ್ಲ. ಒಂದು ಲಕ್ಷ ಮನೆಗಳಿಗೆ ಈ ಸಾಲ ತೆಗೆದುಕೊಂಡಿದ್ದಾರೆ. ಇದು ಪ್ರತಿ ಕ್ಷೇತ್ರದ ಶಾಸಕರ ಜವಾಬ್ದಾರಿ. ಆ ಕ್ಷೇತ್ರದ ಜನತೆಯ ಬೆವರಿನ ಹಣ ಅದನ್ನು ವಾಪಸ್ ಕೊಡಬೇಕಾಗುತ್ತದೆ. ಇವತ್ತು ಅದನ್ನು ಬೇರೆಯದಕ್ಕೆ ಬಳಸುವ ವಿಚಾರ ಅಲ್ಲ. ನಾನು ಕಳೆದ ಸದನದಲ್ಲಿ ಮಾತನಾಡಿದ್ದೇನೆ, ಅಂತರ್ಜಲದ ಮಟ್ಟ ನಮ್ಮ ಕ್ಷೇತ್ರದಲ್ಲಿ ಕುಸಿಯುತ್ತಿದೆ. ಎರಡು ತಾಲ್ಲೂಕುಗಳಿಗೂ ಅಂತರ್ಜಲದ ಮಟ್ಟ ಇಲ್ಲ. ನೀರಾವರಿ ಆ ಒಂದು ಭಾಗಕ್ಕೆ ಸೀಮಿತವಾಗಿದೆ. ನೂರಾರು ಕೋಟಿ ರೂಪಾಯಿಗಳನ್ನು ಹೊಳೆನರಸೀಪುರ ಮತ್ತು ಚನ್ನರಾಯಪಟ್ಟಣಗಳಿಗೆ ನೀರಾವರಿ ಕೊಡತಕ್ಕಂತಹ ಸಂದರ್ಭದಲ್ಲಿ ಖರ್ಚಾಗಿರುವಾಗ ಒಂದೂವರೆ ಕೋಟಿ ನಾವು ವಿಶ್ವ ಯೋಜನೆಗೆ ಉಪಯೋಗಿಸಿರಬಹುದು. ಬರಗಾಲದಲ್ಲಿ ಬೇಯುತ್ತಿರತಕ್ಕಂತಹ ಹೆಣ್ಣು ಮಗಳಿಗೆ ಕನಿಷ್ಟ ಆಸರೆಯಲ್ಲಿ ಕೂತುಕೊಂಡು ಕೆಲಸ ಮಾಡುವುದಕ್ಕೆ ಹೊರತು ಇವರ ಹಸಿರು ಕಾಂತ್ರಿಯನ್ನು ನಾವು ಕಿತ್ತುಕೊಳ್ಳುವುದಕ್ಕೆ ಕೊಕ್ಕೆ ಹಾಕಿದ್ದೆವಾ? ಮಂಜೂರಾತಿ ಮಾಡಿರತಕ್ಕಂತಹ ಕನಿಷ್ಟ ಒಂದೆರಡು ಸಣ್ಣ ಲಿಫ್ಟ್ ಇರಿಗೇಷನ್‌ಗೆ ಆಶ್ವಾಸನೆ ಕೊಟ್ಟು ಇನ್ನು ಕೆಲಸ ಮಾಡಿಸಿಕೊಡುವುದಕ್ಕಾಗಲಿಲ್ಲ. ನಾವು ಶಾಸಕರು ಕೇಳಬೇಕಾಗುತ್ತದೆ. ಸ್ವಾಭಿಮಾನ ಇದ್ದರೆ ಎದ್ದು ಕೇಳಬೇಕು. ಈ ರಾಜ್ಯದ ಹಣ, ಸಂಪನ್ಮೂಲ ಏನಿದೆ ಅದನ್ನು ಸಮರ್ಪಕವಾಗಿ ಎಲ್ಲಾ ಕ್ಷೇತ್ರಗಳಿಗೆ ಹಂಚತಕ್ಕಂತಹ ಕೆಲಸ ಆಗಬೇಕಾಗುತ್ತದೆ. ಯಾವುದೇ ಒಂದು ಕೆಲಸ ಒಂದು ಕ್ಷೇತ್ರಕ್ಕೆ ಸೀಮಿತವಾಗಿ 1,800 ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆಂದು ಹೇಳಿದಿರಿ, 1,800 ಕೋಟಿ ರೂಪಾಯಿ ನೀರಾವರಿ ಒಂದು ಕ್ಷೇತ್ರಕ್ಕೆ ಆಗಿದೆಯೋ?...

ಶ್ರೀ ಸಿ.ಎಸ್. ಪುಟ್ಟೇಗೌಡ :— ಇವರ ತಾರತಮ್ಯದ ಬಗ್ಗೆ ಹೇಳಿಕೊಂಡು ಹೋದರೆ ಬಹಳ ಇದೆ. 50 ವರ್ಷಗಳಿಂದ ಇವರು ನಮಗೆ ತಾರತಮ್ಯ ತೋರಿಸಿದ್ದಾರೆ. ಇವರಿಂದ ನಾವು ಕಲಿಯಬೇಕೆ?

ಶ್ರೀ ಬಿ. ಶಿವರಾಮು :— ಕೇಬಿ ವಿಚಾರ ಅನಧಿಕೃತ ಸಕ್ರಮೀಕರಣದ ಬಗ್ಗೆ ಒಂದು ಮಾತನ್ನು ಕಳೆದ ಸಾರಿ ಕೇಳಿದೆ, ಸನ್ಮಾನ್ಯ ಉಪಮುಖ್ಯ-ಮಂತ್ರಿಗಳೂ ಕೂಡ ಇವತ್ತು ಅದನ್ನು ಒಪ್ಪಿಕೊಂಡರು. ನಾನು ಹೆಮ್ಮೆಯಿಂದ ಹೇಳುತ್ತಿದ್ದೇನೆ, ವಿದ್ಯುಚ್ಛಕ್ತಿ

ಇಲಾಖೆಯ ಅನಧಿಕೃತ ಸಕ್ರಮೀಕರಣದ ಬಗ್ಗೆ ಹೋರಾಟ ಮಾಡಿರುವಂಥದ್ದು ನಾನೇ. ಇವತ್ತೂ ಹೇಳುತ್ತೇನೆ. ಈ ಸರ್ಕಾರ ಮಾಡಿದ್ದು ಬೇರೆ ವಿಚಾರ. ಅದರ ವಿಚಾರ ನನಗೆ ಬೇಕಾಗಿಲ್ಲ. ಕೆಇಬಿಯಿಂದ ಆದೇಶ ಇಶ್ಯೂ ಮಾಡಿಸಿದ್ದುದು ನಾನೇ.

ಶ್ರೀ ಸಿ.ಎಸ್. ಪುಟ್ಟೇಗೌಡ:— ಈ ರಾಜ್ಯದಲ್ಲಿ ಎಲ್ಲಾ ಜೇವ್ಲೋ ಆಗುವುದಕ್ಕೆ....

ಶ್ರೀ ಬಿ. ಶಿವರಾಮು:— ಕನಿಷ್ಟ ನನಗೆ ಒಂದು ಧನ್ಯವಾದ ಕೂಡ ಹೇಳಲಿಲ್ಲ. ಈ ವಿಚಾರದಲ್ಲಿ ತಾವು ಮತ್ತೆ ರಾಜ್ಯಕ್ಕೆ ವಿಸ್ತರಣೆ ಮಾಡಿದ ನಂತರ ನಾನು ಧನ್ಯವಾದ ಕೂಡ ಹೇಳಿದ್ದೇನೆ. ಮಂಡಳಿಯಿಂದ ಇಶ್ಯೂ ಮಾಡಿದ ಆದೇಶವನ್ನು ಹೇಳಿಕೊಂಡೇ ಹೋಗುತ್ತೀರಿ. ಅಧ್ಯಕ್ಷರಿಗೂ ಗೊತ್ತು, ಅವರ ಛೇಂಬರ್‌ನಲ್ಲಿ ಬಂದು ಗಲಾಟೆ ಮಾಡಿದ್ದೇವೆ. ಅವರೇ ಇದನ್ನು ಪ್ರಸ್ತಾಪ ಮಾಡಿ ಇದನ್ನು ಬಗೆಹರಿಸಬೇಕೆಂದು ಕಟ್ಟು ನಿಟ್ಟಿನ ಆದೇಶ ಕೊಟ್ಟರೂ ಮಾಡಲಿಲ್ಲ. ಈವತ್ತು ಅದನ್ನು ಉಪ ಮುಖ್ಯ-ಮಂತ್ರಿಗಳೂ ಇಡೀ ರಾಜ್ಯಕ್ಕೆ ವಿಸ್ತರಣೆ ಮಾಡಿದರು. ಯಾವ ಯಾವ ವಿಚಾರ ಎಲ್ಲೆಲ್ಲಿಗೋ ತೆಗೆದುಕೊಂಡು ಹೋಗುವುದಾದರೆ ವಿಚಾರ ಪ್ರಸ್ತಾಪವಾಗುವುದಿಲ್ಲ. ವಿಷಯ ಬೇರೆ ಕಡೆ ಡೈವರ್ಟ್ ಮಾಡುತ್ತಿದ್ದಾರೆ. ಇದು ನಾವು ಏನು ಸುಮ್ಮನೆ ಕುಳಿತುಕೊಳ್ಳುವುದಿಲ್ಲ. ರಾಜಕೀಯವಾಗಿ 10 ವರ್ಷಗಳಾಗಿವೆ. ನಾವು ಕೇಳಿದ್ದು ಕೇಳಿಕೊಂಡು ಇಲ್ಲಿಯವರೆಗೆ ಬಂದಿದ್ದಕ್ಕೇನೆ ಈ ಪರಿಸ್ಥಿತಿ ಬಂದಿರುವುದು. ಗಂಡಸಿ ಕ್ಷೇತ್ರದ ಬಗ್ಗೆ ನೀರಾವರಿ ವಿಷಯದಲ್ಲಿ ನಾನು ಮಾತನಾಡುತ್ತಿರುವಾಗ ಅದರ ಬಗ್ಗೆ ಇವರು ಹೇಳದೆ ಬೇರೆ ವಿಷಯದ ಬಗ್ಗೆ ಹೇಳಿ ವಿಷಯವನ್ನು ಡೈವರ್ಟ್ ಮಾಡುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:— ಮಾನ್ಯ ಅಧ್ಯಕ್ಷರೆ, ಸಮಗ್ರ ಹಾಸನ ಪ್ರಗತಿ ಬಗ್ಗೆಯೇ ಚರ್ಚೆ ಮಾಡಲು ಮುಂದೆ ಅವಕಾಶ ಕೊಡಿ. ಆದರೆ ಈಗ ಏನು ಆಶ್ರಯ ಮನೆಗಳ ಹಂಚಿಕೆಯಲ್ಲಿ ವ್ಯತ್ಯಾಸವಾಗಿದೆ ಅದನ್ನು ಮಂತ್ರಿಗಳು ಸರಿಪಡಿಸುತ್ತಾರೆಯೇ ಎಂಬ ಬಗ್ಗೆ ಉತ್ತರ ಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು:— ಶಿವರಾಮ್‌ರವರೆ, ನಿಮಗೆ ಈ ವಿಷಯದ ಬಗ್ಗೆ ಮಾತನಾಡಲು ನಾನು ಅವಕಾಶ ಮಾಡಿಕೊಟ್ಟಿದ್ದೇನೆ. ಆದರೆ ಈಗ ನೀವು ಬೇಗ ವಿಷಯದ ಪ್ರಸ್ತಾಪವನ್ನು ಮುಗಿಸಿದರೆ ಭೋಜನಕ್ಕಾಗಿ ಸಭೆಯನ್ನು ಸ್ವಲ್ಪ ಕಾಲ ಮುಂದೂಡುತ್ತೇನೆ. ಮತ್ತೆ ಸಭೆ ಸೇರಿದಾಗ ಮುನಿಯಪ್ಪನವರಿಗೆ ಮಾತನಾಡಲು ಅವಕಾಶ ಕೊಡುತ್ತೇನೆ. ಏಕೆಂದರೆ ಅವರು ನನಗೆ ಕೇಳಿಕೊಂಡಿದ್ದಾರೆ. ಇದರ ಬಗ್ಗೆ ಹೆಚ್ಚಿಗೆ ಸದಸ್ಯರು ಮಾತನಾಡಲು ಇನ್ನು ಅವಕಾಶ ಕೊಡುವುದಿಲ್ಲ. ತದನಂತರ ಉತ್ತರವನ್ನು ಕೊಡಬೇಕಾಗುತ್ತದೆ. ಇನ್ನು ಎರಡನೆಯದಾಗಿ ಮಾನ್ಯ ಯಡಿಯೂರಪ್ಪನವರು ಮತ್ತು ಮಾನ್ಯ ಈಶ್ವರಪ್ಪನವರು ಏನು ನೋಟಿಸ್‌ಗಳನ್ನು ಈಗಾಗಲೇ ಕೊಟ್ಟಿದ್ದಾರೆ ಅದನ್ನೂ ಕೂಡ ಇವೊತ್ತೇ

ತೆಗೆದುಕೊಳ್ಳಲಾಗುವುದು. ಏಕೆಂದರೆ ನಾನು ಅವರಿಗೆ ಮಾತು ಕೊಟ್ಟಿದ್ದೇನೆ. ಇದಾದ ಮೇಲೆ ರೆಸಲ್ಯೂಷನ್ ನ್ನು ಕೂಡ ಮೂವ್ ಮಾಡಬೇಕಾಗಿರುವುದರಿಂದ ನೀವು ಬೇಗ ನಿಮ್ಮ ಮಾತುಗಳನ್ನು ಮುಗಿಸಿ.

ಶ್ರೀ ಬಿ. ಶಿವರಾಮು :— ನೀವೇನು ನನಗೆ ಕಾಲಾವಕಾಶವನ್ನು ಮಾತನಾಡಲು ಕೊಟ್ಟಿದ್ದೀರಿ ಆ ವೇಳೆಯಲ್ಲಿ ಬೇರೆ ವಿಷಯವನ್ನು ಹೇಳಲು ಉಪಯೋಗಿಸಿಕೊಳ್ಳುತ್ತಿಲ್ಲ. ಆದರೆ ನಮ್ಮ ಸ್ನೇಹಿತರು ನೋವುಂಟಾಗುವ ರೀತಿಯಲ್ಲಿ ಮಾತನಾಡಿದರು. ಆ ಕಾರಣಕ್ಕಾಗಿ ನಾನು ಅವರಿಗೆ ಉತ್ತರ ಕೊಡಬೇಕಾಗಿ ಬಂತು. ನಾನು ಇದುವರೆಗೂ ಹೇಳಿರುವ ವಿಚಾರ ನೋವುಂಟಾಗುವ ವಿಚಾರವಲ್ಲವೇ ಎಂಬುದನ್ನು ನೀವೇ ಹೇಳಿ. ಅಧ್ಯಕ್ಷರಾದ ನಿಮಗೆ ಸ್ವಲ್ಪ ಹೆಚ್ಚುವರಿ ಮನೆಗಳನ್ನು ಕೊಟ್ಟಿರಬಹುದೇನೋ, ಆದ್ದರಿಂದ ಸ್ವಲ್ಪ ಸಮಾಧಾನವಾಗಿರಬಹುದು ಎಂದು ನನಗನ್ನಿಸುತ್ತದೆ. ಆದರೆ ನಿಮ್ಮ ಪೀಠ ಏನಿದೆ ಅದು ನ್ಯಾಯಯುತವಾಗಿರತಕ್ಕಂಥದ್ದು. ಆ ಪೀಠದಲ್ಲಿ ಕುಳಿತಿರುವ ನಿಮ್ಮ ಬಗ್ಗೆ ನಮಗೆ ಬಹಳ ಗೌರವವಿದೆ.

ಅಧ್ಯಕ್ಷರು :— ಈ ವಿಚಾರದಲ್ಲಿ ಎಲ್ಲರಿಗಿಂತಲೂ ಅಸಮಾಧಾನ ನನಗೂ ಇದೆ. ನೀವು ಬೇಕಾದರೆ ನಮಗೆ ಸಂಬಂಧಪಟ್ಟಂತೆಮ ಫಿಗರ್ಸ್ ತರಿಸಿಕೊಂಡು ನೋಡಬಹುದು. ಈ ಪೀಠಕ್ಕೆ ಬಂದು ಕುಳಿತ ಮೇಲೆ ಯಾರು ಏನು ಮಾಡಿದರೂ ಸಹಿಸಿಕೊಂಡು ಕುಳಿತಿರಬೇಕಾದ ಪರಿಸ್ಥಿತಿ ಬರುತ್ತದೆ. ನನಗೂ ಕೂಡ ತೃಪ್ತಿ ಮತ್ತು ಸಮಾಧಾನ ಏನು ಇಲ್ಲವಾಗಿದೆ.

ಶ್ರೀ ಬಿ. ಶಿವರಾಮು :— ಅಧ್ಯಕ್ಷರೆ, ಹಾಸನ ಜಿಲ್ಲೆಗೆ 9425 ಮನೆಗಳು ಮಂಜೂರಾಗಿದ್ದರೆ ಹಂಚಿಕೆ ಪ್ರಕಾರ 8 ಕ್ಷೇತ್ರಗಳಿರುವ ಗಂಡಸಿ ಕ್ಷೇತ್ರಕ್ಕೆ 1300 ಮನೆಗಳನ್ನು ಕೊಡಬೇಕಾಗುತ್ತದೆ. ಆದರೆ ಕೇವಲ 284 ಮನೆಗಳನ್ನು ಮಾತ್ರ ಕಟ್ಟಿಸಿ ಕ್ಷೇತ್ರಕ್ಕೆ ಕೊಡಲಾಗಿದೆ. ಹೀಗಾದರೆ ಅಲ್ಲಿರತಕ್ಕಂಥ ಬಡವರಿಗೆ ಯಾವ ರೀತಿಯಲ್ಲಿ ತಮ್ಮ ಸರ್ಕಾರ ಮನೆಗಳನ್ನು ಹಂಚಿಕೆ ಮಾಡುತ್ತದೆ. ನಾನು ಈ ಕಾರಣಕ್ಕೋಸ್ಕರವಾಗಿಯೇ ಮನೆಗಳ ಹಂಚಿಕೆ ಮಾಡುವ ವಿಷಯದಲ್ಲಿ ಯಾವ ಮಾನದಂಡವನ್ನು ಉಪಯೋಗಿಸುತ್ತೀರಿ ಎಂದು ಕೇಳುತ್ತಾ ಅದನ್ನು ತಾಲ್ಲೂಕುವಾರು ಹಂಚುತ್ತೀರೋ ಅಥವಾ ಸಮಿತಿ ಮುಂದಿಟ್ಟುಕೊಂಡು ಹಂಚುತ್ತೀರೋ? ಅಥವಾ ಮಂತ್ರಿಗಳಿಗೆ ಹಂಚುತ್ತೀರೋ ಎನ್ನುವ ಬಗ್ಗೆ ಸ್ಪಷ್ಟೀಕರಣ ಕೇಳಿದೆ. ಈಗೇನು ವ್ಯವಸ್ಥೆ ಮಾಡಿಕೊಂಡಿದ್ದೀರೋ ಅದನ್ನೇ ಮುಂದುವರಿಸಿಕೊಂಡು ಹೋಗುತ್ತೀರಾ ಎಂಬ ಬಗ್ಗೆ ಮಂತ್ರಿಗಳು ಹೇಳಬೇಕಾಗಿದೆ. ಅಧ್ಯಕ್ಷರೆ, ಪ್ರಚಲಿತವಿರುವ ಕೆಲವು ಆದೇಶಗಳನ್ನು ತಮಗೆ ನಾನು ಕಳುಹಿಸಿಕೊಡುತ್ತೇನೆ. ಆದೇಶದಲ್ಲಿರುವಂತೆ ಯಾವ ರೀತಿಯಲ್ಲಿ ಮನೆಗಳ ಹಂಚಿಕೆಯಾಗುತ್ತದೆಂದರೆ ದಿನಾಂಕ 23-11-1998 ರಲ್ಲಿ ಹೊರಟ ಆದೇಶದ ರೀತ್ಯಾ ತಗಡೂರು ಗ್ರಾಮ ಪಂಚಾಯತಿಗೆ

20 ಮನೆ, ಹುಣಸೇಗಟ್ಟ ತಾಲ್ಲೂಕು ಪಂಚಾಯತಿಗೆ 20 ಮನೆ, ಗಂಗನಗಟ್ಟ ತಾಲ್ಲೂಕು ಪಂಚಾಯತಿಗೆ 20 ಮನೆ, ಅಲದೂರು ಗ್ರಾಮ ಪಂಚಾಯತಿಗೆ 20 ಮನೆಗಳನ್ನು ಹಂಚಿಕೆ ಮಾಡಿ ಆದೇಶಗಳನ್ನು ಹೊರಡಿಸಲಾಗಿದೆ. ಚನ್ನರಾಯಪಟ್ಟಣ ತಾಲ್ಲೂಕು ಕಂಡಿಗನಹಳ್ಳಿ ಹೋಬಳಿಯಲ್ಲಿ ವಸತಿಹೀನರಿದ್ದು ಅವರುಗಳಿಗೆ ಮನೆಗಳನ್ನು ಹಂಚಲು ಆದೇಶದಲ್ಲಿ ಹೇಳಿರುವಂತೆ...

ಅಧ್ಯಕ್ಷರು :— ಹೇಳಿದ್ದನ್ನೇ ಮತ್ತೆ ಹೇಳಬೇಡಿ. ಬೇಗ ವಿಷಯ ಪ್ರಸ್ತಾಪ ಮುಗಿಸಿ.

ಶ್ರೀ ಬಿ. ಶಿವರಾಮು ಆದೇಶದಲ್ಲಿರುವುದನ್ನು ಹೇಳುತ್ತಿದ್ದೆನಷ್ಟೆ. ತಾವು ಕೊಟ್ಟ ಕಾಲಾವಕಾಶದಲ್ಲಿ ಕೆಲವೊಂದು ವಿಚಾರಗಳನ್ನು ಸದನದಲ್ಲಿ ಹೇಳಿದ್ದೇನೆ. ಆ ವಿಚಾರದಲ್ಲಿ ಏನು ಅನ್ಯಾಯವಾಗಿದೆ ಅದನ್ನು ಸರಿಪಡಿಸತಕ್ಕಂಥದ್ದರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕು. ಅದನ್ನು ಸರಿಪಡಿಸಲು ಕ್ರಮ ತೆಗೆದುಕೊಳ್ಳದಿದ್ದರೆ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಸಂಬಂಧಪಟ್ಟ ಶಾಸಕರುಗಳೆಲ್ಲರು ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಡುವ ಕೆಲಸವನ್ನು ಮಾಡಬೇಕು. ಸರ್ಕಾರದ ಆದೇಶದ ಪ್ರಕಾರ ಸ್ಪಷ್ಟವಾಗಿ ಅನ್ಯಾಯವಾಗಿದೆ ಎಂದು ಗೊತ್ತಾಗುತ್ತಿದೆ. ಸರ್ಕಾರದಲ್ಲಿ ಯಾವುದೇ ರೀತಿ-ನೀತಿ, ಕಾನೂನು ಇಲ್ಲದೆ ಈ ಹಂಚಿಕೆ ವಿಚಾರದಲ್ಲಿ ಉಲ್ಲಂಘನೆ ಆಗಿರತಕ್ಕಂಥದ್ದು ಸ್ಪಷ್ಟವಾಗಿದೆ. ಅದಕ್ಕೋಸ್ಕರ ಸರ್ಕಾರ ನ್ಯಾಯವನ್ನು ಒದಗಿಸಿಕೊಡಬೇಕಾಗಿದೆ. ನಾನು ಹೇಳುತ್ತಿರುವ ವಿಚಾರ ಕೇವಲ ಹಾಸನ ಜಿಲ್ಲೆಗೆ ಮಾತ್ರ ಸೀಮಿತವಾಗಿಲ್ಲ. ಇದು ಎಲ್ಲಾ ಜಿಲ್ಲೆಗಳಿಗೂ ಸಂಬಂಧಪಟ್ಟ ವಿಚಾರವೇ ಆಗಿರುತ್ತದೆ. ಎಲ್ಲಾ ಕಡೆಯೂ ಮನೆಗಳ ಹಂಚಿಕೆ ವಿಚಾರದಲ್ಲಿ ವ್ಯತ್ಯಾಸವಾಗಿದೆ. 1996-97ರ ಹಾಗೆ ಘಟನೆ ಮತ್ತೆ ಮರುಕಳಿಸಬಾರದು ಎಂಬುದು ನನ್ನ ಕೋರಿಕೆ. ಈಗ ಏನು ಅನ್ಯಾಯವಾಗಿದೆ ಅದನ್ನು ಸರಿಪಡಿಸುವ ದಿಕ್ಕಿನಲ್ಲಿ ಕ್ರಮ ತೆಗೆದುಕೊಳ್ಳಬೇಕೆನ್ನುವ ಮಾತನ್ನು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :— ಈಗ ಸದನವನ್ನು ಮುಂದೂಡುತ್ತಿದ್ದೇನೆ. ಭೋಜನಾ ನಂತರ ಮತ್ತೆ 3-00 ಗಂಟೆಗೆ ಸದನ ಸಮಾವೇಶಗೊಳ್ಳುತ್ತದೆ.

(ಸದನವು ಮಧ್ಯಾಹ್ನದ ಭೋಜನಕ್ಕಾಗಿ 1 ಗಂಟೆ 45 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ಮಧ್ಯಾಹ್ನ 3-00 ಗಂಟೆಗೆ ಪುನರ್ ಸಮಾವೇಶಗೊಳ್ಳಲು ನಿರ್ಧರಿಸಿತು.)

(ಮತ್ತೆ ಸದನವು ಮಧ್ಯಾಹ್ನ 3.10 ಗಂಟೆಗೆ ಸಮಾವೇಶಗೊಂಡಿತು ಮಾನ್ಯ ಅಧ್ಯಕ್ಷರು ಶ್ರೀರಮೇಶ್ ಕುಮಾರ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

+ ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ) :— ಮಾನ್ಯ ಅಧ್ಯಕ್ಷರೆ, ಆಶ್ರಯ ಯೋಜನೆಯಡಿಯಲ್ಲಿ ಮನೆಗಳ ಹಂಚಿಕೆಯ ವಿಚಾರದಲ್ಲಿ ಆಗಿರತಕ್ಕಂಥ ತಾರತಮ್ಯದ ಬಗ್ಗೆ ಈಗಾಗಲೇ ನಮ್ಮ ನಾಯಕರು, ಮಿತ್ರರು, ಅಂಕಿಅಂಶಗಳ ಸಮೇತ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈ ಸಮಸ್ಯೆ ನಮ್ಮ ರಾಜ್ಯದಲ್ಲೇ ಅಲ್ಲ. ಈ ರಾಷ್ಟ್ರದಲ್ಲೇ ಒಂದು ದೊಡ್ಡ ಸಮಸ್ಯೆಯಾಗಿದೆ. ಇದು ಬಡವರ ಸಮಸ್ಯೆಯಾಗಿದೆ. ನಾವು ಹಳ್ಳಿಗಳಿಗೆ, ಹೋದರೆ. ಅಲ್ಲಿ ನಮಗೆ ಅವರಿಂದ ಬರತಕ್ಕಂಥ ಪ್ರಪ್ರಥಮ ಬೇಡಿಕೆ ಎಂದರೆ ಇದಾಗಿದೆ. ನಮಗೆ ಮನೆಗಳನ್ನು ಕೊಡಿಸಿ ನಾವು ಗುಡಿಸಲುಗಳಲ್ಲಿ, ಜೋಪಡಿಗಳಲ್ಲಿ ಇಷ್ಟು ವರ್ಷಗಳಿಂದ ಇದ್ದೇವೆನ್ನುವಂಥ ಕೂಗು ನಮಗೆ ಮಾನಸಿಕವಾಗಿ ನೋವು ನೀಡುವಂಥಾದ್ದು ಆಗಿದೆ. ಸರ್ಕಾರ ಈ ಮನೆಗಳನ್ನು ಹಂಚುವಂತಹ ವಿಚಾರದಲ್ಲಿ ಇವರ ಸ್ವಾರ್ಥ ಸಾಧನೆಗೋಸ್ಕರ ಯಾವ ರೀತಿಯಾಗಿ ತಾರತಮ್ಯ ಮಾಡಿದ್ದಾರೆಂಬುದನ್ನು ನಾವು ಪತ್ರಿಕೆಗಳಲ್ಲೂ ತಿಳಿಸಿದ್ದೇವೆ. ನಮ್ಮ ಕ್ಷೇತ್ರದ ಲೋಕಸಭೆಯ ಸದಸ್ಯರು ಆಗಿರುವಂತಹ ಮಾನ್ಯ ಜಾಲಪ್ಪನವರೂ ಸಹ ಒಂದು ಗ್ರಾಮಕ್ಕೆ ನೂರು ಮನೆಗಳನ್ನು ಕೊಟ್ಟಿರುವಂಥಾದ್ದು, ಒಂದು ಹೋಬಳಿಗೆ ಸಾವಿರ ಮನೆಗಳನ್ನು ಕೊಟ್ಟಿರುವಂಥಾದ್ದು ಒಂದೇ ಕ್ಷೇತ್ರಕ್ಕೆ ಮೂರು ಸಾವಿರ ಮನೆಗಳನ್ನು ಕೊಟ್ಟಿರುವಂಥಾದ್ದು ಒಂದೊಂದು ಕ್ಷೇತ್ರಕ್ಕೆ ಸಾವಿರ ಮನೆಗಳನ್ನು ಸಾವಿರದ ಇನ್ನೂರ ಎಪ್ಪತ್ತೈದು ಮನೆಗಳನ್ನು ಕೊಟ್ಟಿರುವಂಥಾದ್ದನ್ನು ಅಂಕಿಅಂಶಗಳ ಸಮೇತ ಸರ್ಕಾರಕ್ಕೆ ಮತ್ತು ಮಾನ್ಯ ಮುಖ್ಯಮಂತ್ರಿಯವರಿಗೂ ಮನವಿಯನ್ನು ಕೊಟ್ಟಿದ್ದಾರೆ. ಕಳೆದ ವಿಧಾನಸಭೆಯಲ್ಲೂ ಸಹ ಇದೇ ವಿಚಾರವನ್ನು ಸರ್ಕಾರಕ್ಕೆ ತಮ್ಮ ಮುಖೇನ ನಾವೆಲ್ಲರೂ ಒತ್ತಾಯ ತಂದಾಗ ಈ ಸದನದಲ್ಲೇ ಒಂದು ಮಾತನ್ನು ಹೇಳಿದರು. ಯಾವುದೇ ಕಾರಣಕ್ಕೂ ತಾರತಮ್ಯ ಮಾಡುವುದಿಲ್ಲ, ಎಲ್ಲರಿಗೂ ಸಮಾನವಾಗಿ ಮನೆಗಳನ್ನು ಹಂಚಿಕೆ ಮಾಡುತ್ತೇವೆನ್ನುವಂತಹ ಮಾತನ್ನು ಹೇಳಿದರು. ಆದರೆ ದುರಾದೃಷ್ಟವೆನೆಂದರೆ ಹೋದ ಸಾರಿ ಯಾವ್ಯಾವ ಕ್ಷೇತ್ರದಲ್ಲಿ ಮನೆಗಳನ್ನು ಕೊಟ್ಟಿರಲಿಲ್ಲ ಅಲ್ಲಿ ನೂರು ಮನೆಗಳನ್ನು ಕೊಟ್ಟರು. ಈ ಸಾರಿ ಮನೆಗಳನ್ನು ಹಂಚಿಕೆ ಮಾಡಿರುವಂಥಹ ವಿಧಾನವನ್ನು ನೋಡಿದರೆ ಈ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಬಡವರ ಕಾರ್ಯಕ್ರಮದಲ್ಲಿ ತಾರತಮ್ಯ ಮಾಡರುವಂಥಾದ್ದನ್ನು ಇದುವರೆಗೂ ನಾವು ಕಂಡಿಲ್ಲವೆನ್ನುವಂಥ ಮಾತನ್ನು ನೇರವಾಗಿ ತಮ್ಮ ಮುಖೇನ ಸರ್ಕಾರಕ್ಕೆ ಹೇಳಬೇಕಾಗಿದೆ. ಇವತ್ತು ಇಂತಹ ಬಡವರ ಕಾರ್ಯಕ್ರಮದಲ್ಲಿ ಈ ರೀತಿಯಾಗಿ ತಾರತಮ್ಯ ಮಾಡುತ್ತಾರೆಂದು ಯಾರೂ ಸಹ ಈ ರಾಜ್ಯದಲ್ಲಿ ನಿರೀಕ್ಷೆ ಮಾಡಿರಲಿಲ್ಲ. ಈ ರೀತಿ ತಮ್ಮ ಇಷ್ಟಾರ್ಥಕ್ಕಾಗಿ, ಸ್ವಾರ್ಥಕ್ಕೋಸ್ಕರ, ಸ್ವೇಚ್ಛಾಚಾರವಾಗಿ ಮನೆಗಳನ್ನು ಹಂಚಿಕೆ ಮಾಡಿರುವಂಥಾದ್ದು ಇಲ್ಲಿಯವರೆಗೂ ನಾವು ಕಂಡಿರಲಿಲ್ಲ. ಸರ್ಕಾರ ಇಲ್ಲಿಯವರೆಗೂ ಈ ವಿಷಯದಲ್ಲಿ ಸಮಾನವಾದಂತಹ ನೀತಿಯನ್ನು ಅನುಸರಿಸಿಕೊಂಡು ಬಂದಿತ್ತು. ತಾಲ್ಲೂಕುವಾರು ಸಮಾನವಾಗಿ ಮನೆಗಳನ್ನು ಹಂಚುವ

ವಿಚಾರದಲ್ಲಿ ಅಲ್ಲಿನ ಜನಸಂಖ್ಯೆಯ ಆಧಾರದ ಮೇಲೆ ಹಂಚಿಕೆ ಮಾಡುವಂತಹ ವ್ಯವಸ್ಥೆಯನ್ನು ನಾವು ಕಂಡುಕೊಂಡು ಬಂದಿದ್ದೆವು. ಆದರೆ ಈ ಸಾರಿ ಒಂದೊಂದಕ್ಕೆ ಎರಡೆರಡು ಆಜ್ಞೆಗಳನ್ನು ಮಾಡಿರುವಂಥಾದ್ದನ್ನು ನಮ್ಮ ನಾಯಕರು ಈಗಾಗಲೇ ಸಭೆಯ ಮುಂದೆ ಮಂಡಿಸಿದ್ದಾರೆ. ಒಂದು ತಾಲ್ಲೂಕಿಗೆ ಒಂದೇ ದಿವಸ ಎರಡು ಆರ್ಡರ್‌ಗಳನ್ನು ಸಪರೇಟಾಗಿ ಕೊಟ್ಟಿರುವಂಥಾದ್ದು, ಒಂದು ಊರಿಗೆ, ಗ್ರಾಮಕ್ಕೆ ನೂರು ಮನೆಗಳನ್ನು ಕೊಟ್ಟಿರುವಂತಹ ಆರ್ಡರ್ ಇದೆ. ಇದಕ್ಕೆ ಸಂಬಂಧಪಟ್ಟಂತಹ ಫೈಲ್‌ಗಳನ್ನು ತಮ್ಮ ಮುಖೇನಾ ಸರ್ಕಾರಕ್ಕೆ ಕಳುಹಿಸಿಕೊಡುತ್ತೇನೆ, ಇದು ಅವರ ಹತ್ತಿರವೂ ಇದೆ. ಒಂದು ಆಜ್ಞೆಯಲ್ಲಿ ಸಮಾನವಾಗಿ ಮನೆಗಳನ್ನು ಹಂಚಬೇಕು. ಆದರೆ ಇವರ ಇಷ್ಟಾರ್ಥವಾಗಿ ಇಬ್ಬಿಬ್ಬರಿಗೆ, ಮೂವರಿಗೆ, ನಾಲ್ಕು ತಾಲ್ಲೂಕುಗಳಿಗೆ, 25 ತಾಲ್ಲೂಕುಗಳಿಗೆ, 30 ತಾಲ್ಲೂಕುಗಳಿಗೆ ಹೀಗೆ ಇವರ ಇಷ್ಟಾರ್ಥವಾಗಿ ಮನೆಗಳನ್ನು ಹಂಚಿಕೆ ಮಾಡಿರುವಂಥಾದ್ದು ಇದು ರಾಜಕೀಯ ಪ್ರೇರತವಾದಂತಹ ಆದೇಶವಾಗಿದೆ. ಇದನ್ನು ತಕ್ಷಣ ವಾಪಸ್ಸು ಪಡೆಯಬೇಕೆಂದು ಹೇಳುತ್ತೇನೆ. ಇವರು ಕಳೆದ ವಿಧಾನಸಭೆಯಲ್ಲೂ ಕೂಡ ಈ ಮನೆಗಳನ್ನು ಹಂಚಿಕೆ ಮಾಡುವಂತಹ ವಿಚಾರದಲ್ಲಿ ತಾರತಮ್ಯ ಮಾಡುವುದಿಲ್ಲವೆನ್ನುವಂತಹ ಭರವಸೆಯನ್ನು ಕೊಟ್ಟಿದ್ದರು. ಆ ಭರವಸೆಯನ್ನು ಇವತ್ತು ಮುರಿದಿದ್ದಾರೆ, ನಿಜ ಹೇಳಬೇಕೆಂದರೆ ಸದನದಲ್ಲಿ ಇವರು ಏನು ಭರವಸೆಯನ್ನು ಕೊಟ್ಟಿದ್ದರೋ ಅದಕ್ಕೆ ವಚನ ಭ್ರಷ್ಟರಾಗಿದ್ದಾರೆಂದು ಹೇಳಿದರೂ ತಪ್ಪಾಗುವುದಿಲ್ಲವೆನ್ನುವಂಥ ಮಾತನ್ನು ಹೇಳಿದರೂ ತಪ್ಪಾಗುವುದಿಲ್ಲವೆಂದು ತಮ್ಮ ಮುಖೇನ ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ತಮಗೂ ಕೋಲಾರದ ವಿಚಾರ ಗೊತ್ತಿದೆ, ಅಲ್ಲಿ ಹೆಚ್ಚು ಹರಿಜನರು, ಹಿಂದಿಳಿದವರು ಇರುವಂತಹ ಜಿಲ್ಲೆಯಾಗಿದೆ. ಈ ಕೋಲಾರ ಕ್ಷೇತ್ರ ಶಾಶ್ವತವಾಗಿ ಲೋಕಸಭೆಗೆ ಮೀಸಲಾಗಿರುವಂಥಾದ್ದು ಇಂತಹ ಕ್ಷೇತ್ರದಲ್ಲಿ ಮನೆಗಳನ್ನು ಹಂಚಿಕೆ ಮಾಡಿರುವಂಥಾದ್ದನ್ನು ನೋಡಿದರೆ ನಮಗೆ ಮಾನಸಿಕವಾಗಿ ನೋವಾಗುತ್ತದೆ. ಇವರು ಮುಳಬಾಗಿಲು ಕ್ಷೇತ್ರಕ್ಕೆ 1275 ಮನೆಗಳನ್ನು ಕೊಡುತ್ತಾರೆ, ಮಾಲೂರಿಗೆ ಹೋಗಿ ನೋಡಿ ಅಲ್ಲಿ 1275 ಮನೆಗಳನ್ನು ಕೊಟ್ಟಿದ್ದಾರೆ, ತಮ್ಮ ಕ್ಷೇತ್ರಕ್ಕೆ ಹೋಗಿ ನೋಡಿ ಅಲ್ಲೂ 1275 ಮನೆಗಳನ್ನು ಕೊಡುತ್ತಾರೆ.

ಅಧ್ಯಕ್ಷರು :— ನನಗಾ ......

ಶ್ರೀ ವಿ. ಮುನಿಯಪ್ಪ :— ಹೌದು ಸ್ವಾಮಿ,

ಅಧ್ಯಕ್ಷರು :— ನಮಗೆ 500 ಮನೆಗಳನ್ನು ಕೊಟ್ಟಿದ್ದಾರೆ.

ಶ್ರೀ ವಿ. ಮುನಿಯಪ್ಪ :— ಮಾನ್ಯ ಅಧ್ಯಕ್ಷರೆ, ತಾವು ದಾಖಲೆ ತರಿಸಿ ನೋಡಿ.

ಅಧ್ಯಕ್ಷರು :— 500 ಮನೆಗಳನ್ನು ಕೊಟ್ಟಿದ್ದಾರೆ.

ಶ್ರೀ ವಿ. ಮುನಿಯಪ್ಪ :— ಒಂದು ಆರ್ಡರ್‌ನಲ್ಲಿ 500 ಮನೆಗಳನ್ನು, ಇನ್ನೊಂದು ಆರ್ಡರ್‌ನಲ್ಲಿ 200, 3ನೇ ಆರ್ಡರ್‌ನಲ್ಲಿ 300, 4ನೇ ಆರ್ಡರ್‌ನಲ್ಲಿ 275 ಮನೆಗಳಂತೆ ನಾಲ್ಕು ಆರ್ಡರ್‌ಗಳನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು :— ಮಾನ್ಯ ಮುನಿಯಪ್ಪನವರೆ, ತಾವು ಕೇಳುವಂಥಾದ್ದಕ್ಕೆ ಎಲ್ಲಕ್ಕೂ ಮಾನ್ಯ ಮಂತ್ರಿಯವರು ಉತ್ತರವನ್ನು ಕೊಡುತ್ತಾರೆ. ಆದರೆ ನಾನು ಹೇಳುವಂಥಾದ್ದು ಎಂದರೆ ಮುಳಬಾಗಿಲು, ಗೌರಿಬಿದನೂರು, ಮಾಲೂರು, ಇವುಗಳ ವಿಷಯ ನನಗೆ ಗೊತ್ತಿಲ್ಲ. ನನ್ನ ಕ್ಷೇತ್ರಕ್ಕೆ 10 ಸಾರಿ ಕೇಳಿದ್ದುದು ನಿಜ, ಎಲ್ಲರಿಗೂ ಕೊಟ್ಟಂತೆ 200, 300 ಹೆಚ್ಚಿಗೆ ಕೊಟ್ಟಿರುವಾಗ ಎರಡೆರಡು ಆರ್ಡರ್‌ಗಳನ್ನು ಹೊರಡಿಸಿ ನನಗೆ ಟೋಟಲ್‌ಲಾಗಿ 500 ಮನೆಗಳನ್ನು ಕೊಟ್ಟಿರುವಂಥಾದ್ದು. ನನಗೆ 1200 ಮನೆಗಳನ್ನು ಕೊಟ್ಟಿಲ್ಲ.

ಶ್ರೀ ವಿ. ಮುನಿಯಪ್ಪ :— ಮಾನ್ಯ ಅಧ್ಯಕ್ಷರೆ, ನಾನು ಎಲ್ಲಾ ಆರ್ಡರ್‌ಗಳ ಪ್ರತಿಯನ್ನು ತಮಗೆ ಬೆಳಿಗ್ಗೆ ಕೊಡುತ್ತೇನೆ.

ಅಧ್ಯಕ್ಷರು :— ನನಗೆ 1275 ಮನೆಗಳನ್ನು ಶ್ರೀನಿವಾಸಪುರಕ್ಕೆ ಕೊಟ್ಟಿದ್ದರೆ ಅದರಲ್ಲಿ 600 ಮನೆಗಳನ್ನು ಅವರಿಗೆ ವಾಪಸ್ಸು ಕೊಡುತ್ತೇನೆ.

ಶ್ರೀ ವಿ. ಮುನಿಯಪ್ಪ :— ಆಯಿತು, ನಾನು ಬೆಳಿಗ್ಗೆ ನಿಮಗೆ ಈ ದಾಖಲೆಗಳನ್ನು ಕೊಟ್ಟು ನಂತರ ನಿಮ್ಮನ್ನು ಬಂದು ಕೇಳುತ್ತೇನೆ. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ ಇವತ್ತು ಶಿಡ್ಲಘಟ್ಟಕ್ಕೆ 200 ಮನೆಗಳನ್ನು ಮಾತ್ರ ಕೊಟ್ಟಿದ್ದಾರೆ. ಚಿಕ್ಕಬಳ್ಳಾಪುರಕ್ಕೆ 200 ಮನೆಗಳನ್ನು ಮಾತ್ರ ಕೊಟ್ಟಿದ್ದಾರೆ. ನಾವು ಜನರಿಗೆ ಅನ್ಯಾಯವಾದಾಗ ಕೇಳಬೇಕೆಂದು ಇಲ್ಲಿಗೆ ನಮ್ಮನ್ನು ಕಳುಹಿಸಿದ್ದಾರೆ. ಅವರಿಗೆ ನಾವು ಅಷ್ಟು ಮಾಡಲಿಲ್ಲವೆಂದರೆ ಹೇಗೆ? ನಮಗೆ ನೀವು ಮನೆಗಳನ್ನು ಕೊಟ್ಟಿಲ್ಲವೆಂದು ನೇರವಾಗಿ ಹೇಳುತ್ತಿದ್ದೇನೆ. ನಮ್ಮ ಜನರು ನಮ್ಮ ಮೇಲೆ ಆರೋಪ ಮಾಡುತ್ತಾರೆ.

ಅಧ್ಯಕ್ಷರು :— ನಮ್ಮಲ್ಲಿ ಮನೆಗಳು ಜಾಸ್ತಿಯಾಗಿದೆ ಎಂಬ ಅಭಿಪ್ರಾಯ ಇವರಿಗಿದೆ. ಇದಕ್ಕೆ ಕಾರಣ ನನಗಿಂತ ಹಿಂದೆ ಇದ್ದಂತಹ ಶಾಸಕರು ಐದು ವರ್ಷಗಳ ಅವಧಿಯಲ್ಲಿ ಒಂದೂ ಮನೆಯನ್ನೂ ಕಟ್ಟಲಿಲ್ಲ. ವಾರ್ಷಿಕವಾಗಿ ಏನು ಹಣ ಬರುತ್ತಾ ಇತ್ತು, ಅದೆಲ್ಲವನ್ನೂ ಲ್ಯಾಪ್ಸ್ ಮಾಡಿಬಿಟ್ಟರು. ಈ ಮನೆಗಳ ಹಣ ಏನು ಇರುತ್ತದೆ ಆ ಹಣ ಲ್ಯಾಪ್ಸ್ ಆಗುವುದಿಲ್ಲ. ಇಲ್ಲಿ ಮನೆಗಳನ್ನು ಕಟ್ಟದೆ ಹೋದರೂ ಹಾಗೆ ಹಣ ಉಳಿಯುತ್ತದೆ. ನಾನು ಶಾಸಕನಾಗಿ ಬಂದ ಮೇಲೆ ಹಿಂದಿನ ವರ್ಷದ್ದು ಎಲ್ಲವನ್ನೂ ಕ್ರೋಢೀಕರಿಸಿ ನನಗೆ ಬಂದಂತಹ ಹಣವೆಲ್ಲವನ್ನೂ ಸೇರಿಸಿ ಮನೆಗಳನ್ನು ಕಟ್ಟಿಸಿದೆ. ಈ ರೀತಿಯಾಗಿ ನಮಗೆ ಮನೆಗಳು ಜಾಸ್ತಿಯಾಗಿದೆ. ಹಾಗಾಗಿ ನನ್ನ ಕ್ಷೇತ್ರದಲ್ಲಿ ಜಾಸ್ತಿ

ಮನೆಗಳಾಗಿವೆ. ಬೇಕಾದರೆ ಡಾಕ್ಯುಮೆಂಟ್‌ಗಳನ್ನು ತರಿಸಿ ತೋರಿಸುತ್ತೇನೆ. ಆದರೆ ನಿಮ್ಮಲ್ಲಿ ಏನಾಗಿದೆ ಎಂದರೆ, ನೀವು ಹಿಂದೆಯೂ ಶಾಸಕರಾಗಿದ್ದಿರಿ, ಈಗಲೂ ಶಾಸಕರಾಗಿದ್ದೀರಿ, ಆಯಾ ವರ್ಷದ್ದು ಆಯಾ ವರ್ಷಕ್ಕೇ ಹಂಚಿಕೆ ಮಾಡಿದ್ದೀರಿ. ಒಂದು ರೀತಿಯಲ್ಲಿ ಅವರು ನನಗೆ ಉಪಕಾರ ಮಾಡಿದರು. ಅವರು ಖಾಲಿ ಬಿಟ್ಟಿದ್ದರು, ನಾನು ಭರ್ತಿಮಾಡಿಕೊಂಡೆ, ಅಷ್ಟೇ. ನಿಮ್ಮ ಗೆಳೆಯರನ್ನೇ ಕೇಳಿ ನೋಡಿ.

ಶ್ರೀ ವಿ. ಮುನಿಯಪ್ಪ :— ನಿಮ್ಮಲ್ಲಿ 1993-94 ನೇ ಸಾಲಿನದ್ದು ಉಳಿಕೆಯಿದ್ದು ಅದು ಮುಂದುವರೆದಿದ್ದರೆ ಅದರ ಬಗ್ಗೆ ನನ್ನ ಆಕ್ಷೇಪವಿಲ್ಲ. ಈ ಹೊಸ ಸರ್ಕಾರ ಬಂದ ಮೇಲೆ, ಈ ವಸತಿ ಸಚಿವರು ಅಧಿಕಾರ ತೆಗೆದುಕೊಂಡ ಮೇಲೆ, ಇವರ ಕಾಲದಲ್ಲಿ ಹಂಚಿಕೆಯಾಗಿರತಕ್ಕಂಥ ವಿಚಾರಕ್ಕೆ ಮಾತ್ರ ನಾನು ಸೀಮಿತವಾಗಿದ್ದೇನೆ. ಶಿಡ್ಲಘಟ್ಟಕ್ಕೆ 200 ಮನೆ ಕೊಟ್ಟಿದ್ದಾರೆ, ಮೀಸಲು ಕ್ಷೇತ್ರವಾದ ಚಿಕ್ಕಬಳ್ಳಾಪುರಕ್ಕೆ 200 ಮನೆ ಕೊಟ್ಟಿದ್ದಾರೆ, ಕೆ.ಜಿ.ಎಫ್.ನಲ್ಲಿ 200 ಮನೆ ಕೊಟ್ಟಿದ್ದಾರೆ. ಇನ್ನೂ ಒಂದು ದುರಾದೃಷ್ಟವೆಂದರೆ, ಆಡಳಿತ ಪಕ್ಷಕ್ಕೆ ಸೇರಿದಂಥ ಬೇತಮಂಗಲ ಕ್ಷೇತ್ರಕ್ಕೆ ಕೇವಲ 350 ಮನೆ ಕೊಟ್ಟಿದ್ದಾರೆ. ಬೈರೇಗೌಡರ ಕ್ಷೇತ್ರಕ್ಕೆ 900 ಮನೆ ಕೊಟ್ಟಿದ್ದಾರೆ. ನಾನು ಎಲ್ಲಾ ಅಂಕಿ ಅಂಶಗಳನ್ನು ತೆಗೆದುಕೊಂಡಿದ್ದೇನೆ. ಅವರಿಗೆ 900 ಮನೆ ಕೊಟ್ಟಿದ್ದಾರೆ, ಅದು ಸಾಲದು, ಇವರಿಗೆ ಜಾಸ್ತಿ ಕೊಟ್ಟಿದ್ದಾರೆ ಎಂದು ಅವರ ಕಿತ್ತಾಟವಿದ್ದುದ್ದು. ಬಹುಶಃ ಅದೇ ಪತ್ರಿಕೆಯಲ್ಲಿ ಬಂದಿದ್ದಂಥಾದ್ದು. ಮುಳಬಾಗಿಲು, ಮಾಲೂರು, ಗೌರಿಬಿದನೂರು, ಶ್ರೀನಿವಾಸಪುರ, ಚಿಂತಾಮಣಿ ಕ್ಷೇತ್ರಗಳಲ್ಲಿ ಜಾಸ್ತಿ ಮನೆಗಳನ್ನು ಕೊಟ್ಟಿದ್ದಾರೆ. ಪಕ್ಕದ ಕ್ಷೇತ್ರದಲ್ಲಿ ಇರತಕ್ಕಂಥವರು ನಾವು. ಅಲ್ಲಿ ನಮ್ಮ ಜನಗಳು ಏನು ಹೇಳುತ್ತಾರೆಂದರೆ, ಅಲ್ಲಿ ನೂರಾರು ಮನೆಗಳನ್ನು ಕಟ್ಟುತ್ತಿದ್ದಾರೆ, ನೀವು ಏನು ಮಾಡುತ್ತಿದ್ದೀರಿ. ಕನಿಷ್ಟ ನೀವು ಸರ್ಕಾರದ ಮೇಲೆ ಒತ್ತಾಯವನ್ನು ತರಲಿಲ್ಲ, ಬೇಡಿಕೆಯನ್ನು ತರಲಿಲ್ಲ, ಏನು ಮಾಡುತ್ತಿದ್ದೀರಿ ಎಂದು ಕೇಳುತ್ತಾರೆ. ನಮ್ಮನ್ನು ಆಶ್ರಯ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ಅದು ನಮ್ಮ ದುರಾದೃಷ್ಟ. ಕೇವಲ 200 ಮನೆಗಳನ್ನು ಕೊಟ್ಟು 350 ಹಳ್ಳಿಗಳಿಗೆ ಕೊಡಿ ಎಂದರೆ ಹೇಗೆ? ಕನಿಷ್ಟವೆಂದರೆ ಒಂದು ಹಳ್ಳಿಗೆ ಒಂದು ಮನೆಯನ್ನಾದರೂ ಕೊಡಲು ಆಗದಂಥ ಸ್ಥಿತಿಯನ್ನು ನೀವು ನಮಗೆ ತಂದಿಟ್ಟರೆ, ನಾವು ಯಾವ ರೀತಿ ಹಂಚಿಕೆ ಮಾಡಬೇಕು? ರಾಜ್ಯದಲ್ಲಿರುವ ಎಲ್ಲಾ ಕ್ಷೇತ್ರಗಳಿಗೂ ಕೇವಲ 200 ಮನೆ ಕೊಡುವುದು ಎನ್ನುವುದಾದರೆ ನಾವೆಲ್ಲರೂ ಅದನ್ನು ಒಪ್ಪುತ್ತೇವೆ. ಒಂದು ಕ್ಷೇತ್ರದಲ್ಲಿ ಎರಡು ಸಾವಿರ ಮನೆ, ಒಂದೂವರೆ ಸಾವಿರ ಮನೆಗಳನ್ನು ಕೊಡುವುದು, ಇನ್ನೊಂದು ಕ್ಷೇತ್ರದಲ್ಲಿ 200 ಮನೆ ಕೊಡುವುದಾದರೆ, ಆ ಕ್ಷೇತ್ರದ ಪ್ರತಿನಿಧಿಯ ಸ್ಥಿತಿ ಏನು? ಆ ಕ್ಷೇತ್ರದ ಪ್ರತಿನಿಧಿ ಎಲ್ಲಾದರೂ ಹೋಗಲಿ ಎಂದರೂ ಆ ಕ್ಷೇತ್ರದಲ್ಲಿರತಕ್ಕಂಥ ಬಡವರ ಗತಿ ಏನು? ಈ ರೀತಿಯಾದಂಥ ತಾರತಮ್ಯದ ಹಂಚಿಕೆಯಿಂದ ಆ ಬಡವರಿಗೆ ನೀವು ಅನ್ಯಾಯ ಮಾಡುತ್ತೀರೇನು? ಈ ರೀತಿಯಾದಂಥ ವ್ಯವಸ್ಥೆಯನ್ನು

ನಾವು ಇಲ್ಲಿಯವರೆಗೆ ಯಾವುದೇ ಸರ್ಕಾರದಲ್ಲಿ ಕಂಡಿರಲಿಲ್ಲ. ಈ ರೀತಿ ಇಷ್ಟಾನುಸಾರ, ಸ್ವೇಚ್ಛಾನುಸಾರ ಮನೆಗಳನ್ನು ಹಂಚಿಕೆ ಮಾಡತಕ್ಕಂಥಾದ್ದು ಬಹಳ ಖಂಡನೀಯ. ಇದು ಬಡವರ ಮನೆಗಳ ಹಂಚಿಕೆಯಲ್ಲಿ ಇವರು ಮಾಡುತ್ತಿರಿತಕ್ಕಂಥ ರಾಜಕೀಯ. ರಾಜಕೀಯ ಪ್ರೇರಿತವಾದಂಥ ಈ ನಿರ್ಧಾರವನ್ನು ಅವರು ದಯಮಾಡಿ ವಾಪಸ್ಸು ಪಡೆಯಬೇಕು. ಇವರು ಏನು ತಾರತಮ್ಯ ಮಾಡಿದ್ದಾರೆ, ಏನು ಅನ್ಯಾಯ ಮಾಡಿದ್ದಾರೆ, ಅದರಲ್ಲೂ ವಿಶೇಷವಾಗಿ ಬಡವರ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವಲ್ಲಿ ಇವರು ಮಾಡಿರುವಂಥ ಅನ್ಯಾಯಕ್ಕೆ ಜವಾಬ್ದಾರಿ ಹೊತ್ತು ಇವರು ರಾಜೀನಾಮೆ ಕೊಡಬೇಕು ಎಂದು ಹೇಳಿ, ನಮ್ಮ ನಾಯಕರು ತಂದಿರತಕ್ಕಂಥ ಈ ಸೂಚನೆಗೆ ನಿರ್ಣಯವನ್ನು ಸಂಪೂರ್ಣ ಬೆಂಬಲಿಸುತ್ತೇನೆ. ಮತ್ತು ಎಲ್ಲೆಲ್ಲಿ ಕಡಿಮೆ ಕೊಟ್ಟಿದ್ದಾರೆ, ಆ ಕ್ಷೇತ್ರಗಳಲ್ಲಿ ದಯಮಾಡಿ ಯಾವುದೇ ತಾರತಮ್ಯವಿಲ್ಲದೆ ರಾಜ್ಯದಲ್ಲಿರುವ ಎಲ್ಲಾ ಕ್ಷೇತ್ರಗಳನ್ನೂ ಸಮಾನತೆಯಿಂದ ಕಾಣತಕ್ಕಂಥ ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು :— ರಾಜೀನಾಮೆ ಕೊಡಿ ಎಂದೂ ಹೇಳುತ್ತೀರಿ, ಮನೆಗಳನ್ನು ಕೊಡಿ ಎಂದು ಕೇಳುತ್ತೀರಿ, ಇದು ಹೇಗಾಗುತ್ತದೆ?

ಶ್ರೀ ವಿ. ಮುನಿಯಪ್ಪ :— ಅವರು ರಾಜೀನಾಮೆ ಕೊಟ್ಟರೆ ಸರ್ಕಾರ ಇರುತ್ತದಲ್ಲವೇ? ದಯಮಾಡಿ ಮುಖ್ಯಮಂತ್ರಿಗಳು ಇದರ ಜವಾಬ್ದಾರಿ ತೆಗೆದುಕೊಳ್ಳಬೇಕು. ಎಲ್ಲೆಲ್ಲಿ ಅನ್ಯಾಯವಾಗಿದೆ, ಅದನ್ನು ಸರಿಪಡಿಸಿ ಎಲ್ಲಾ ಕ್ಷೇತ್ರಗಳಿಗೂ ಸಮಾನವಾಗಿ ಮನೆಗಳ ಹಂಚಿಕೆ ಮಾಡತಕ್ಕಂಥ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ತಮ್ಮ ಮುಖೇನ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಅಧ್ಯಕ್ಷರಿಗೆ ಕೈ ಮುಗಿದು ಪ್ರಾರ್ಥನೆ ಮಾಡುವುದೇನೆಂದರೆ, ನೀವು ಇರತಕ್ಕಂಥ ಸ್ಥಾನಕ್ಕೆ ಭಯಪಟ್ಟೋ ಅಥವಾ ಗೌರವ ಕೊಟ್ಟೋ ನಿಮಗೆ ಮನೆಗಳನ್ನು ಕೊಡುತ್ತಾರೆ, ನಮಗೂ ಆ ಗೌರವವನ್ನು ಕೊಡಿಸಿಕೊಡಿ. ನಾವೂ ಸಹ ಈ ಸದನದ ಸದಸ್ಯರಾಗಿ ಸಮಾನವಾದಂಥ ಗೌರವ ಪಡೆಯತಕ್ಕಂಥ ಒಂದು ಹಕ್ಕಿನ ರಕ್ಷಣೆ ಮಾಡತಕ್ಕಂಥ ಜವಾಬ್ದಾರಿಯನ್ನು ತಾವು ತೆಗೆದುಕೊಳ್ಳಬೇಕು, ಸರ್ಕಾರದ ಮೇಲೆ ಒತ್ತಾಯ ತರಬೇಕು ಎಂದು ತಮ್ಮ ಮುಖೇನ ಮತ್ತೊಮ್ಮೆ ಸರ್ಕಾರವನ್ನು ಒತ್ತಾಯ ಮಾಡಿ, ತಾರತಮ್ಯವಾಗಿರತಕ್ಕಂಥಾದ್ದನ್ನು ಸರಿಪಡಿಸಬೇಕು ಎನ್ನುವುದಕ್ಕೆ ಸಮಂಜಸವಾದ ಉತ್ತರವನ್ನು ನಾವು ನಿರೀಕ್ಷೆ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಮುನಿಯಪ್ಪನವರು ರಾಜೀನಾಮೆ ಕೇಳುವುದಕ್ಕೆ ಹೊರಟಿದ್ದಾರೆ. ಅವರವರೇ ರಾಜೀನಾಮೆ ಕೊಡಲು ತಯಾರಿದ್ದಾಗ ಇವರು ಏಕೆ ಕೇಳುವುದಕ್ಕೆ ಹೋಗಬೇಕು ಎನ್ನುವುದು ನನ್ನ ಪ್ರಶ್ನೆ.

ಅಧ್ಯಕ್ಷರು :— ಭಯ ಪಡುತ್ತಾರೆ ಎಂದು ಹೇಳಿದರು. ಆದರೆ ಈ ಅಧಿವೇಶನ ಮುಗಿದು ಹೋದರೆ ಯಾರೂ ನನಗೆ ಸಿಗುವುದಿಲ್ಲ. ನಾನು ಅವರನ್ನೆಲ್ಲಾ ನೋಡುವುದು ಪುನಃ ಇಲ್ಲಿಗೆ ಬಂದ ಮೇಲೆಯೇ. ಅವರು ಯಾರಿಗೂ ಭಯಪಡುವುದಿಲ್ಲ, ಕೇರ್ ಮಾಡುವುದೂ ಇಲ್ಲ.

ಶ್ರೀಮತಿ ಪ್ರಮೀಳ ನೇಸರ್ಗಿ :— ಬೆಂಗಳೂರು ನಗರದಲ್ಲಿ ಯಾರಿಗೂ ಒಂದೇ ಒಂದು ಮನೆ ಕೊಟ್ಟಿಲ್ಲ. ಮುನಿಯಪ್ಪನವರಿಗೆ 200 ಮನೆಯಾದರೂ ಸಿಕ್ಕಿದೆ. ಅದಕ್ಕೋಸ್ಕರ ಇವತ್ತು ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು :— ಬೆಂಗಳೂರಿನವರಿಗೆ ಏನೇನು ಕೊಡಬೇಕು ಎಂದು ಹೇಳಿ. ಸಂಚುರಿ ಕ್ಲಬ್ ನಿಮಗೆ, ಬೆಸ್ಟ್ ಕ್ಲಬ್ ನಿಮಗೆ, ಕಬ್ಬನ್ ಪಾರ್ಕ್ ನಿಮಗೆ, ಲಾಲ್‌ಬಾಗ್ ನಿಮಗೆ, ಎಂ.ಟಿ.ಆರ್. ನಿಮಗೆ. ಮತ್ತೆ ಮನೆಯನ್ನೂ ತಂದು ಕೊಡಬೇಕೇ?

ಶ್ರೀಮತಿ ಪ್ರಮೀಳ ನೇಸರ್ಗಿ :— ನಮಗೆ ಮನೆ ಕೊಟ್ಟಿಲ್ಲ, ಎ.ಪಿ.ಎಂ.ಸಿ. ದುಡ್ಡು ಇಲ್ಲ, ಯಾವುದೇ ಒಂದು ಹಣ ಬೆಂಗಳೂರಿನ ಶಾಸಕರಿಗೆ ಸಿಗುತ್ತಿಲ್ಲ. ನಾವು ಏನು ಮಾಡುವುದು?

ಅಧ್ಯಕ್ಷರು :— ಅದನ್ನು ನಾವು ಪ್ರತ್ಯೇಕವಾಗಿ ತೆಗೆದುಕೊಳ್ಳೋಣ.

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ :— ಇಲ್ಲಿ ಇಷ್ಟೆಲ್ಲಾ ಕಿತ್ತಾಡುತ್ತಿದ್ದಾರೆ. ನಾವು ಹಳ್ಳಿಗಳಿಗೆ ಹೋದರೆ, ನೀವು ನಮಗೆ ಒಂದು ಮನೆಯನ್ನೂ ಕೊಟ್ಟಿಲ್ಲ ಎಂದು ಎಲ್ಲಿಗೆ ಹೋದರೂ ಹೇಳುತ್ತಾರೆ.

ಶ್ರೀಮತಿ ಪ್ರಮೀಳ ನೇಸರ್ಗಿ :— ಬೆಳಗಿನಿಂದ ಸಂಜೆಯವರೆಗೆ ಕೇವಲ ಕ್ಯಾರೆಕ್ಟರ್ ಸರ್ಟಿಫಿಕೇಟ್‌ಗಳಿಗೆ ಸೈನ್ ಹಾಕುವುದು ಬಿಟ್ಟರೆ ನಮಗೆ ಏನೇನೂ ಕೆಲಸವಿಲ್ಲ. ಏಕೆಂದರೆ ಇಲ್ಲಿ ಕಾರ್ಪೋರೇಟರ್‌ಗಳಿದ್ದಾರೆ. ಅಲ್ಲಿ ಏನಾದರೂ ಕಾಮಗಾರಿ ಆಗಬೇಕಾದರೆ ಕಾರ್ಪೋರೇಟರ್‌ಗಳು ಬೇಕು. ನಾವು ಕೇವಲ ಅಲಂಕಾರಕ್ಕಾಗಿ ಏಕೆ ಇರಬೇಕು?

ಅಧ್ಯಕ್ಷರು :— ಕಾರ್ಪೋರೇಷನ್ ವರ್ಕ್ಸ್ ಕಮಿಟಿಗೂ, ನಿಮಗೂ ಏನೂ ಸಂಬಂಧವಿಲ್ಲವೇ?

ಶ್ರೀಮತಿ ಪ್ರಮೀಳ ನೇಸರ್ಗಿ :— ಇಲ್ಲ.

ಅಧ್ಯಕ್ಷರು :— ನಿಮಗೆ ವರ್ಕ್ಸ್ ಕಮಿಟಿಯೂ ಇಲ್ಲ, ಖಾತೆಯೂ ಇಲ್ಲ. ಬರೀ ಕ್ಯಾರೆಕ್ಟರ್ ಸರ್ಟಿಫಿಕೇಟ್‌ಗಳಿಗೆ ಸೈನ್ ಹಾಕುವುದೇ?

ಶ್ರೀಮತಿ ಪ್ರಮೀಳ ನೇಸರ್ಗಿ :— ನಮಗೆ ಯಾವುದೂ ಇಲ್ಲ. ನಾವು ಖಾತೆ ಮಾಡುವುದು ಕೇಳುತ್ತಿಲ್ಲ, ನಾವು ಕೇಳುತ್ತಿರತಕ್ಕಂಥಾದ್ದು ಏನೆಂದರೆ..

ಶ್ರೀ ಎಲ್.ಆರ್. ಶಿವರಾಮೇಗೌಡ :— ನಗರಗಳಲ್ಲಿರತಕ್ಕಂಥ ಶಾಸಕರಿಗೆ ತಲೆನೋವೇ ಇಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :— ನಗರದಲ್ಲಿಲ್ಲ. ನಾವು ಹಳ್ಳಿಗಳಲ್ಲಿರುವವರು. ನಮಗೆ ಅನ್ಯಾಯವಾಗಿದೆ. ನಮ್ಮ ತಾಲ್ಲೂಕಿಗೆ ಕೊಡಲೇ ಇಲ್ಲ. ತಾವು ದಯವಿಟ್ಟು ನಮಗೂ ಒಂದು ನಿಮಿಷ ಸಮಯ ಕೊಡಬೇಕು.

ಅಧ್ಯಕ್ಷರು :— ಇದು ಪಾಲಿಸಿ ಮ್ಯಾಟರ್. ನಗರ ಪ್ರದೇಶಗಳಲ್ಲಿ, ವಿಶೇಷವಾಗಿ ದೊಡ್ಡ ನಗರಗಳಲ್ಲಿ ಹೌಸಿಂಗ್ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರದ ಮಟ್ಟದಲ್ಲಿ ತೀರ್ಮಾನ ಮಾಡಬೇಕು. ಇವತ್ತಿನ ಹೌಸಿಂಗ್ ಪಾಲಿಸಿಗೆ ಅನ್ವಯಿಸುವಂತೆ ನಗರಗಳಿಗೆ ಏನೂ ಇಲ್ಲ. ನೀವು ಮುಂದೆ ಅವಕಾಶ ಸಿಕ್ಕಾಗ ಅದನ್ನು ಹೇಳಿ. ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಇದನ್ನು ಹೇಳಿ.

ಶ್ರೀಮತಿ ಪ್ರಮೀಳ ನೇಸರ್ಗಿ :— ನಮ್ಮಲ್ಲಿ ಬಡವರು ಇಲ್ಲವೇ? ನಮ್ಮಲ್ಲಿ 36 ಸ್ಲಂಗಳಿವೆ.

ಅಧ್ಯಕ್ಷರು :— ಬೆಂಗಳೂರು ತುಂಬಾ ಬಡವರು ಇದ್ದಾರೆ. ಇಲ್ಲ ಎಂದು ನಾನು ಹೇಳಲಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :— ನನ್ನ ಕ್ಷೇತ್ರದಲ್ಲಿ ಒಂದು ತಾಲ್ಲೂಕಿಗೆ ಕೊಟ್ಟು, ಇನ್ನೊಂದು ತಾಲ್ಲೂಕಿಗೆ ಕೊಡಲಿಲ್ಲ. ಅದರ ಗತಿ ಏನು? ಬೀದರ್‌ನಲ್ಲಿ ಎರಡು ತಾಲ್ಲೂಕುಗಳಿಗೆ ಕೊಟ್ಟರು. ಬಾಕಿ ತಾಲ್ಲೂಕಿಗೆ ಕೊಡಲಿಲ್ಲ. ಅದರ ಬಗ್ಗೆ ಸ್ವಲ್ಪ ಹೇಳಬೇಕಲ್ಲವೇ? ಬಸವಕಲ್ಯಾಣಕ್ಕೆ ಕೊಟ್ಟರು, ಹುಮ್ನಾಬಾದ್‌ಗೆ ಕೊಟ್ಟರು. ಆದರೆ ಬೀದರ್‌ನ ಔರಾದ್ ಎಲ್ಲಾ ತಾಲ್ಲೂಕುಗಳಿಗಿಂತ ಹಿಂದುಳಿದಿದೆ. ಅಲ್ಲಿ ಒಂದು ಮನೆಯನ್ನೂ ಕೊಟ್ಟಿಲ್ಲ. ಅಲ್ಲಿಯೂ ಕೊಡಬೇಕಿತ್ತಲ್ಲವೇ?

ಅಧ್ಯಕ್ಷರು :— ನೀವು ಅಂಥ ಸ್ಥಿತಿಗೆ ತಂದಿಟ್ಟುಕೊಂಡರೆ ನಾನು ಏನು ಮಾಡಲಿ? ಕಾಡನ್ನು ಮಂಜುನಾಥ್‌ರವರಿಗೆ ಬಿಟ್ಟು ನೀವು ಹೊರಟುಬಿಟ್ಟಿರಿ. ನೀವು ಮಾಡಿಕೊಂಡಿದ್ದಕ್ಕೆ ನಾನು ಏನು ಮಾಡಲಿ ಹೇಳಿ? ಇದು ಸ್ವಯಂಕೃತಾಪರಾಧ. ಆರಾಮವಾಗಿ ಮರದ ನೆರಳಿನಲ್ಲಿ ಇರುವುದು ಬಿಟ್ಟು ಬಿಸಿಲಿಗೆ ಏಕೆ ಹೋದಿರಿ ನೀವು? ಮಂಜುನಾಥ್‌ಅವರನ್ನು ನೋಡಿ. ಈಗ ಅವರು ಹೇಗಾಗಿದ್ದಾರೆ ಎಂದು ನೋಡಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :— ಈಗ ಅವರೂ ಸಹ ನೆರಳು ಬಿಟ್ಟು ಹೊರಗೆ ಬರುವವರಾಗಿದ್ದಾರಲ್ಲಾ. ಕನಿಷ್ಟ ಒಳ್ಳೆಯದಾದರೂ ಮಾಡಿ, ಕೆಡುಕು ಮಾಡಬೇಡಿ. ಒಬ್ಬರಿಗೆ ಕೊಟ್ಟು, ಒಬ್ಬರಿಗೆ ಕೊಡದಿರುವುದು ಬೇಡ ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು :— ಮುಂದೆ ನಿಮಗೆ ಇಂಥ ಸಂಧಿಗ್ದತೆ ಬಂದಾಗ ದಯಮಾಡಿ ಶಿವರಾಮೇಗೌಡರ ಅಡ್ವೈಸ್ ತೆಗೆದುಕೊಳ್ಳಿ. ಅವರಿಗೆ ನೆರಳು ಎಲ್ಲಿ ಇರುತ್ತದೆ ಎನ್ನುವುದು ಗೊತ್ತಿರುತ್ತದೆ.

ಶ್ರೀ ಎಲ್.ಆರ್. ಶಿವರಾಮೇಗೌಡ :— ನಾನು ಏನು ಹೇಳುತ್ತೇನೆಂದರೆ, ಈಗಾಗಲೇ ಗುರುಪಾದಪ್ಪನವರಿಗೆ ನಾವು ಸ್ವಯಂಕೃತಾಪರಾಧ ಮಾಡಿಬಿಟ್ಟಿದ್ದೇವೆ ಎಂದು ಅರಿವಾಗಿದೆ. ಈಗ ಅಡ್ವೈಸ್ ಮಾಡಿ ಏನೂ ಪ್ರಯೋಜನವಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :— ನೀವು ಅಂಥ ಯೋಚನೆಯನ್ನು ಮಾಡಬೇಡಿ. ನಮ್ಮಲ್ಲಿ ಅಂಥದ್ದ್ಯಾವುದೂ ಇಲ್ಲ. ಬಹಳ ಸಂತೋಷದಿಂದ ಆರಾಮಾಗಿದ್ದೇನೆ. ನಾನು ಹೇಳುವುದೇನೆಂದರೆ, ಔರಾದ್‌ಗೆ ಕೊಡಲಿಲ್ಲ. ಏಕೆ? ಹೀಗೆ ತಾರತಮ್ಯ ಮಾಡುವುದಕ್ಕೆ ಕಾರಣವೇನು ಎಂದು ಕೇಳಬೇಕೆಂದಿದ್ದೇನೆ. ತಾವು ಸಮಯ ಕೊಟ್ಟರೆ ಮಾತನಾಡುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ನೆರಳು ಎಲ್ಲಿ ಸಿಗುತ್ತದೆ ಅಲ್ಲಿಗೇ ಹೋಗುವಂಥವನು ನಾನು, ನನ್ನ ಹಿಂಬಾಲಕನಾಗಿರಲಿ ಎಂದು ಅವರು ಹೇಳುತ್ತಿದ್ದಾರಷ್ಟೇ.

ಅಧ್ಯಕ್ಷರು:— ರೇವಣ್ಣನವರೇ, ಹಷ್ಮಿಯವರೂ ಸಹ ನೋಟೀಸಿಗೆ ಸಹಿ ಹಾಕಿದ್ದಾರೆ. ಅವರು ಎರಡು ನಿಮಿಷ ಮಾತನಾಡಲಿ. ಅವರು ಮುಗಿಸಿದ ಮೇಲೆ ತಾವು ಉತ್ತರ ಕೊಡಿ.

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ (ಬೀದರ್) :— ಮಾನ್ಯ ಸಭಾಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ವಿವರವಾಗಿ ಹೇಳಿದ್ದಾರೆ. ನಾನು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ಪರಿಸ್ಥಿತಿಯೇ ಬೇರೆಯಾಗಿದೆ. ನಾನು ನಮ್ಮ ಮನೆಗೆ ಹೋಗುತ್ತಿಲ್ಲ. ಒಂದು ತಿಂಗಳಾಗಿದೆ. ನಮ್ಮ ಪರಿಸ್ಥಿತಿ ಹಾಗಾಗಿದೆ. ನಾನು ಗಂಭೀರವಾಗಿ ಹೇಳುತ್ತಿದ್ದೇನೆ. ಮಾನ್ಯ ಸಚಿವರಿಗೂ ನಾನು ಹೇಳಿದೆ, ನಿಮ್ಮ ಕಾರ್ಯದರ್ಶಿಯವರಿಗೂ ಹೇಳಿದೆ.

ಶ್ರೀ ಎಲ್.ಆರ್. ಶಿವರಾಮೇಗೌಡ :— ಅಧ್ಯಕ್ಷರೇ, ನೀವು ಕೇಳಿಸಿಕೊಳ್ಳಲಿಲ್ಲ. ಒಂದು ತಿಂಗಳಿನಿಂದ ನಾನು ಮನೆಗೆ ಹೋಗುತ್ತಿಲ್ಲ, ನಾನು ಎಲ್ಲಿಗೋ ಹೋಗುತ್ತಿದ್ದೇನೆ ಎಂದು ಹೇಳುತ್ತಿದ್ದಾರೆ. ಇವರು ಎಲ್ಲಿಗೆ ಹೋಗುತ್ತಿದ್ದಾರೆ ಎಂದು ನಮಗೆ ಆತಂಕವಾಗಿದೆ.

ಅಧ್ಯಕ್ಷರು :— ಅವರು ಎಲ್ಲಿಂದರಲ್ಲಿಗೆ ಹೋಗುವುದಕ್ಕೆ ಅವರೇನು ಗೌಡರೇ? ಅವರು ಅಲ್ಲಿ ಇಲ್ಲಿ ಅಡ್ಜಸ್ಟ್ ಮಾಡಿಕೊಳ್ಳಬೇಕಷ್ಟೇ. ನೀವು ಎಲ್ಲಿಗೆ ಹೋದರೂ ನಿಮಗೆ ಅಡ್ಡಿ ಇರುವುದಿಲ್ಲ. ನಿಮ್ಮದೇ ಬೇರೆ ಲೆಕ್ಕ.

ಶ್ರೀ ಸಯ್ಯದ್ ಜುಲ್ಫಿಕರ್ ಹಶ್ಮಿ:— ಬೀದರ್‌ನಲ್ಲಿ ಇನ್ನೂರು ಮನೆಗಳನ್ನು ಅಲಾಟ್‌ಮಾಡಿದ್ದಾರೆ. ನಾನು ಮಾನ್ಯ ದೇವೇಗೌಡ ಸಾಹೇಬರಿಗೂ ಅದರ ಬಗ್ಗೆ ಕಂಪ್ಲೈಂಟ್ ಮಾಡಿದ್ದೇನೆ. ರೇವಣ್ಣನವರು ನಮಗೆ ಅನ್ಯಾಯ ಮಾಡುತ್ತಿದ್ದಾರೆ, ತಾವು ಅವರಿಗೆ ಹೇಳಿ ಎಂದು ಹೇಳಿದೆ. ಅವರ ಮಾತನ್ನೂ ಇವರು ಕೇಳಲಿಲ್ಲ. ಇವರು ದೇವೇಗೌಡರ ಮಾತನ್ನೂ ಕೇಳಲಿಲ್ಲ. ಅದರ ಸಲುವಾಗಿ ನಿಮಗೆ ಹೇಳುತ್ತೇನೆ.

ಅಧ್ಯಕ್ಷರು :— ಈಗ ಇರುವ ಕಂಪ್ಲೆಂಟ್ ಅದೇ ಅಲ್ಲವೇ?

ಶ್ರೀ ಸೈಯದ್ ಜುಲ್ಫೀಕರ್ ಹಶ್ಮಿ:— ಮಾನ್ಯ ಅಧ್ಯಕ್ಷರೇ, ಬೀದರ್ ಜಿಲ್ಲೆಯಲ್ಲಿ ನೆರೆಹಾವಳಿಯಿಂದ ತೊಂದರೆಗೊಳಗಾದ ಹಿನ್ನಲೆಯಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಬಸವಕಲ್ಯಾಣಕ್ಕೆ 300 ಮನೆಗಳನ್ನು ಹಾಗೂ ಹುಮ್ನಾಬಾದ್‌ಗೆ 300 ಮನೆಗಳನ್ನು ಸರ್ಕಾರದವರು ಕೊಟ್ಟಿದ್ದಾರೆ. ಆ ರೀತಿ ಕ್ಷೇತ್ರಾವಾರು ಕೊಟ್ಟಂಥ ಮನೆಗಳನ್ನು ಶ್ರೀ ಮಿರಾಜುದ್ದೀನ್ ಪಟೇಲ್ ಅವರು ಹಂಚಿಬಿಟ್ಟಿದ್ದಾರೆ. ನಮಗೆ ಆಶ್ರಯ ಯೋಜನೆಯಡಿ 200 ಮನೆಗಳನ್ನು ತಾಲ್ಲೂಕುವಾರು ಹಂಚಬೇಕೆಂದು ಕೊಟ್ಟಿದ್ದಾರೆ. ಅದರಲ್ಲಿ ಶ್ರೀ ಮಿರಾಜುದ್ದೀನ್ ಪಟೇಲ್‌ರ ಕ್ಷೇತ್ರವಿದ್ದು ಮತ್ತು ನಮ್ಮ ತಾಲ್ಲೂಕಿಗೆ ಸಂಬಂಧಪಟ್ಟಿದ್ದು ಹೀಗೆ ಎರಡೂ ಸೇರಿರುತ್ತದೆ. ನಾನು ಮಿನಿಸ್ಟ್ರು, ನಾನು ಹೇಳಿದ ಹಾಗೆ ಕೇಳಬೇಕೆಂದು ಅವರು ಎಲ್ಲಾ ಅಧಿಕಾರಿಗಳಿಗೆ ಹೇಳುತ್ತಾರೆ. ನನ್ನ ಕ್ಷೇತ್ರಕ್ಕೆ ಅವರು ಬಂದು ಸುಮಾರು 70-80 ಮನೆಗಳನ್ನು ಹಂಚಿಬಿಟ್ಟಿದ್ದಾರೆ. ಮತ್ತು ಭಾಲ್ಕಿ ತಾಲ್ಲೂಕಿನಲ್ಲಿ ಸುಮಾರು 50 ಮನೆಗಳನ್ನು ಅವರೇ ಹಂಚಿಬಿಟ್ಟಿದ್ದಾರೆ. ನಾನು ಅಲ್ಲಿ ಆಶ್ರಯ ಕಮಿಟಿಯ ಅಧ್ಯಕ್ಷನಾಗಿದ್ದೇನೆ. ಮತ್ತು ಸರ್ಕಾರ ಆಶ್ರಯ ಕಮಿಟಿಯ ಮೆಂಬರ್ಸ್‌ಗಳನ್ನು ನಾಮಿನೇಟ್ ಮಾಡಿದ್ದಾರೆ. ಆ ಮೆಂಬರ್ ಮತ್ತು ಅಲ್ಲಿಯ ಸಚಿವರು ಕುಳಿತುಕೊಂಡು ಅವರೇ ಮನೆಗಳನ್ನು ಹಂಚಿರುವುದರಿಂದ ನನ್ನ ಕೈಯಿಂದ ಒಂದೂ ಮನೆಯನ್ನು ಕೂಡ ಫಲಾನುಭವಿಗಳಿಗೆ ಹಂಚಲಿಕ್ಕೆ ಆಗಲಿಲ್ಲ. ಎಲ್ಲವನ್ನೂ ಶ್ರೀ ಮಿರಾಜುದ್ದೀನ್ ಪಟೇಲ್ ಅವರೇ ಫೈನಲ್ ಮಾಡಿಬಿಟ್ಟರು. 'ನೀವೇ ಎಲ್ಲಾ ಆಶ್ರಯ ಮನೆಗಳನ್ನು ಕೊಟ್ಟುಬಿಡಿ, ಇಷ್ಟು ಕಡಿಮೆ ಮನೆಗಳನ್ನು ತೆಗೆದುಕೊಂಡು ನಾನು ಯಾರಿಗೆ ಹಂಚಲಿ' ಎಂದು ಶ್ರೀ ಮಿರಾಜುದ್ದೀನ್ ಪಟೇಲ್ ಅವರಿಗೆ ಹೇಳಿದೆ. ಇದು ನಮ್ಮ ಸಮಸ್ಯೆ ಆಗಿದೆ.

ಅಧ್ಯಕ್ಷರು :— ಮಾನ್ಯ ಹಶ್ಮೀ ಅವರೇ, ನೀವು ರೂಲಿಂಗ್ ಪಾರ್ಟಿಗೆ ಸಪೋರ್ಟಿಂಗ್ ಮೆಂಬರ್ ಎಂದು ಹೇಳಿ ಆಶ್ರಯ ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ

ಹಂಚುವುದಕ್ಕೆ ನಿಮಗೆ ಜಾಸ್ತಿ ಎಂದರೆ 500 ಮನೆಗಳನ್ನು ಕೊಟ್ಟಿದ್ದಾರೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಈಗ ನೀವೂ ಕೂಡ ಸಂಬಂಧಪಟ್ಟ ಸಚಿವರ ಮೇಲೆ ಅಪಾದನೆ ಮಾಡಿದರೆ ಅವರು ಎಲ್ಲಿಗೆ ಹೋಗಬೇಕು?

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೇ, ನಾನು ಹೇಳಿದ್ದುದು ಏನೆಂದರೆ- ರೂಲಿಂಗ್ ಪಾರ್ಟಿಗೆ ಸಪೋರ್ಟ್ ಇರತಕ್ಕಂಥವರು ಎಂದು ಹೇಳಿ ಇವರಿಗೆ 400 ಮನೆಗಳನ್ನು ಕೊಟ್ಟಿದ್ದಾರೆ. ಔರಾದ್ ಎಂ.ಎಲ್.ಎ.ಗೆ 200 ಮನೆಗಳನ್ನು ಕೊಟ್ಟಿದ್ದಾರೆ, ಭಾಲ್ಕಿ ಎಂ.ಎಲ್.ಎ. ಅವರು ಕಾಂಗ್ರೆಸ್ ಪಕ್ಷದವರೆಂದು ಹೇಳಿ ಅವರಿಗೆ 200 ಮನೆಗಳನ್ನು ಕೊಟ್ಟಿದ್ದಾರೆ. ಉಳಿದ ಎಂ.ಎಲ್.ಎ.ಗಳು ಅವರಲ್ಲಿ ಮಂತ್ರಿಗಳೂ ಕೂಡ ಇದ್ದಾರೆ, ಅವರಿಗೆ 700-700 ಎಂದು ಸಮವಾಗಿ ಕೊಟ್ಟಿದ್ದಾರೆಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಆ 400 ಮನೆಯನ್ನು ಕೊಟ್ಟಿರುವ ಬಗ್ಗೆ ಶ್ರೀ ಹಷ್ಮಿಯವರು ಏನು ಹೇಳುತ್ತಿದ್ದಾರೆಂದರೆ- ತಾಲ್ಲೂಕುವಾರು ಕೊಟ್ಟ ಮೇಲೆ ಅದೇ ತಾಲ್ಲೂಕಿನಲ್ಲಿ ಇರುವ ಜನರಿಗೆ ಶ್ರೀ ಮಿರಾಜುದ್ದೀನ್ ಪಟೇಲ್ ಅವರು ಹಂಚಿದ್ದಾರೆ. ಹೀಗಾಗಿ ಆ ಮಂತ್ರಿಗಳ ರೂಲ್ಸ್‌ನಿಂದಾಗಿ ಶ್ರೀ ಹಷ್ಮಿಯವರಿಗೆ ಕೊಟ್ಟಂಥ 400 ಮನೆಗಳು ಅವರ ಮುಖಾಂತರ ಫಲಾನುಭವಿಗಳಿಗೆ ಹಂಚುವುದಕ್ಕೆ ಇಲ್ಲವೆಂದು ಅವರು ಹೇಳಿದರು.

ಶ್ರೀ ಸೈಯದ್ ಜುಲ್ಫೀಕರ್ ಹಷ್ಮಿ:— ಮಾನ್ಯ ಅಧ್ಯಕ್ಷರೆ, ಬೀದರ್ ಜಿಲ್ಲೆಯಲ್ಲಿನ ಅರ್ಬನ್ ಆಶ್ರಯ ಯೋಜನೆಯಡಿಯಲ್ಲಿ 1994-95, 1995-96, 1996-97ಮತ್ತು 1997-98 ಈ ವರ್ಷಗಳಲ್ಲಿ ಇಂತಿಷ್ಟು ಮನೆಗಳನ್ನು ಫಲಾನುಭವಿಗಳಿಗೆ ಕೊಡಬೇಕೆಂದು ಸರ್ಕಾರ ಟಾರ್ಗೆಟ್ ಕೊಟ್ಟಿತ್ತು. ಆದರೆ ಸರ್ಕಾರದಿಂದ ಹಣ ಬಿಡುಗಡೆ ಮಾಡಿಲ್ಲ. ಫಲಾನುಭವಿಗಳೆಲ್ಲಾ ತಮ್ಮ ಗುಡಿಸಲುಗಳನ್ನು ಕೆಡವಿಹಾಕಿ ಅಲ್ಲಿ ಬೇಸ್ ಮೆಂಟ್ ಕಟ್ಟಿದ್ದಾರೆ. ಹಣವನ್ನು ಸರ್ಕಾರದಿಂದ ಬಿಡುಗಡೆ ಮಾಡಿಸಿಕೊಡಿ ಎಂದು ಅಲ್ಲಿಯ ಜನರೆಲ್ಲಾ ನನ್ನ ಮನೆ ಮುಂದೆ ಬಂದು ಗಲಾಟೆ ಮಾಡುತ್ತಾರೆ, ಧರಣಿ ಕುಳಿತುಕೊಳ್ಳುತ್ತಿದ್ದಾರೆ. ನಾನು ನನ್ನ ಮನೆಯಲ್ಲಿ ಇರುವುದಕ್ಕೆ ಆಗುತ್ತಿಲ್ಲ. ಕಳೆದ ನಾಲ್ಕು ತಿಂಗಳಿನಿಂದ ಹಣ ಬಿಡುಗಡೆ ಮಾಡಿಸಿ, ಮನೆಗಳನ್ನು ಕಟ್ಟಿಸಿಕೊಡಿ ಎಂದು ಸನ್ಮಾನ್ಯ ಸಚಿವರ ಮನೆಗೆ ಹೋಗಿ ಕೇಳುತ್ತಲೇ ಇದ್ದೇನೆ. ಹಣ ರಿಲೀಸ್ ಮಾಡಿ ಎಂದು ಕೇಳುವ ಸಲುವಾಗಿ ಸಂಬಂಧಪಟ್ಟ ಕಾರ್ಯದರ್ಶಿಯವರ ಮನೆಗೆ ಹೋಗಿಬರುತ್ತಿದ್ದೇನೆ. ಆದರೂ ಕೂಡ ಇಲ್ಲಿಯವರೆಗೆ ಹಣ ರಿಲೀಸ್ ಆಗಿಲ್ಲ. ಇದು ಬಹಳ ದೊಡ್ಡ ಸಮಸ್ಯೆಯಾಗಿದೆ. ಅರ್ಬನ್ ಆಶ್ರಯ ಯೋಜನೆಯಡಿಯಲ್ಲಿ ಸರ್ಕಾರ ಕೂಡಲೇ ಹಣ ರಿಲೀಸ್ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ ಹಾಗೂ ನೆರೆಹಾವಳಿಯಿಂದ ನಮ್ಮ ಪೂರ್ತಿ ಜಿಲ್ಲೆ ಹಾನಿಗೊಳಗಾಗಿದೆ. ಎಲ್ಲಾ ತಾಲ್ಲೂಕಿಗೂ ಕ್ಷೇತ್ರವಾರು ಮನೆಗಳನ್ನು ಅಲಾಟ್ ಮಾಡಬೇಕು. ಬೀದರ್ ತಾಲ್ಲೂಕಿಗೆ, ಹುಮನಾಬಾದ್,

ಬಸವಕಲ್ಯಾಣ ಕ್ಷೇತ್ರಾವಾರು ಹಣ ಬಿಡುಗಡೆ ಮಾಡಿ. ಸಂಬಂಧಪಟ್ಟ ಮಾನ್ಯ ಸಚಿವರು ಕ್ಷೇತ್ರಾವಾರು ಸಪ್ಲಿಮಂಟರಿ ಗ್ರಾಂಟ್ಸ್ ಎಂದು ರಿಲೀಸ್ ಮಾಡಿ ಬಿಡುತ್ತಾರೆ ಮತ್ತು ತಾಲ್ಲೂಕುವಾರು ಮನೆಗಳನ್ನು ಹಂಚಬೇಕೆಂದು ಬೀದರ್ ತಾಲ್ಲೂಕಿನಲ್ಲಿಯೂ ಕೂಡ ಅವರು ಕೈಹಾಕಿಬಿಡುತ್ತಾರೆ. ಇದರಿಂದ ನಮಗೆ ಬಹಳ ಅನ್ಯಾಯವಾಗುತ್ತಿದೆ. ಇದನ್ನು ಸರಿಪಡಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೋರುತ್ತೇನೆ.

ಅಧ್ಯಕ್ಷರು :— ಈ ಹೌಸಿಂಗ್ ವಿಚಾರಕ್ಕೆ ಸಂಬಂಧಪಟ್ಟಂತೆ ನನಗೆ ಬೇರೆ ಮಾರ್ಗವಿಲ್ಲದೇ ಇರುವುದರಿಂದ ಈ ಸದನದಲ್ಲಿಯೇ ಪ್ರಸ್ತಾಪ ಮಾಡಬೇಕಾಗಿ ಬಂದಿದೆ. ನನ್ನ ಮತಕ್ಷೇತ್ರದಲ್ಲಿ ಪ್ರಾಯೋಗಿಕವಾಗಿ ಹುಡ್ಕೋ ಸಂಸ್ಥೆಯ ನೆರವಿನಿಂದ ಹತ್ತು ಸಾವಿರ ಮನೆಗಳನ್ನು ಕಟ್ಟುವುದಕ್ಕೆ ಸರ್ಕಾರದ ಮುಂದೆ ನಾನು ಒಂದು ಸಲಹೆಯನ್ನು ಇಟ್ಟಿದ್ದೆ. ಪಕ್ಕದ ಕೇರಳ ರಾಜ್ಯದಲ್ಲಿ ಹೆಚ್ಚು ಕಡಿಮೆ 650 ಕೋಟಿ ರೂಪಾಯಿಗಳನ್ನು ಈ ಯೋಜನೆಯಲ್ಲಿ ಹುಡ್ಕೋ ಸಂಸ್ಥೆಯವರು ಕೊಟ್ಟಿದ್ದರು. ನಮ್ಮ ರಾಜ್ಯದವರೇ ಹುಡ್ಕೋ ಸಂಸ್ಥೆಯಲ್ಲಿ ಇರುವುದರಿಂದ, ನಾನು ಅವರನ್ನು ಕರೆದು ಕೇಳಿದಾಗ, ನಮ್ಮದೇನೂ ಆಕ್ಷೇಪಣೆ ಇಲ್ಲ, ಕೊಡಬಹುದು ಎನ್ನತಕ್ಕಂಥ ಮಾತನ್ನು ಅವರು ಹೇಳಿದರು. ಆ ಸಂದರ್ಭದಲ್ಲಿ ಮಾನ್ಯ ನಾಣಯ್ಯನವರೇ, ತಾವೂ ಕೂಡ ಇದ್ದಿರಿ. ಮಾನ್ಯ ಉಪಮುಖ್ಯಮಂತ್ರಿಗಳಿಗೆ ಈ ಬಗ್ಗೆ ವಿವರಿಸಿದ್ದೇನೆ, ಹಾಗೆಯೇ ಮಾನ್ಯ ಮುಖ್ಯಮಂತ್ರಿಗಳು ಮಿಟಿಂಗ್‌ನಲ್ಲಿ ಇದ್ದರು, ಹೌಸಿಂಗ್ ಸಚಿವರು, ಸಂಬಂಧಿಸಿದ ಎಲ್ಲಾ ಕಾರ್ಯದರ್ಶಿಗಳೂ ಕೂಡ ಇದ್ದರು. ನಮ್ಮ ಫಲಾನುಭವಿಗಳ ಪರವಾಗಿ ಸರ್ಕಾರ ಹುಡ್ಕೋ ಸಂಸ್ಥೆಗೆ ಗ್ಯಾರೆಂಟಿ ಕೊಡಬೇಕು, ನಾವು ಫಲಾನುಭವಿಗಳ ಕಡೆಯಿಂದ ಏನೇನು ದಾಖಲೆಗಳು ಬೇಕೋ ಅದನ್ನು ಮಾಡಿಸಿಕೊಡುತ್ತೇವೆಂದೂ, ಈ ಹತ್ತು ಸಾವಿರ ಮನೆಗಳನ್ನು ಕೊಟ್ಟರೆ, ಸಂಪೂರ್ಣವಾಗಿ ಯಾರು ನಿರಾಶ್ರಿತರು ಇದ್ದಾರೆ ಅವರೆಲ್ಲರಿಗೂ ಕೂಡ ಆಶ್ರಯ ಆದಂತಾಗುತ್ತದೆ ಮತ್ತು ಮುಂದಿನ ವರ್ಷಗಳಲ್ಲಿ ಸರ್ಕಾರದ ಕಡೆಯಿಂದ ನನ್ನ ಕ್ಷೇತ್ರದಲ್ಲಿ ಅಥವಾ ತಾಲ್ಲೂಕಿನಲ್ಲಿ ಹೌಸಿಂಗ್‌ಗಾಗಿ ಹಣವನ್ನು ಖರ್ಚು ಮಾಡಬೇಕಾಗಿಲ್ಲವೆಂದು ಹೇಳಿದ್ದೆ. ಹುಡ್ಕೋ ಸಂಸ್ಥೆಯವರು ಕೊಡುವ ಹಣಕ್ಕೆ ಸ್ವಲ್ಪ ಅಂದರೆ 7ರಿಂದ 8 ಪರ್ಸೆಂಟ್ ಬಡ್ಡಿ ಹಾಕುತ್ತಾರೆಂದು ಹೇಳಿದ್ದಾರೆ. ಇದೆಲ್ಲಾ ಲೆಕ್ಕ ಹಾಕಿದರೆ ಸುಮಾರು 25 ಕೋಟಿ ರೂಪಾಯಿಗಳಾಗುತ್ತದೆ ಇದನ್ನು ಇಪ್ಪತ್ತಮೂರೂವರೆ ವರ್ಷಗಳ ಅವಧಿಯಲ್ಲಿ ವಾಪಸ್ಸು ಕೊಡಬೇಕಾಗುತ್ತದೆ, ನಾಲ್ಕು ವರ್ಷಗಳ ನಂತರ ಸಾಲವನ್ನು ವಸೂಲು ಮಾಡುವುದಕ್ಕೆ ಪ್ರಾರಂಭಮಾಡುವಂಥದ್ದು, ಒಟ್ಟೊಟ್ಟು ಫಲಾನುಭವಿ ಒಂದು ವರ್ಷಕ್ಕೆ 1800 ರೂ. ಕೊಡಬೇಕಾಗುತ್ತದೆ ಅಂದರೆ ಸರಾಸರಿ ಲೆಕ್ಕ ಹಾಕಿದರೆ ದಿವಸಕ್ಕೆ 6 ರೂ. ಬರುತ್ತದೆ. ಹೀಗೆ ಪ್ರತಿ ವರ್ಷ 1 ಕೋಟಿ 8 ಲಕ್ಷ ರೂ. ಫಲಾನುಭವಿಗಳಿಂದ ಬರುತ್ತದೆ. ನೀವು ಎಲ್ಲಾ ಒಪ್ಪಿಕೊಂಡು ಇನ್ ಪ್ರಿನ್ಸಿಪಲ್ ಕ್ಲಿಯರೆನ್ಸ್ ಕೊಟ್ಟಮೇಲೆ ನಾನು ನನ್ನ ಮತಕ್ಷೇತ್ರಕ್ಕೆ ಹೋಗಿ ಪ್ರವಾಸ

ಮಾಡಿ ಒಂದು ತಿಂಗಳು ಆಯಿತು. ನನ್ನ ಮತಕ್ಷೇತ್ರದ ಪ್ರತಿ ಹಳ್ಳಿಗೆ ಹೋಗಿ- ಇದು ಆಶ್ರಯ ಅಥವಾ ಅಂಬೇಡ್ಕರ್ ಯೋಜನೆಯಲ್ಲಿ ಕೊಟ್ಟ ಹಾಗೆ ಅಲ್ಲ, ಸಾಲವನ್ನು ವಾಪಸ್ಸು ಕಟ್ಟಬೇಕೆಂದು ಹೇಳಿ ಅವರಿಗೆ ಏನೇನು ಷರತ್ತುಗಳು ಇವೆ ಅವುಗಳನ್ನೆಲ್ಲಾ ವಿವರಿಸಿ ಹೇಳಿದಾಗ, ಸಾಲವನ್ನು ವಾಪಸ್ಸು ಕಟ್ಟುತ್ತೇವೆಂದು ಅವರೆಲ್ಲಾ ತಯಾರಾಗಿ, ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದಂಥ ಜನರು- ನಮಗೆ ಯಾರ ಮುಲಾಜು ಬೇಕಾಗಿಲ್ಲ, 25 ಸಾವಿರ ರೂಪಾಯಿಗಳನ್ನು ನಮಗೆ ಕೊಟ್ಟರೆ ನಾವೇ ಮನೆಗಳನ್ನು ಕಟ್ಟಿಕೊಳ್ಳುತ್ತೇವೆ, ನಮಗೆ ಸಾಲ ಕೊಡಿ, ನಮಗೆ ದಾನ ಕೊಡತಕ್ಕಂಥದ್ದು ಬೇಕಾಗಿಲ್ಲ ಎನ್ನತಕ್ಕಂಥ ಮಾತನ್ನು ಅವರೆಲ್ಲಾ ಹೇಳಿದರು. ಫಲಾನುಭವಿಗಳನ್ನೂ ಕೂಡ ಗುರುತಿಸಿ ನಾನು ಬಂದಿದ್ದೇನೆ. ಈ ವಿಚಾರ ನಿಮ್ಮ ಸಚಿವ ಸಂಪುಟಕ್ಕೆ ಬಂದು ಒಪ್ಪಿಗೆ ಕೊಡತಕ್ಕಂಥ ಸಂದರ್ಭದಲ್ಲಿ ಏನೇನು ಕಾರಣಗಳು ಏನೋ, ಅಲ್ಲಿ ಏನು ನಡೆಯಿತೋ ನನಗೆ ಗೊತ್ತಿಲ್ಲ. ನಾನು ಗೊತ್ತಿದ್ದೋ ಗೊತ್ತಿಲ್ಲದೆಯೋ ನಿಮ್ಮೆಲ್ಲರನ್ನೂ ನಂಬಿ, ನೀವು ಕೊಡತಕ್ಕಂಥ ಮಾತಿನ ಮೇಲೆ ನಿಮಗೆ ನಿಗಾ ಇರುತ್ತದೆಂದು ಹೇಳಿ ವಿಶ್ವಾಸವಿಟ್ಟು ನಾನು ಒಂದು ಹೆಜ್ಜೆ ದೂರ ಹೋಗಿ, ನನ್ನ ಕ್ಷೇತ್ರದಲ್ಲಿ ಎಲ್ಲಾ ಪ್ರಚಾರ ಮಾಡಿ ಬಂದಿದ್ದು ಆಯಿತು. ಈಗ ನಾನು ನನ್ನ ಜನರ ಎದುರಿಗೆ ವಚನಭ್ರಷ್ಟ ಆಗುವುದಕ್ಕೆ ತಯಾರಾಗಿಲ್ಲ. ರಾಜಕಾರಣದಿಂದ ಉದರಪೋಷಣೆ ಮಾಡತಕ್ಕಂಥ ಮನುಷ್ಯ ನಾನಲ್ಲ. ನಿಮಗೆ ನಿಮ್ಮ ಮಾತಿನಂತೆ ವಿಶ್ವಾಸವಿದ್ದರೆ, ನೀವೆಲ್ಲರೂ ಸೇರಿ ಇನ್‌ಪ್ರಿನ್ಸಿಪಲ್ ಒಪ್ಪಿಕೊಂಡಂತೆ ಆ ಮಾತನ್ನು ನೆರವೇರಿಸಿಕೊಡಿ. ಇಲ್ಲದೇ ಹೋದರೆ ನನ್ನ ತೀರ್ಮಾನಕ್ಕೆ ನಾನು ಬರಬೇಕಾಗುತ್ತದೆ. You were associated with me all through. Please let me know the stand of the government on this. ಮತ್ತು ಬಜೆಟರಿ ಪ್ರಾವಿಷನ್ ಕೊಡುವ ವಿಚಾರದಲ್ಲಿ ಕೂಡ- 'ಈ ಸಾಲಕ್ಕೆ ಸಂಬಂಧಪಟ್ಟ ಹಾಗೆ ಸರ್ಕಾರ ಬಜೆಟ್‌ನಲ್ಲಿ ಹಣವನ್ನು ಮೀಸಲಾಗಿಡಬೇಕಾಗಿಲ್ಲ, ನಾಲ್ಕು ವರ್ಷಗಳ ನಂತರ ಏನು ಮೊದಲಿನ ಕಂತನ್ನು ಕಟ್ಟಬೇಕಾಗಿ ಬರುತ್ತದೆಯೋ ಆ ಕಂತಿನ ಹಣವನ್ನು ಫಲಾನುಭವಿಗಳು ಕಟ್ಟದೇ ಹೋದರೆ ಆವತ್ತಿಗೆ ಕೊಡಿ ಎನ್ನತಕ್ಕಂಥ ಮಾತನ್ನು ಹಡ್ಕೋ ಸಂಸ್ಥೆಯವರು ತಮ್ಮ ಒಪ್ಪಿಗೆಯ ಮೂಲಕ ತಿಳಿಸಿದ್ದಾರೆ. ಇದರಿಂದಾಗಿ ಸರ್ಕಾರಕ್ಕೆ ಫೈನಾನ್ಷಿಯಲ್ ಲಯಾಬಿಲಿಟೀಸ್ ಕೂಡ ಏನೂ ಬರುವುದಿಲ್ಲ. ನಾನು ಕ್ಯಾಬಿನೆಟ್‌ನಲ್ಲಿ ಇಲ್ಲ. ನಾನು ಸಂಬಂಧಪಟ್ಟ ಎಲ್ಲರಿಗೂ ಕೂಡ ಇನ್‌ಕ್ಯಾಮರಾ ಮನವಿ ಮಾಡಿಕೊಂಡಿದ್ದೇನೆ. ಲೆಟರ್ ಕೂಡ ಬರೆದಿದ್ದೇನೆ. ಸಚಿವಸಂಪುಟದಿಂದ ಯಾರೂ ಕೂಡ ನನಗೆ ಉತ್ತರವನ್ನು ಇವತ್ತಿನವರೆಗೆ ಬರೆದು ತಿಳಿಸಿಲ್ಲ. ನಾನು ತಮ್ಮೆಲ್ಲರಲ್ಲೂ ಕೂಡ ಬಿನ್ನವಿಸಿಕೊಂಡಿದ್ದೇನೆ, ಮನವಿ ಮಾಡಿಕೊಂಡಿದ್ದೇನೆ, ನನಗೆ ಇದರಲ್ಲಿ ಯಾವ ಸ್ವಾರ್ಥವೂ ಇಲ್ಲ, ಮನೆಗಳನ್ನು ಕಟ್ಟುವುದರಲ್ಲಿ ನನಗೆ ಸಂಬಂಧಿಸಿದ ಕಂಟ್ರಾಕ್ಟರುಗಳು ಯಾರೂ ಇಲ್ಲ, ಇದರಲ್ಲಿ ನನ್ನ

ಸಂಬಂಧಿಕರ ಪೈಕಿ ಯಾರೂ ಫಲಾನುಭವಿಗಳು ಇಲ್ಲ. ಒಂದು ವೇಳೆ ರಾಜಕೀಯ ಕಾರಣಕ್ಕೇನಾದರೂ ಒಳ್ಳೆಯದು ಮಾಡುತ್ತಿದ್ದೇನೆ ಎನ್ನತಕ್ಕಂಥ ಅನುಮಾನವಿದ್ದರೆ ನಾನು ಇಲ್ಲಿಯೇ ಡಿಕ್ಲೇರ್ ಮಾಡುತ್ತೇನೆ- ಆ ಕ್ಷೇತ್ರದಲ್ಲಿ ನಾನು ಚುನಾವಣೆಗೆ ನಿಲ್ಲುವುದಿಲ್ಲ, ನನಗೆ ಅದರ ಅಗತ್ಯವಿಲ್ಲ. ದಯಮಾಡಿ ನನ್ನ ಕ್ಷೇತ್ರವಾದ ಜನರನ್ನಾದರೂ ಸೇವೆ ಮಾಡಿ. ನನ್ನ ಜನರ ಎದುರಿಗೆ ನನ್ನನ್ನು ವಚನಭ್ರಷ್ಟನನ್ನಾಗಿ ಮಾಡಬೇಡಿ. I am prepared to be out of politics. But, please don't make me a defaulter in the eyes of my people.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :— ಮಾನ್ಯ ಅಧ್ಯಕ್ಷರೆ, ಈ ವಿಚಾರವನ್ನೂ ತಾವು ಕೂಡ ಚರ್ಚೆ ಮಾಡಿದಿರಿ. ಇದರ ಬಗ್ಗೆ ಮಾನ್ಯ ವಸತಿ ಸಚಿವರು ಪುನರ್ ವಿಮರ್ಶೆ ಸಲುವಾಗಿ ಒಂದು ಟಿಪ್ಪಣಿಯನ್ನು ಬರೆದು ಸಚಿವಸಂಪುಟಕ್ಕೆ ತರುವವರಿದ್ದಾರೆ. ಈ ವಿಷಯವನ್ನು ಮುಂದೆ ಸಚಿವಸಂಪುಟಕ್ಕೆ ತಂದಂಥ ಸಂದರ್ಭದಲ್ಲಿ ನಾವು ಸಚಿವಸಂಪುಟದಲ್ಲಿ ತೀರ್ಮಾನ ತೆಗೆದುಕೊಳ್ಳುತ್ತೇವೆ. ಸದರಿ ವಿಷಯವನ್ನು ಎಲ್ಲರ ಜೊತೆಯಲ್ಲಿ ತಾವು ಚರ್ಚೆಮಾಡಿದ್ದಿರಿ. ಅದಕ್ಕೆ ಸಂಬಂಧಪಟ್ಟಿರುವ ಸಂಪೂರ್ಣ ಮಾಹಿತಿ ವಸತಿ ಇಲಾಖೆಯಿಂದ ಬರಬೇಕಾಗಿದೆ. ಅದು ಬಂದಾದ ಮೇಲೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

+ ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :— ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಈ ಸದನದ ಕೆಲವು ಸದಸ್ಯರು ಮಾತನಾಡುತ್ತಾ, ಒಂದು ಲಕ್ಷ ಮನೆಯನ್ನು ಹಂಚುವಂಥ ಸಂದರ್ಭದಲ್ಲಿ ಕೆಲವು ತಾಲ್ಲೂಕಿನಲ್ಲಿ ತಾರತಮ್ಯವಾಗಿದೆ ಎನ್ನುವಂಥ ಅಪಾದನೆಯನ್ನು ಸದನದ ಮುಖಾಂತರ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಕಳೆದ 1998-99ರ ಬಜೆಟ್‌ನ ಅನುದಾನದಲ್ಲಿ 40 ಸಾವಿರ ಮನೆಗಳನ್ನು ಕಟ್ಟಿಕೊಡಬೇಕು ಎನ್ನುವ ನಿರ್ಧಾರದಂತೆ ನಾವು ಅವುಗಳನ್ನು ಎಲ್ಲಾ ತಾಲ್ಲೂಕಿನಲ್ಲಿ ಸಮನಾಗಿ ವಿತರಣೆ ಮಾಡಿದ್ದೇವೆ. ಆದರೆ ಈ ವರ್ಷ ಕೆಲವು ಶಾಸಕರು ಒತ್ತಾಯ ಮಾಡಿದ್ದಾರೆ. ಅದೇನೆಂದರೆ ಕೆಲವು ಕಡೆ ಮಳೆ ಜಾಸ್ತಿಯಾಗಿ ಮನೆ ಬಿದ್ದುಹೋಗಿದೆ, ಕೆಲವು ಕಡೆ ಮನೆ ಇಲ್ಲ ಎನ್ನುವಂಥ ಬೇಡಿಕೆಯನ್ನು ಕೆಲವು ಶಾಸಕರು ಪತ್ರದ ಮುಖೇನ ಕೂಡ ತಿಳಿಸಿದ್ದಾರೆ. ಮಳೆ ಜಾಸ್ತಿ ಬಿದ್ದು, ಕೆಲವು ಕಡೆ

3.40 ಪಿ.ಎಂ.

ಮನೆಗಳು ಬಿದ್ದು ಹೋಗಿವೆ, ಕೆಲವು ಕಡೆ ಮನೆಗಳು ಇಲ್ಲವೆಂಬ ಬೇಡಿಕೆಯನ್ನು ಕೆಲವು ಶಾಸಕರು ನನಗೆ ಪತ್ರದ ಮುಖಾಂತರ ಮಂಡಿಸಿದರು. ಅದನ್ನು ಬೇಕಾದರೆ ಸದನದ ಗಮನಕ್ಕೆ ತರುತ್ತೇನೆ. ಅವರು ಜನತಾದಳ, ಕಾಂಗ್ರೆಸ್, ಬಿಜೆಪಿ, ಪಕ್ಷೇತರ

ಸದಸ್ಯರಿರಬಹುದು. ಸಚಿವ ಸಂಪುಟ ಸಭೆಯಲ್ಲಿ ಒಂದು ಲಕ್ಷ ಮನೆಗಳನ್ನು ಕೊಡಬೇಕೆಂದು ನಿರ್ಣಯಿಸುವ ಸಂದರ್ಭದಲ್ಲಿ, ಒಂದು ಲಕ್ಷ ಮನೆಗಳಲ್ಲಿ ಸುಮಾರು 10 ಸಾವಿರ ಮನೆಗಳನ್ನು ಮಳೆ ಬಿದ್ದಿರುವ 5 ಜಿಲ್ಲೆಗಳಲ್ಲಿ, ಗುಲ್ಬರ್ಗಾ, ಬಳ್ಳಾರಿ, ಬಿಜಾಪುರ, ರಾಯಚೂರು ಇರಬಹುದು, ಅಲ್ಲಿಗೆ ಕೊಡಬೇಕೆಂಬ ನಿರ್ಣಯವನ್ನು ಮತ್ತು ಉಳಿದ 90 ಸಾವಿರ ಮನೆಗಳನ್ನು ಉಳಿದೆಲ್ಲಾ ಕಡೆಗೆ ಕೊಡಬೇಕೆಂಬ ನಿರ್ಣಯವನ್ನೂ ತೆಗೆದುಕೊಳ್ಳಲಾಯಿತು. ಇದಾದಮೇಲೆ, ನಾವೇನು 10 ಸಾವಿರ ಮನೆಗಳನ್ನು ಕೊಟ್ಟಿದ್ದೇವೆ, ಅದರಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಅವರ ಜಿಲ್ಲೆಯ ಒಂದು ಉದಾಹರಣೆಯನ್ನು ನೀಡಿದರು. ಗುಲ್ಬರ್ಗಾ ಜಿಲ್ಲೆಯ ಆಳಂದ ಕ್ಷೇತ್ರಕ್ಕೆ ಅವರ ಪಕ್ಷದ ಕ್ಷೇತ್ರದ ಶಾಸಕರೆಂದು 500 ಮನೆಗಳನ್ನು ಕೊಟ್ಟರು, ಅಫಜಲ್‌ಪುರಕ್ಕೆ 500 ಮನೆಗಳನ್ನು ಕೊಟ್ಟರು, ಚಿಂಚೋಳಿಯಲ್ಲಿ 200 ಮನೆಗಳನ್ನು ಕೊಟ್ಟಿದ್ದಾರೆ ಮತ್ತು ಉಳಿದ ಕ್ಷೇತ್ರಗಳಿಗೆ ಮನೆಗಳನ್ನು ಕೊಟ್ಟಿಲ್ಲವೆಂದು ಹೇಳಿದರು. ಜಿಲ್ಲಾಧಿಕಾರಿಗಳು ಯಾವ್ಯಾವ ಕ್ಷೇತ್ರಗಳಲ್ಲಿ ಎಷ್ಟೆಷ್ಟು ಮನೆಗಳು ಬಿದ್ದುಹೋಗಿವೆ ಎಂಬ ಬಗ್ಗೆ ಮಾಹಿತಿ ಕಳುಹಿಸುತ್ತಾರೆ. ಮನೆಗಳನ್ನು ಕೊಡುವಂತಹ ಸಂದರ್ಭದಲ್ಲಿ ಕೆಲವು ಕಡೆ 100 ಮನೆಗಳನ್ನು ಹೆಚ್ಚಿಗೆ ಕೊಟ್ಟಿರಬಹುದು, 50 ಮನೆಗಳನ್ನು ಕಡಿಮೆ ಕೊಟ್ಟಿರಬಹುದು. ಜಿಲ್ಲಾಧಿಕಾರಿಗಳ ಮಾಹಿತಿ ಪ್ರಕಾರ ಆಳಂದ ತಾಲ್ಲೂಕಿನಲ್ಲಿ ಸುಮಾರು 2,800 ಮನೆಗಳು ಬಿದ್ದು ಹೋಗಿದ್ದು, ಅಲ್ಲಿಗೆ 500 ಮನೆಗಳನ್ನೂ, ಮಳೆ ಬಿದ್ದಿರುವ ಅಫಜಲ್‌ಪುರ ತಾಲ್ಲೂಕಿನಲ್ಲಿ 1,863 ಮನೆಗಳು ಬಿದ್ದು ಹೋಗಿವೆ ಎಂದು ಅಲ್ಲಿಗೆ 500 ಮನೆಗಳನ್ನೂ, ಯಾದಗೀರ್ ತಾಲ್ಲೂಕಿನಲ್ಲಿ ಮನೆಗಳು ಬಿದ್ದಿವೆ ಎಂದು ಅಲ್ಲಿಗೆ 400 ಮನೆಗಳನ್ನೂ ಕೊಟ್ಟಿದ್ದೇವೆಯೇ ಹೊರತು ವಿರೋಧಪಕ್ಷದ ನಾಯಕರನ್ನು ಮೆಚ್ಚಿಸಬೇಕೆಂದಲ್ಲ. ಅಲ್ಲಿಯೂ 1,007 ಮನೆಗಳು ಬಿದ್ದುಹೋಗಿದ್ದು, ಅಲ್ಲಿಗೆ 500 ಮನೆಗಳನ್ನು ಕೊಡಲಾಗಿದೆ, ಚಿತ್ತಾಪುರಕ್ಕೆ 400 ಮನೆಗಳನ್ನು, ಗುಲ್ಬರ್ಗಾದಲ್ಲಿ ಸುಮಾರು 3 ಸಾವಿರ ಮನೆಗಳು ಬಿದ್ದು ಹೋಗಿದ್ದು, ಅಲ್ಲಿಗೆ 500 ಮನೆಗಳನ್ನು, ಜೇವರ್ಗಿಯಲ್ಲಿ ಸುಮಾರು 3 ಸಾವಿರ ಮನೆಗಳು ಬಿದ್ದುಹೋಗಿದ್ದು, ಅಲ್ಲಿಗೂ 500 ಮನೆಗಳನ್ನು, ಸುರಪುರ ತಾಲ್ಲೂಕಿನಲ್ಲಿ 1000 ಮನೆಗಳು ಬಿದ್ದುಹೋಗಿದ್ದು, ಅಲ್ಲಿಗೆ 400 ಮನೆಗಳನ್ನು ಕೊಡಲಾಗಿದೆ. ಇದೇ ತರಹ, ಬಿಜಾಪುರ ಪ್ರಾಪರ್‌ನಲ್ಲಿ ಸುಮಾರು 1,100 ಮನೆಗಳು ಪೂರ್ಣ ಬಿದ್ದು ಹೋಗಿದ್ದು, ಇನ್ನರ್ಧ ಭಾಗದಲ್ಲಿ 1,300 ಮನೆಗಳು ಬಿದ್ದು ಹೋಗಿದ್ದು, ಅದರಲ್ಲಿ 700 ಮನೆಗಳನ್ನು ಬಿಜಾಪುರ ಪ್ರಾಪರ್‌ಗೆ ಕೊಡಲಾಗಿದೆ. ಬಸವನ ಬಾಗೇವಾಡಿಗೆ 300, ಇಂಡಿ, ಮುದ್ದೇಬಿಹಾಳದಲ್ಲಿ 300 ಮನೆಗಳನ್ನು ಕೊಟ್ಟಿರಬಹುದು. ಆ ಭಾಗದಲ್ಲೇನು ಮನೆಗಳು ಬಿದ್ದುಹೋಗಿವೆ ಎಂದು ಜಿಲ್ಲಾಧಿಕಾರಿಗಳು ಮಾಹಿತಿ ಕೊಟ್ಟಿದ್ದಾರೆ, ಅದರ ಆಧಾರದ ಮೇಲೆ 10 ಸಾವಿರ ಮನೆಗಳನ್ನು ಆಯ್ಕೆ ಮಾಡಿ, ಆ ಬಗ್ಗೆ ಆದೇಶ ಹೊರಡಿಸಿದ್ದೇವೆ. ಆಗ ಕೊಪ್ಪಳ ಜಿಲ್ಲೆ ಸೇರಿರಲಿಲ್ಲ. ಅದರಲ್ಲಿ ಅಲ್ಲಿಯ ಸಚಿವರು ಕೊಪ್ಪಳ ಜಿಲ್ಲೆಯಲ್ಲಿ ಕೆಲವು ಕಡೆ ಮನೆಗಳು ಬಿದ್ದುಹೋಗಿದ್ದು,

ಅಲ್ಲಿಗೆ ಮನೆಗಳನ್ನು ಕೊಡಬೇಕೆಂದು ಕೇಳಿದ್ದರಿಂದ, ಸೆಪರೇಟಾಗಿ 1,620 ಮನೆಗಳನ್ನು ಕೊಟ್ಟಿದ್ದೇವೆ. ಆ ಕುರಿತಂತೆ ನಾವು ಈಗಾಗಲೇ 2ನೇ ಆದೇಶವನ್ನು ಹೊರಡಿಸಿದ್ದೇವೆ. ಆದಾದಮೇಲೆ, ಪ್ರತಿ ತಾಲ್ಲೂಕಿಗೆ ಪ್ರತಿ ಸಾರಿ 170 ಮನೆಗಳನ್ನೇನು ಕೊಡುತ್ತಿದ್ದೇವೆಯೋ, ಅದೇ ರೀತಿ, 175 ತಾಲ್ಲೂಕುಗಳಲ್ಲಿಯೂ, 200 ಮನೆಗಳಂತೆ ಕೊಟ್ಟು ಆದೇಶ ಹೊರಡಿಸಿದೆವು. ಇದರಲ್ಲಿ ಆ ಪಕ್ಷ ಈ ಪಕ್ಷದವರು ಎಂದಲ್ಲ. ಅದಾದಮೇಲೆ, ಒಂದು ಲಕ್ಷ ಮನೆಗಳನ್ನು ತೆಗೆದುಕೊಳ್ಳುವ ಉದ್ದೇಶ ಯಾವುದು? ಕೆಲವು ಶಾಸಕರಿಂದ ಬೇಡಿಕೆ ಬಂದ ಉದ್ದೇಶದಿಂದ ಒಂದು ಲಕ್ಷ ಮನೆಗಳನ್ನು ವಿಶೇಷವಾಗಿ ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡು ಹೋಗಿ, ಹುಡ್ಕೋ ಸಂಸ್ಥೆಯ ಹತ್ತಿರ ಸಾಲಕ್ಕೆಂದು 4-5 ಬಾರಿ ಓಡಾಡಿ, ಅವರು ಸಾಲ ಕೊಡಲು ಒಪ್ಪಿದ ನಂತರ, ಕೆಲವು ವಿಧಾನಸಭಾ ಕ್ಷೇತ್ರಗಳಲ್ಲಿ ಕ್ಷೇತ್ರವಾರು ಕೇಳಿದ್ದರು. ಆ ಕ್ಷೇತ್ರವಾರಲ್ಲಿ ಕಾಂಗ್ರೆಸ್ ಬಿಜೆಪಿ, ಜನತಾದಳ ಇರಬಹುದು. ನಮ್ಮ ಪಕ್ಷದಲ್ಲಿ ಕೆಲವರಿಗೆ ಕೊಡದಿರಬಹುದು. ಅವರು ಹೆಚ್ಚಿಗೆ ಮನೆಗಳು ಬೇಕೆಂದು ಬೇಡಿಕೆ ಇಡದಿದ್ದರೆ, ನಾವು ಕೊಡುವುದಕ್ಕೆ ಸಾಧ್ಯವಾಗಲಿಲ್ಲ ಆ ಉದ್ದೇಶದಿಂದ ನಾನು 2ನೇ ಆದೇಶವನ್ನು 300 ಮನೆಗಳಂತೆ ಕೆಲವು ವಿಧಾನಸಭಾ ಕ್ಷೇತ್ರಗಳಿಗೆ ಕೊಟ್ಟಿದ್ದೇನೆ. ಆದಾದ ಮೇಲೆ, ಅಲ್ಲಿಗೆ ಕೆಲವರಿಗೆ 250 ಮನೆಗಳಂತೆ ಆದೇಶ ಹೊರಡಿಸಲಾಗಿದೆ. ಕೆಲವು ಕಡೆ 8-10 ತಾಲ್ಲೂಕುಗಳಲ್ಲಿ ವಿಶೇಷವಾಗಿ 500 ಮನೆಗಳನ್ನು ಕೊಡಬೇಕೆಂಬ ಒತ್ತಾಯ ಬಂತು. ಅಲ್ಲಿಗೆ 500 ಮನೆಗಳನ್ನು ಕೊಟ್ಟಿದ್ದೇವೆ. ಉದಾಹರಣೆಗೆ ಹೇಳುವುದಾದರೆ, ಕೆಲವು ಮನೆಗಳನ್ನು ವೈಯಕ್ತಿಕ ಆರ್ಡರ್ ಕೊಟ್ಟಿದ್ದೀರೆಂದರು. ಒಬ್ಬ ವಿಧಾನಸಭಾ ಸದಸ್ಯರು ಬಂದು, ಪಕ್ಷದ ಹೆಸರು ಹೇಳುವುದು ಬೇಡ, ಶ್ರೀ ಚೌಡಯ್ಯ, ಶ್ರೀ ಶಿವಕುಮಾರ್ ಇರಬಹುದು ಹೊಸಹೊಳಲು ಎಂಬ ಗ್ರಾಮವಿದೆ, ನಾನು ಅಲ್ಲಿಗೆ ಹೋಗಿದ್ದೆ. ಅಲ್ಲಿ ಒಕ್ಕಲಿಗ, ನಾಯಕ, ಹರಿಜನರಿರಬಹುದು, ಅಲ್ಲಿನ ಹಿರಿಯರೊಬ್ಬರು ನನ್ನ ಆಫೀಸಿಗೆ ಬಂದು ಆ ಗ್ರಾಮಕ್ಕೆ 200 ಮನೆಗಳು ಬೇಕೆಂದು ಕೇಳಿದರು. ನಾನು ಸ್ಥಳಕ್ಕೆ ಹೋಗಿ ನೋಡಿದ ಮೇಲೆ 200 ಮನೆಗಳನ್ನು ಕೊಟ್ಟಿದ್ದೇನೆ. ಕೆಲವರು ವಿಧಾನಪರಿಷತ್ ಸದಸ್ಯರಿರಬಹುದು, ಶಾಸಕರಿರಬಹುದು, ಕೆಲವು ಊರುಗಳಲ್ಲಿ 50 ಮನೆಗಳನ್ನು ಕೊಟ್ಟಿರಬಹುದು. ಕೆಲವರು 200 ಮನೆಗಳನ್ನು ಕೇಳಿದಾಗ, 50 ಮನೆಗಳನ್ನೂ ಕೊಡುವುದಕ್ಕಾಗದಿದ್ದರೆ ನಾನೇಕೆ ಮಂತ್ರಿಯಾಗಿರಬೇಕು? ಅದರಲ್ಲಿ ದುಡ್ಡು ಹೊಡೆಯುವುದಾಗಲಿ, ಏನಾದರೂ, ಲೋಪದೋಷವಾಗಲಿ ಇದ್ದರೆ ಹೇಳಲಿ. ನನಗೆ ವೈಯಕ್ತಿಕವಾಗಿ ಯಾವುದೇ ತಾಲ್ಲೂಕಿನಲ್ಲಿ ಇಂಥ ಒಂದು ಬೆನಿಫಿಷಿಯರ್‌ಗೆ ಮನೆ ಕೊಡಿಸುವ ಅಧಿಕಾರವಿಲ್ಲ. ಅದು ಆಶ್ರಯ ಸಮಿತಿ ಅಧ್ಯಕ್ಷರಿಗಿದೆ. ನಾನು 200 ಮನೆಗಳನ್ನು ಹೇಳಲು ಗ್ರಾಮಕ್ಕೆ ಕೊಟ್ಟರೆ, ಅಲ್ಲಿ ಫಲಾನುಭವಿಯನ್ನು ಆಯ್ಕೆ ಮಾಡುವುದು ಸಂಬಂಧಪಟ್ಟ ಕ್ಷೇತ್ರದ ಶಾಸಕ ಅಧ್ಯಕ್ಷತೆಯಲ್ಲಿರುವ ವಸತಿ ಸಮಿತಿಗೆ ಅಧಿಕಾರವಿದ್ದು, ಅವರು ಮಾಡುತ್ತಾರೆಯೇ ಹೊರತು ನನಗೆ ಆ ಅಧಿಕಾರವಿಲ್ಲ. ಗಂಡಸಿ ಕ್ಷೇತ್ರದ

ಶಾಸಕರು ಈ ಬಗ್ಗೆ ಸ್ಪಷ್ಟೀಕರಣ ಬೇಕೆಂದು ಕೇಳಿದ್ದರಿಂದ, ಸ್ಪಷ್ಟೀಕರಣ ಕೊಡುತ್ತಿದ್ದೇನೆ. ಇವತ್ತಿನ ದಿವಸ ಕೆಲವು ಊರುಗಳಿಗೆ 50 ಅಥವಾ100 ಮನೆಗಳನ್ನು ಕೊಟ್ಟಿದ್ದಾರೆನ್ನುತ್ತಾರೆ. ಒಬ್ಬ ಜಿಲ್ಲಾಪಂಚಾಯತ್ ಅಧ್ಯಕ್ಷರು ಬಂದು ನನಗೆ 50 ಮನೆಗಳು ಬೇಕೆಂದು ಕೇಳಿದಾಗ, ಹೆಚ್ಚುವರಿ ಮನೆಗಳಲ್ಲಿ ಕೊಟ್ಟರೆ ತಪ್ಪಿದೆಯೇ? ರಾಜಕೀಯವಾಗಿ ಅದರ ಬಗ್ಗೆ ಮಾತನಾಡುವುದಾದರೆ ಹಾಗೆಯೇ ಡಿಸ್ಕಸ್ ಮಾಡೋಣ. ಶ್ರೀ ಮುನಿಯಪ್ಪನವರು ನನ್ನ ಮೇಲೆ ಚಾರ್ಜ್ ಮಾಡಿದರು. ಅವರಿಗೆ ಹತ್ತಾರು ಪತ್ರಗಳನ್ನು ಬರೆದಿದ್ದೇನೆ. ಅವರ ಜಿಲ್ಲೆಯಾದ ಕೋಲಾರಕ್ಕೆ ಹೋಗಿ ಸಮೀಕ್ಷೆ ಮಾಡಿದ್ದೇನೆ, ಅವರು 375 ಮನೆಗಳನ್ನು ಇನ್ನು ಫಲಾನುಭವಿಗಳಿಗೆ ಕೊಟ್ಟಿಲ್ಲ. ಅವರು ನೋಡಲಿ. ಶ್ರೀ ಮುನಿಯಪ್ಪನವರ ಬಗ್ಗೆ ನನಗೆ ಗೌರವವಿದೆ. ನಾನು ಹಲವಾರು ಪತ್ರಿಕೆಗಳಲ್ಲಿ, ಯಾವುದಾದರೂ ಕ್ಷೇತ್ರಗಳಲ್ಲಿ ಸರ್ಕಾರ ಕೊಟ್ಟಂಥ ಮನೆಗಳನ್ನು ಹಂಚಿಕೆ ಕೊಡದೇ ಹೋದರೆ ಅದನ್ನು ಬೇರೆ ಕಡೆಗೆ ಡೀವಿಯೇಟ್ ಮಾಡುತ್ತೇನೆಂದು ಹೇಳಿಕೆ ಕೊಟ್ಟಿದ್ದೇವೆ. ನಿಮ್ಮ ತಾಲ್ಲೂಕಿನಲ್ಲಿ 375 ಮನೆಗಳನ್ನು ಕೊಟ್ಟಿದ್ದೇವೆ. 2 ವರ್ಷಗಳಾಯಿತು ಇವತ್ತಿನವರೆಗೆ ಜನರಿಗೆ ಕೊಟ್ಟಿಲ್ಲ. ಅವರು ಏನಾದರೂ ಬಯ್ಯಲಿ, ನನಗೇನೂ ಅಭ್ಯಂತರವಿಲ್ಲ. ವಿರೋಧಪಕ್ಷದವರು ಬಯ್ಯುವುದು, ಆಡಳಿತ ಪಕ್ಷದವರು ಅವರ ಟೀಕೆ-ಟಿಪ್ಪಣಿಗಳಿಗೆ ಒಳಗಾಗುವುದು ಇರುವುದೇ. ಏಕೆಂದರೆ, ವಾಸ್ತವಾಂಶ ನಾನು ಸಭೆಯ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ವಿರೋಧಪಕ್ಷದ ನಾಯಕರು ಬೇರೆ ಸುಮಾರು 40 ತಾಲ್ಲೂಕು, 60 ವಿಧಾನಸಭಾ ಕ್ಷೇತ್ರಗಳಿಗೆ ಇನ್ನೂ ಮನೆಗಳು ಸಿಕ್ಕಿಲ್ಲ ಎನ್ನುವ ಅಪಾದನೆಯನ್ನು ಮಾಡಿದರು. ಮಾನ್ಯ ಶಿವರಾಮುರವರು, ಶ್ರೀ ಜಾಲಪ್ಪನವರು ಅರ್ಜಿಯನ್ನು ಮುಖ್ಯಮಂತ್ರಿಗಳಿಗೆ, ಪತ್ರಿಕೆಗಳಿಗೆ ಕೊಟ್ಟರೆಂದು ಹೇಳಿದರು. ಅದಕ್ಕಿಂತ ಮುಂಚಿತವಾಗಿ ನನಗೆ ಕೆಲವು ಶಾಸಕರು ಮನೆಗಳು ಬೇಕೆಂದು ಬೇಡಿಕೆ ಕೊಟ್ಟರು. ನಾನು ತಕ್ಷಣ ಆ ಪಕ್ಷ ಈ ಪಕ್ಷವೆನ್ನದೆ 40 ತಾಲ್ಲೂಕು 60 ವಿಧಾನಸಭಾ ಕ್ಷೇತ್ರಗಳಿಗೆ ಮತ್ತೆ ಹೆಚ್ಚಿನ ಮನೆಗಳನ್ನು ಕೊಡುವುದಕ್ಕೆ ಈಗಾಗಲೇ ಸರ್ಕಾರಕ್ಕೆ ಪ್ರಪೋಸಲ್ ಕಳುಹಿಸಿದ್ದೇನೆ. ಪತ್ರಿಕೆ ಹೇಳಿಕೆ ಬಂದ ಮೇಲೆ ಕಳುಹಿಸಿಲ್ಲ. ಅದರಲ್ಲಿ ನಮ್ಮ ಪಕ್ಷ, ಬಿಜೆಪಿ ಕಾಂಗ್ರೆಸ್ ಸದಸ್ಯರಿರಬಹುದು. ಅವರಿಗೆ ಕೊಡಬೇಕೆಂದು ಈಗಾಗಲೇ ಸಚಿವ ಸಂಪುಟ ಸಭೆಯಲ್ಲಿ ಮುಖ್ಯಮಂತ್ರಿಗಳಿಗೆ ಪ್ರಪೋಸಲ್ ಕೊಟ್ಟಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಈ ವಿಷಯವನ್ನು ಮುಂದಿನ ಸಚಿವಸಂಪುಟದ ಸಭೆಯಲ್ಲಿ ಮುಂದಿಡಿ ಎಂದು ಈಗಾಗಲೇ ಸೂಚನೆ ಕೊಟ್ಟಿದ್ದಾರೆ. ಅಲ್ಲಿ ತೀರ್ಮಾನವಾದ ನಂತರ ನಲವತ್ತು ತಾಲ್ಲೂಕುಗಳು ಇರಬಹುದು, ಅಥವಾ ಅರವತ್ತು ವಿಧಾನಸಭಾ ಕ್ಷೇತ್ರಗಳಿರಬಹುದು, ಇವುಗಳಿಗೆ ಮನೆಗಳನ್ನು ಕೊಡುತ್ತೇವೆಂದು ಸಭೆಯ ಮುಖೇನ ತಮ್ಮ ಗಮನಕ್ಕೆ ತರಬಯಸುತ್ತೇನೆ. ಇದರಲ್ಲಿ ವೈಯಕ್ತಿಕ ಪಾತ್ರ ನನ್ನದೇನೂ ಇಲ್ಲ. ಮಾನ್ಯ ಶಿವರಾಮ್‌ರವರು ಹಾಸನ ಜಿಲ್ಲೆಯಲ್ಲಿ ಏನೂ ಕೆಲಸ ಮಾಡಿಲ್ಲವೆಂದು ಹೇಳಿದರು. ನನಗೇನೂ ಆ ಕ್ಷೇತ್ರ ಈ ಕ್ಷೇತ್ರ ಎನ್ನುವ ಭೇದವಿಲ್ಲ. ಏಕೆಂದರೆ,

ಅವರಿಗೆ ಹಾಸನ ಹಾಗೂ ಅರಸೀಕೆರೆ ಎರಡೂ ತಾಲ್ಲೂಕುಗಳಿಗೂ ಸೇರಿದಂತೆ ಸುಮಾರು 394 ಮನೆಗಳನ್ನು ಕೊಟ್ಟಿದ್ದೇವೆ. ಕಳೆದ ಸಲ ಮಾನ್ಯ ಮುನಿಯಪ್ಪನವರು ನೂರು ಮನೆಗಳನ್ನು ಕೊಡಬೇಕೆಂದು ಏನು ನಿರ್ಣಯಿಸಿದ್ದರೋ ಅದೇ ರೀತಿಯಲ್ಲಿ ನಾನು ಕೊಟ್ಟಿದ್ದೇನೆ. ವೈಯಕ್ತಿಕವಾಗಿ ನಾನು ಯಾರ ಬಗ್ಗೆ ಟೀಕೆಟಿಪ್ಪಣಿಯನ್ನು ಮಾಡುವುದಕ್ಕೆ ಹೋಗುವುದಿಲ್ಲ. ಆ ತಾಲ್ಲೂಕು ಈ ತಾಲ್ಲೂಕು ಎಂದು ಹೇಳದೇ ಎಲ್ಲಾ ತಾಲ್ಲೂಕುಗಳಲ್ಲಿ ಮನೆಗಳನ್ನು ಕೊಟ್ಟಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ :— ನಿಮ್ಮ ಸಚಿವಸಂಪುಟದಲ್ಲಿ 1998-99ನೇ ಸಾಲಿಗೆ ಆಶ್ರಯ ಮನೆಗಳನ್ನು ಕೊಡತಕ್ಕಂಥದ್ದರ ಬಗ್ಗೆ ಯಾರ ರೀತಿ ತೀರ್ಮಾನವಾಗಿದೆ ಎಂಬುದು ನನಗೆ ಗೊತ್ತಿಲ್ಲ. ವಿಧಾನ ಸಭಾ ಕ್ಷೇತ್ರದ ಆಧಾರದ ಮೇಲೆ ಮನೆಗಳನ್ನು ಹಂಚಿದ್ದಿರೋ, ಅಥವಾ ತಾಲ್ಲೂಕುವಾರು ಆಧಾರದ ಮೇಲೆ ಮನೆಗಳನ್ನು ಹಂಚಿದ್ದಿರೋ ಏನು ತೀರ್ಮಾನವಾಗಿದೆ ಎನ್ನತಕ್ಕಂಥದ್ದರ ಬಗ್ಗೆ ತಾವು ಸ್ಪಷ್ಟಪಡಿಸಬೇಕು ಹಾಗೂ ಇದರ ಬಗ್ಗೆ ಹೇಳಿಕೆ ಕೂಡ ಮಂಡಿಸಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ :— ಮಾನ್ಯ ಸಚಿವರು ಹೇಳಿಕೆ ಮಾಡುತ್ತಾ, ನಾನು ಆಶ್ರಯ ಸಮಿತಿಯ ಅಧ್ಯಕ್ಷರಿಗೆ ಬಿಟ್ಟು ತಾಲ್ಲೂಕುಗಳಿಗೆ ಕೊಟ್ಟಿದ್ದೇನೆ ಎನ್ನತಕ್ಕಂಥ ಮಾತನ್ನು ಹೇಳಿದರು. ಮಾನ್ಯ ಸಚಿವರು ಇದನ್ನು ಸ್ಪಷ್ಟಪಡಿಸಬೇಕು. ಏಕೆಂದರೆ, ತಿಪಟೂರು ತಾಲ್ಲೂಕಿನಲ್ಲಿ ಸುಮಾರು 8-10 ಹಳ್ಳಿಗಲಿಗೆ ಇಂಥಿಂಥ ಹಳ್ಳಿಗಳಿಗೆ ಮನೆಗಳನ್ನು ಕೊಡಬೇಕೆಂದು ಸರ್ಕಾರಿ ಆದೇಶವಾಗಿದೆ. ನಿರ್ದಿಷ್ಟವಾದ ಹಳ್ಳಿಗಳ ಹೆಸರುಗಳನ್ನೂ ಕೂಡ ತಾವು ಆದೇಶದಲ್ಲಿ ಹಾಕಿದ್ದೀರಿ. ಆದ್ದರಿಂದ, ತಾವು ಸ್ಪಷ್ಟಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :— ಶಾಸಕರು ಲೆಟರ್ ಕೊಟ್ಟರೆ ಆ ಲೆಟರ್ ಮೇಲೆ ಕೊಟ್ಟಿದ್ದೇವೆಂದು ನಾನು ಈಗಾಗಲೇ ಹೇಳಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಇಲ್ಲ ಶಾಸಕರು ಲೆಟರ್ ಕೊಟ್ಟಿಲ್ಲ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ ಎಂಟು ಹಳ್ಳಿಗಳಲ್ಲಿ ಒಂದೊಂದು ಹಳ್ಳಿಗೆ ಇಷ್ಟೇ ಮನೆಗಳನ್ನು ಕೊಡಬೇಕೆಂದು ತಾವು ಇಲ್ಲಿ ಕುಳಿತುಕೊಂಡು ಆರ್ಡರ್ ಮಾಡಿದರೆ ಹೇಗೆ? ಪಾರ್ಟ್ ಆಫ್ ತಿಪಟೂರಿಗೆ ನಾನೂ ಕೂಡ ಎಂಎಲ್‌ಎ ಆಗಿದ್ದೇನೆ. ನನ್ನದು

ಹೋಬಳಿ ಬಿಟ್ಟು ಹೋಗಿದೆ. ಗ್ರಾಮ ಸಭೆ ಪಟ್ಟಿಯಲ್ಲಿ ಅವರ ಹೆಸರುಗಳೂ ಕೂಡ ಬಿಟ್ಟು ಹೋಗಿದೆ. ನಿರ್ದಿಷ್ಟವಾಗಿ ಇಂಥಿಂಥ ಹಳ್ಳಿಗೆ ಇಷ್ಟೇ ಮನೆಗಳನ್ನು ಕೊಡಬೇಕೆಂದು ಆದೇಶ ಮಾಡಿದರೆ, ಆಶ್ರಯ ಸಮಿತಿಯಲ್ಲಿ ಎಂಎಲ್‌ಎಗಳು ಏಕೆ ಇರಬೇಕು?

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :— ಇಂಥ ಹಳ್ಳಿಗಳಲ್ಲಿ ಇಂಥ ಊರಿನಲ್ಲಿ ಇಂಥವರಿಗೆ ಮನೆಯನ್ನು ಕೊಡಬೇಕು ಎಂದು ನಾನೇನೂ ಹೇಳಿಲ್ಲ. ದಯಮಾಡಿ ತಾವು ಆದೇಶದ ಪ್ರತಿಯನ್ನು ತೆಗೆದು ನೋಡಬೇಕು.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :— ಆ ರೀತಿ ನಾವೇನಾದರೂ ಬರೆದುಕೊಟ್ಟಿದ್ದರೆ ಇನ್ನು ಮೇಲೆ ನಾವು ಇಲ್ಲಿಗೆ ಬರುವುದಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ :— ಆ ರೀತಿ ಬರೆದು ಕೊಟ್ಟಿದ್ದರೆ ಅದನ್ನು ಆಶ್ರಯ ಸಮಿತಿಯ ಮುಂದೆ ಇಡುತ್ತಾರೆ, ಬೇಕಾದರೆ ಮನೆಗಳನ್ನು ಕೊಡುತ್ತಾರೆ, ಬೇಡವಾದಲ್ಲಿ ಬಿಡುತ್ತಾರೆ. ಇದರಲ್ಲಿ ನಮಗೇನೂ ಅಧಿಕಾರವಿರುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಇಂಥ ಊರಿಗೆ 50 ಮನೆಗಳನ್ನು ಕೊಡಬೇಕು ಎಂದು ಸರ್ಕಾರ ಆದೇಶ ಮಾಡಿದರೆ ಹೇಗೆ?

ಶ್ರೀ ಬಿ. ಶಿವರಾಮ್ :— ಆದೇಶದಲ್ಲಿ ಏನಿದೆ ಎಂದರೆ, ಇಂಥ ಗ್ರಾಮಕ್ಕೆ ಇಪ್ಪತ್ತು ಮನೆಗಳನ್ನು ಕೊಡಬೇಕು ಎಂದು ಇದೆ. ನಾನು ಬೇಕಾದರೆ ಆದೇಶವನ್ನು ಓದುತ್ತೇನೆ. ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಆರ್ಥಿಕವಾಗಿ ಹಿಂದುಳಿದಿರುವವರಿಗೆ 1998-99ನೇ ಸಾಲಿಗೆ ಆಶ್ರಯ ಯೋಜನೆಯ ಅಡಿಯಲ್ಲಿ ಹೆಚ್ಚುವರಿಯಾಗಿ ತೊಂಬತ್ತು ಸಾವಿರ ಮನೆಗಳ ಭೌತಿಕ ಗುರಿಯನ್ನು ನಿಗದಿಪಡಿಸಿ, ಇದರಲ್ಲಿ ಈಗಾಗಲೇ ತಾಲ್ಲೂಕುವಾರು, ವಿಧಾನಸಭಾ ಕ್ಷೇತ್ರವಾರು ಮನೆಗಳನ್ನು ಹಂಚಲಾಗಿದೆ. ಪುನಃ ಇವುಗಳನ್ನು ಹೊರಡಿಸಿ, ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕಿನ ಪಂಚಾಯಿತಿ ದಸರಿಘಟ್ಟ ಗ್ರಾಮಕ್ಕೆ -75, ತಗಡೂರು ಗ್ರಾಮಕ್ಕೆ-20, ಬಜಗೂರು ಗ್ರಾಮ ಪಂಚಾಯಿತಿಗೆ-75, ಹುಣಸೆಘಟ್ಟ-20, ಗಂಗನಘಟ್ಟ-20, ಅಲ್ಲೂರು-20, ಹೀಗೆ ಒಟ್ಟಾರೆ ಸುಮಾರು 280 ಆಶ್ರಯ ಮನೆಗಳನ್ನು ಹೆಚ್ಚುವರಿಯಾಗಿ ಆದೇಶ ಹೊರಡಿಸಲಾಗಿದೆ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :— ತಿಪಟೂರಿಗೆ ಬಂದು ಫಲಾನುಭವಿಗಳನ್ನು ಗುರ್ತಿಸುತ್ತಿರೋ?

ಶ್ರೀ ಬಿ. ಶಿವರಾಮ್ :— ಗಂಗನಘಟ್ಟ ಗ್ರಾಮ 60 ಮನೆಗಳು ನಿಮ್ಮ ಸರ್ವೆ ಪ್ರಕಾರ ಆ ಪಟ್ಟಿಯಲ್ಲಿ ಫಲಾನುಭವಿಗಳ ಹೆಸರು ಇರಬೇಕು ಅಲ್ಲವೆ?

ಅಧ್ಯಕ್ಷರು :— ಮಾನ್ಯ ಸಚಿವರು ತಮ್ಮ ಉತ್ತರವನ್ನು ಮುಗಿಸಲಿ.

ಶ್ರೀ ಹೆಚ್.ಡಿ. ರೇವಣ್ಣ :— ನಾನು ಉತ್ತರ ಕೊಡುವುದಕ್ಕೆ ಮಾನ್ಯ ಸದಸ್ಯರು ಅವಕಾಶ ಕೊಡಬೇಕು. ನಂತರ ತಾವು ಕ್ಲಾರಿಫಿಕೇಷನ್ ಕೇಳಿ ನಾನು ಅದಕ್ಕೆ ಉತ್ತರ ಹೇಳುತ್ತೇನೆ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :— ಅದರಲ್ಲಿ ನನ್ನದು ಒಂದು ಹೋಬಳಿ ಸೇರುತ್ತದೆ, ಅವರಿಗೆ ಮನೆಗಳು ಬೇಡವೆ?

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :— ನಾನು ಉತ್ತರ ಕೊಡುವುದಕ್ಕೆ ಅವಕಾಶ ಕೊಡಬೇಕು ನಂತರ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಕೇವಲ ಐದು ಹಳ್ಳಿಗಳಿಗೆ ತಾವು ಇನ್ನೂರು ಮನೆಗಳನ್ನು ಕೊಡಬಹುದೆ?

(ಗೊಂದಲ)

ಅಧ್ಯಕ್ಷರು :— ತಾವು ಉತ್ತರ ಮುಂದುವರಿಸಿ.

ಶ್ರೀ ಹೆಚ್.ಡಿ. ರೇವಣ್ಣ :— ಮಾನ್ಯ ಸದಸ್ಯರು ಮಾತನಾಡುವಾಗ ನಾನು ಕೂಡ ಎಲ್ಲಾ ಕೇಳಿಸಿಕೊಂಡಿದ್ದೇನೆ. ನಾನು ಉತ್ತರ ಕೊಡುವುದಕ್ಕೆ ದಯಮಾಡಿ ಅವಕಾಶ ಮಾಡಿಕೊಡಬೇಕು. ಮಾನ್ಯ ಸದಸ್ಯರುಗಳು ಇಲ್ಲಿ ನನ್ನ ಮೇಲೆ ಅಪಾದನೆ ಮಾಡುತ್ತಿದ್ದಾರೆ. ಮಾನ್ಯ ಚೌಡಯ್ಯನವರು ಹೇಳಿದಾದ ಮೇಲೆ ಒಂದೇ ಊರಿಗೆ ಇನ್ನೂರು ಮನೆಗಳನ್ನು ಮಂಜೂರು ಮಾಡಿದ್ದೇವೆ, ಇದು ಲೆಕ್ಕಕ್ಕೆ ಬರುವುದಿಲ್ಲವೆ? ನಾನು ಏನಾದರೂ ತಪ್ಪು ಮಾಡಿದ್ದರೆ ನೇರವಾಗಿ ಅಪಾದನೆ ಮಾಡಿ.

ಮನೆಗಳನ್ನು ಹಂಚಿಕೆ ಮಾಡಿ ನಾನೇನು ದುಡ್ಡು ಹೊಡೆದಿದ್ದೇನೆಯೇ? ಈ ರೀತಿ ಇದ್ದರೆ ತಾವು ಬೇಕಾದರೆ ಅಪಾದನೆ ಮಾಡಿ ಅದಕ್ಕೆ ನಾನು ಉತ್ತರ ಕೊಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ನೀವು ಇಷ್ಟ ಬಂದ ರೀತಿಯಲ್ಲಿ ಮನೆಗಳನ್ನು ಕೊಡುತ್ತಿದ್ದರೆ ನಾವೇನು ಇಲ್ಲಿ ಕಡಬು ತಿಂದುಕೊಂಡು ಕುಳಿತುಕೊಳ್ಳಬೇಕೇ?.... ನಾವು ಇಲ್ಲಿ ಕಡಲೆಪುರಿ ತಿನ್ನುವುದಕ್ಕೆ ಬಂದಿದ್ದೇವೆಂದು ತಾವು ತಿಳಿದುಕೊಂಡಿದ್ದೀರಾ?... xxx ಸರ್ಕಾರದ್ದು ತಾವು ತಂದು ಕೊಡುವುದು... ತಿಪಟೂರು ಕ್ಷೇತ್ರದಲ್ಲಿ ನಾವು ಶಾಸಕರಾಗಿ ಕತ್ತೆ ಕಾಯುವುದಕ್ಕೆ ಇದ್ದೇವೆ ಎಂದು ಭಾವಿಸಿದ್ದೀರಾ?.. ನೀವು ಏನು ನಿಮ್ಮ ಸ್ವಂತದ್ದು ಏನಾದರೂ ಕೊಡುತ್ತಿರಾ?...

(ಗೊಂದಲ)

ಶ್ರೀ ಗಂಗಹನುಮಯ್ಯ :— ಮಾನ್ಯ ಸದಸ್ಯರು ಹೇಳಿದಂಥ ಪದವನ್ನು xxx ದಯಮಾಡಿ ವಾಪಸ್ ತೆಗೆದುಕೊಳ್ಳಬೇಕು.

(ಗದ್ದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಸಚಿವರು ಮಂತ್ರಿಗಳಿಗೆ ಡಿಸ್ಕ್ರೀಶನ್ ಇರುತ್ತದೆ ಎಂದು ಹೇಳಿದರು. ಯಾರ್‍ಯಾರು ಶಾಸಕರು ಪತ್ರಗಳನ್ನು ಕೊಟ್ಟಿದ್ದರೋ ಅಂಥವರಿಗೆ ಕೊಟ್ಟಿದ್ದೇವೆಂದರು. ಜೆಡಿಪಿ ಅಧ್ಯಕ್ಷರಾಗಲಿ, ಲೋಕಲ್ ಜನಗಳು ಏನಾದರೂ ಕೇಳಿದರೆ ಅವರುಗಳಿಗೆ ಕೊಟ್ಟಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿದರು. ನಾವು ಸದನದಲ್ಲಿ ಒಂದು ನಿಯಮವನ್ನು ಹಾಕಿಕೊಂಡಿದ್ದೇವೆ....

ಅಧ್ಯಕ್ಷರು :— ಯಾರೋ ಈಗ ಅಪ್ಪ, ತಾತ, xxx ಎಂದು ಮಾತನಾಡಿದರಂತೆ, ಅದು ಏನು ರೆಕಾರ್ಡ್ಸ್‌ಗೆ ಹೋಗುವುದು ಬೇಡ, ಅದನ್ನೆಲ್ಲಾ ತೆಗೆದುಹಾಕಿಬಿಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಸಚಿವರು ಹೇಳುತ್ತಾರೆ ಮನವಿಗಳನ್ನು ಕೊಟ್ಟವರಿಗೆ ನಾವು ಕೊಟ್ಟಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿದರು. ರಾಜ್ಯದಲ್ಲಿ ಸುಮಾರು 20 ಲಕ್ಷ ಜನರು ಏನು ಮನೆಯಿಲ್ಲದವರು, ಸೈಟ್ ಇಲ್ಲದವರು ಇದ್ದಾರೆ ಇವರುಗಳಿಗೆಲ್ಲಾ ಆದ್ಯತೆಯ ಮೇಲೆ ಮನೆಗಳನ್ನು ಕೊಡಬೇಕೆಂದು ಸರ್ಕಾರ ತೀರ್ಮಾನ ತೆಗೆದುಕೊಂಡಿದೆಯೋ ಇಲ್ಲವೋ? ಈ ರೀತಿ ತೀರ್ಮಾನ ತೆಗೆದುಕೊಂಡಿದ್ದರೂ ಪ್ರತಿಯೊಂದು ಮತಕ್ಷೇತ್ರಕ್ಕೂ ಸರಿಸಮಾನವಾಗಿ ಮನೆಗಳನ್ನು ಹಂಚಬೇಕು ಎನ್ನುವ ನೀತಿ ಇದೆಯೋ?

---

xxx ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಇಲ್ಲವೋ? ಇದರ ಜೊತೆಗೆ ಮಾನ್ಯ ಸಚಿವರು ಎಲ್ಲಿ ಹತ್ತು ಸಾವಿರ ಮನೆಗಳು ಬಿದ್ದು ಹೋಗಿವೆ ಅಂಥ ಕಡೆ ಕೊಟ್ಟಿದ್ದೇವೆಂದರು. ಇದಕ್ಕೇನೂ ನಮ್ಮ ತಕರಾರು ಇಲ್ಲ. ಆದರೆ ನನ್ನ ಮೂಲ ಪ್ರಶ್ನೆ ಏನೆಂದರೆ ತೊಂಬತ್ತು ಸಾವಿರ ಮನೆಗಳಲ್ಲಿ ಯಾವ ರೀತಿ ಹಂಚಿಕೆ ಮಾಡಿದ್ದೀರಿ? ಉದಾಹರಣೆಗೆ ಮಾನ್ಯ ಎಂ.ಪಿ. ಪ್ರಕಾಶ್‌ರವರ ಜಿಲ್ಲೆಗೆ ಸಂಬಂಧಪಟ್ಟಹಾಗೆ ಹೇಳುವುದಾದರೆ, ಹಡಗಲಿ ಕ್ಷೇತ್ರಕ್ಕೆ 800 ಮನೆಗಳನ್ನು ಕೊಟ್ಟಿದ್ದಾರೆ, ಅಲ್ಲಿ ಏನಾದರೂ ಮನೆಗಳು ಬಿದ್ದಿವೆಯೇ?.. ನಾನು ಸ್ವಲ್ಪ ಹೇಳುವುದನ್ನು ತಾವು ಕೇಳಬೇಕು.. ಒಟ್ಟಾರೆಯಾಗಿ ನಾನು ಹೇಳುತ್ತಿದ್ದೇನೆ. 16-11-98ರ ಜಿ.ಓ. ಪ್ರಕಾರ ಎಲ್ಲರಿಗೂ ಕೊಟ್ಟಂತೆ 200 ಮನೆ ಕೊಟ್ಟಿದ್ದೀರಿ. ಮತ್ತೊಂದು ಆದೇಶ 19-11-98ರ ಪ್ರಕಾರ 300 ಮನೆ, ಮತ್ತೊಂದು ಅದೇ ಆದೇಶ, ಅದೇ ದಿನ ಅಂದರೆ 16-11-99ರ ಪ್ರಕಾರ 300 ಮನೆ, ಅಂದರೆ ಒಟ್ಟಾರೆಯಾಗಿ 800 ಮನೆಗಳು ಆಯಿತು. ಇನ್ನು ಕೂಡ್ಲಿಗಿಯಲ್ಲಿ ಹೇಳುವುದಾದರೆ 1,150 ಮನೆಗಳನ್ನು ಕೊಟ್ಟಿರುತ್ತೀರಿ.

ಶ್ರೀ ಎಂ.ಪಿ. ಪ್ರಕಾಶ್ :— ಫ್ಲಡ್‌ನಿಂದ ಆಗಿರತಕ್ಕಂಥ ಡ್ಯಾಮೇಜ್ ಬಗ್ಗೆ ತಹಸೀಲುದಾರರು ನೀಡಿರತಕ್ಕಂಥ ವರದಿಯ ಆಧಾರದ ಮೇಲೆ ಕೊಡಲಾಗಿದೆ.

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ :— ಎಲ್ಲವನ್ನೂ ಮಂತ್ರಿಗಳೇ ಹಂಚಿಕೊಂಡರೆ ಬೇರೆಯವರು ಮಣ್ಣು ಮುಕ್ಕಬೇಕೇ?

ಶ್ರೀಮತಿ ಬಿ.ಟಿ. ಲಲಿತಾ ನಾಯಕ್:— ಮಾನ್ಯ ಅಧ್ಯಕ್ಷರೆ, ಫ್ಲಡ್ ಡ್ಯಾಮೇಜ್‌ನಿಂದ ಊರೇ ಮುಳುಗಿ ಹೋಗಿವೆ. ಇಂಥ ಸಮಯದಲ್ಲಿ ಮನೆಗಳು ಅವಶ್ಯಕತೆ ಇರುವುದರಿಂದ ಕೊಡಲಾಗಿದೆ.

+ **ಶ್ರೀ ಮಲ್ಲಿಕಾರ್ಜುನ ಖರ್ಗೆ** :— ಮಾನ್ಯ ಅಧ್ಯಕ್ಷರೆ, ಕೂಡ್ಲಿಗಿ ಕ್ಷೇತ್ರಕ್ಕೆ 1150 ಮತ್ತು ಸಿರುಗುಪ್ಪ ಕ್ಷೇತ್ರಕ್ಕೆ 700 ಮನೆಗಳನ್ನು ಮಂಜೂರು ಮಾಡಿದ್ದಾರೆ. ಆದರೆ, ಅದೇ ಜಿಲ್ಲೆಯ ಕಾಂಗ್ರೆಸ್ ಶಾಸಕರ ಕುರುಗೋಡು ಕ್ಷೇತ್ರಕ್ಕೆ ಕೇವಲ 200 ಮನೆಗಳನ್ನು ಹಾಗೆಯೇ ಹೊಸಪೇಟೆ ಕ್ಷೇತ್ರಕ್ಕೆ 400 ಮನೆಗಳನ್ನು ಮತ್ತು ಮಾನ್ಯ ಎಂ.ವೈ. ಘೋರ್ಪಡೆ ಕ್ಷೇತ್ರವಾದ ಸಂಡೂರಿಗೆ 200 ಮನೆಗಳನ್ನು ಮಾತ್ರ ಕೊಡಲಾಗಿದೆ. ಇದನ್ನು ಯಾವ ಮಾನದಂಡದ ಮೇಲೆ ಕೊಟ್ಟಿದ್ದಾರೆಂದು ನಾವು ಹೇಳೋಣ? ಒಂದೆರಡು ಕಡೆ ಅವಶ್ಯಕತೆ ಇರುವುದರಿಂದ ಮಾಡಿದ್ದಾರೆಂದು ತಿಳಿದು ಕೊಳ್ಳುತ್ತೇನೆ. ಆದರೆ ನೀವು ಇಲ್ಲಿ ಸಾರಾಸಗಟಾಗಿ ಡಿಸ್ಕ್ರಿಮಿನೇಟ್ ಮಾಡಿ, ಎಲ್ಲರಿಗೂ ನ್ಯಾಯವಾಗಿ ಕೊಟ್ಟಿದ್ದೇವೆ ಎನ್ನತಕ್ಕಂಥದ್ದನ್ನು ಯಾವ ರೀತಿ ಸಮರ್ಥನೆ ಮಾಡಿಕೊಳ್ಳುತ್ತೀರಾ? ಇದು ಇಡೀ ಸದನದಲ್ಲಿರತಕ್ಕಂಥ ಶಾಸಕರ ಪ್ರಶ್ನೆಯಾಗಿದೆ. ಆದ್ದರಿಂದ, ಯಾವ ಮಾನದಂಡದ ಮೇಲೆ ಕೊಡಲಾಗಿದೆ ಎಂದು ಹೇಳಬೇಕು? ಜೇವರ್ಗಿ ಅಥವಾ ಇನ್ನೊಂದು ಕ್ಷೇತ್ರಗಳಿಗೆ 10

ಸಾವಿರ ಮನೆಗಳನ್ನು ಕೊಡುತ್ತೇವೆಂದು ತಾವು ಹೇಳಿದರೆ ಅದನ್ನು ನಾವು ಒಪ್ಪಬಹುದು. ಆದರೆ 90 ಸಾವಿರ ಮನೆಗಳನ್ನು ಯಾವ ಮಾನದಂಡದ ಮೇಲೆ ಕೊಡಲಾಗಿದೆ? ಕ್ಯಾಬಿನೆಟ್‌ನಲ್ಲಿ ಈ ವಿಷಯವನ್ನು ತೀರ್ಮಾನ ಮಾಡಲಾಗಿದೆಯೆ? ಇವತ್ತಿನದಿವಸ 225 ಕ್ಷೇತ್ರಗಳನ್ನೂ ಕೂಡ ನೀವು ಸರಿಸಮಾನವಾಗಿ ನೋಡಬೇಕಾಗುತ್ತದೆ. ಇದರಲ್ಲಿ 24 ಕ್ಷೇತ್ರಗಳಲ್ಲಿರತಕ್ಕಂಥ ಅರ್ಬನ್ ಏರಿಯಾಗಳನ್ನು ಕೆಲವು ಬಿಟ್ಟು ಉಳಿದವುಗಳಿಗೆ ಬೇರೆ ರೀತಿಯಲ್ಲಿ ಸಹಾಯ ಮಾಡಿತ್ತೇವೆಂದು ಹೇಳಿದರೆ ಪರವಾಗಿಲ್ಲ. ಆದರೆ ರೂರಲ್ ಏರಿಯಾದಲ್ಲಿ ಮತ್ತು ಒಂದೇ ಜಿಲ್ಲೆಯಲ್ಲಿ ಹಾಗೂ ಒಂದೇ ಪಕ್ಷದಲ್ಲಿ ಡಿಸ್‌ಕ್ರಿಮಿನೇಷನ್ ಇದೆ. ಇದನ್ನು ಯಾವ ಅದರದ ಮೇಲೆ ಮಾಡಿಲಾಗಿದೆ? ಒಂದು ವೇಳೆ, ಮನೆಗಳು ಸುಟ್ಟಿರುವುದರಿಂದ ಮತ್ತು ಮನೆ ಬಿದ್ದು ಹೋಗಿರುವುದರಿಂದ ಕೊಟ್ಟಿದ್ದೇವೆಂದು ಹೇಳಿದರೆ ಅದನ್ನು ಬೇಕಾದರೆ ಸಮರ್ಥನೆ ಮಾಡಿಕೊಳ್ಳೋಣ. ಆದರೆ, ಎಲ್ಲಾ ತಾಲ್ಲೂಕುಗಳಲ್ಲಿ ಏನು ವಾತಾವರಣ ಇದೆ, ಅದೇ ವಾತಾವರಣ ಇರತಕ್ಕಂಥ ತಾಲ್ಲೂಕುಗಳಿಗೆ ಸರಿಸಮಾನವಾಗಿ ತಾವು ಕೊಟ್ಟಿಲ್ಲ. ದಿನಾಂಕ 19-11-1998ರ ಜಿ.ಓ. ಪ್ರಕಾರ ಮನೆ ಹಂಚಿರುವುದರಲ್ಲಿ ತುಮಕೂರು ಜಿಲ್ಲೆಯ 7 ಕ್ಷೇತ್ರಕ್ಕೆ, ಕೋಲಾರ ಜಿಲ್ಲೆಯಲ್ಲಿ 3 ಕ್ಷೇತ್ರಕ್ಕೆ ಮನೆಗಳು ಹಂಚಿಕೆಯಾಗಿಲ್ಲ ಮತ್ತು ಬೆಂಗಳೂರು ಗ್ರಾಮಾಂತರದಲ್ಲಿ ಸುಮಾರು 5 ಕ್ಷೇತ್ರಗಳಿಗೆ ಮನೆಗಳು ಸಿಕ್ಕಿಲ್ಲ. ಬಳ್ಳಾರಿ, ಬೀದರ್ ಜಿಲ್ಲೆಯಲ್ಲಿ ಮಳೆ ಬಿದ್ದು ಮನೆಗಳು ಹಾಳಾಗಿರುವುದರಿಂದ ಮೊದಲು ಅಲ್ಲಿಗೆ ಕೊಡಲಾಗಿದೆ. ಆದರೆ, ಈಗ ಏನು 90 ಸಾವಿರ ಮನೆಗಳನ್ನು ಹಂಚಿಕೆ ಮಾಡಲಾಗಿದೆ ಅದರ ಬಗ್ಗೆ ನಾನು ಹೇಳುತ್ತಿದ್ದೇನೆ. ತಮಗೆ ಎಲ್ಲಿ ಬೇಕೋ ಅಲ್ಲಿಗೆ ಕೊಟ್ಟಿದ್ದೀರಿ. ತುಮಕೂರು ಜಿಲ್ಲೆಯ ಕಳ್ಳಂಬೆಳ್ಳ ಮತ್ತು ಬೆಳ್ಳಾವಿ ಹಾಗೂ ತುಮಕೂರು, ಕುಣಿಗಲ್, ಗುಬ್ಬಿ, ತಿಪಟೂರು, ಚಿಕ್ಕನಾಯಕನಹಳ್ಳಿಗೆ ಮನೆಗಳನ್ನು ಕೊಟ್ಟಿಲ್ಲ. ಕೋಲಾರ ಜಿಲ್ಲೆಯಲ್ಲಿ, ಚಿಕ್ಕಬಳ್ಳಾಪುರ ಮತ್ತು ಶಿಡ್ಲಘಟ್ಟ ಹಾಗೂ ಕೆ.ಜಿ.ಎಫ್.ಗೆ ಕೊಟ್ಟಿಲ್ಲ. ಬೆಂಗಳೂರು ಗ್ರಾಮಾಂತರ ಮತ್ತು ಮಂಡ್ಯ, ಮೈಸೂರು, ಕೃಷ್ಣರಾಜ್ ನಗರ, ಮತ್ತು ಚಾಮರಾಜನಗರ, ನರಸಿಂಹರಾಜನಗರ ಮತ್ತು ಹಾಸನ ಜಿಲ್ಲೆಯ ಗಂಡಸಿಗೆ ಕೊಟ್ಟಿಲ್ಲ. ಹಾಸನ ಜಿಲ್ಲೆಯ ಗಂಡಸಿ ಕ್ಷೇತ್ರಕ್ಕೆ ಮನೆಗಳನ್ನು ಕೊಡಲು ಇವರಿಗೆ ಅವಶ್ಯಕತೆ ಇರಲಿಲ್ಲವೇನು? ಕೊಡಗು ಜಿಲ್ಲೆಯಲ್ಲಿ ವಿರಾಜಪೇಟೆ, ಮಡಿಕೇರಿ, ಸೋಮವಾರಪೇಟೆ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೂಳ್ಯ, ವಿಟ್ಲ, ಮಂಗಳೂರು, ಸುರತ್‌ಕಲ್, ಕಾಪು, ಕುಂದಾಪುರ, ಬೈಂದೂರಿಗೆ ಕೊಟ್ಟಿಲ್ಲ. ಈ ಎಲ್ಲಾ ಜಿಲ್ಲೆಗಳಿಗೆ ಮನೆಗಳು ಬೇಕಾಗಿರಲಿಲ್ಲವೆ? ಹಾಗೆಯೇ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಶೃಂಗೇರಿ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಹೊನ್ನಾಳಿ ಮತ್ತು ತೀರ್ಥಹಳ್ಳಿ ಮತ್ತು ದಾವಣಗೆರೆ ಜಿಲ್ಲೆಯಲ್ಲಿ, ದಾವಣಗೆರೆ, ಮಾಯಕೊಂಡ, ಜಗಳೂರು, ಹರಪನಹಳ್ಳಿ, ಈ ಕ್ಷೇತ್ರಗಳಿಗೆ ಮನೆಗಳನ್ನು ಕೊಟ್ಟಿಲ್ಲ. ಆದರೆ, ಚಿತ್ರದುರ್ಗದ ಎಲ್ಲಾ ಕ್ಷೇತ್ರಗಳಿಗೆ ಕೊಡಲಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ

ಕುರುಗೋಡು, ಬಳ್ಳಾರಿ, ಹೊಸಪೇಟೆ, ಸಂಡೂರ್, ಕೊಟ್ಟೂರು ಕ್ಷೇತ್ರಗಳಿಗೆ ಕೊಟ್ಟಿಲ್ಲ. ಕೊಪ್ಪಳದಲ್ಲಿ ಸಿಂಧನೂರು ಕ್ಷೇತ್ರದ ಕಾಂಗ್ರೆಸ್ ಶಾಸಕರಾದ ವಿರೂಪಾಕ್ಷಪ್ಪ ಹಾಗೂ ಕಾಂಗ್ರೆಸ್ ಶಾಸಕರಾದ ಶ್ರೀ ಶ್ರೀರಂಗದೇವರಾಯಲುರವರ ಕ್ಷೇತ್ರವಾದ ಗಂಗಾವತಿ ಮತ್ತು ಗುಲ್ಬರ್ಗ ಜಿಲ್ಲೆಯ ಕಾಂಗ್ರೆಸ್ ಶಾಸಕರಾದ ಬಾಬುರಾವ್ ಚಿಂಚನ್‌ಸೂರ್ ಕ್ಷೇತ್ರವಾದ ಚಿತ್ತಾಪುರಗೆ ಮನೆಗಳನ್ನು ಕೊಟ್ಟಿಲ್ಲ. ಹಾಗೆಯೇ, ಕಮಲಪುರ, ಗುಲ್ಬರ್ಗ ಮತ್ತು ಯಾದಗೀರಗೆ ಕೊಟ್ಟಿಲ್ಲ. ಆದರೆ, ಯಾದಗೀರ್ ತಾಲ್ಲೂಕಿಗೆ ಎರಡನೇ ಲಿಸ್ಟ್‌ನಲ್ಲಿ 400 ಮನೆಗಳನ್ನು ಕೊಡಲಾಗಿದೆ. ಬೀದರ್ ಜಿಲ್ಲೆಯಲ್ಲಿ ಹುಲಸೂರ್, ಬಾಲ್ಕಿ ಮತ್ತು ಔರಾದ್ ಕ್ಷೇತ್ರಗಳಿಗೆ ಕೊಟ್ಟಿಲ್ಲ, ಕಾರವಾರಕ್ಕೂ ಕೊಟ್ಟಿಲ್ಲ. ಹೀಗೆ ಇದನ್ನು ಓದಿಕೊಂಡು ಹೋದರೆ ಉದ್ದವಾದ ಪಟ್ಟಿಯೇ ಆಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ವಿರೋಧಪಕ್ಷದ ನಾಯಕರು ಹೇಳತಕ್ಕಂಥ ಮಾತುಗಳನ್ನು ನಾವು ಒಪ್ಪಿಕೊಳ್ಳುತ್ತೇವೆ. ತಾವು ಈಗ ಹಂಚಿಕೆಯಾಗಿರುವುದನ್ನು ನೋಡಬೇಡಿ. ನಮ್ಮ ಸರ್ಕಾರ ಎಂದಿನಿಂದ ಜನತಾ ಮನೆಗಳನ್ನು ಕೊಡಲಾಗಿದೆಯೋ ಅದನ್ನು ಇಡೀ ರಾಜ್ಯದಲ್ಲಿ ಸರ್ವೆ ಮಾಡಿಸಿ ಯಾವ ಕ್ಷೇತ್ರಕ್ಕೆ ಅನ್ಯಾಯವಾಗಿದೆ ಎಂದು ಹೇಳಬೇಕು.

ಶ್ರೀ ವಿ. ಮುನಿಯಪ್ಪ :— ಈ ರೀತಿಯ ಅನ್ಯಾಯ ಯಾವತ್ತೂ ಆಗಿಲ್ಲ.

(ಗೊಂದಲ)

ಶ್ರೀ ಸಯ್ಯದ್ ಜುಲ್ಫೀಕರ್ ಹಷ್ಮಿ :— ಮಾನ್ಯ ಎಸ್.ಎಸ್. ಪಾಟೀಲ್‌ರವರ ಕ್ಷೇತ್ರಕ್ಕೆ ಎಷ್ಟು ಕೊಟ್ಟಿದ್ದಾರೆಂಬುದನ್ನು ಹೇಳಬೇಕು. ಇವರಿಗೆ ಕೊಟ್ಟಿರುವುದನ್ನು ಮುಚ್ಚಿಟ್ಟುಕೊಳ್ಳುತ್ತಿದ್ದಾರೆ.

(ಗೊಂದಲ)

ಶ್ರೀ ಅರಗಜ್ಞಾನೇಂದ್ರ :— ಮಾನ್ಯ ಎಸ್.ಎಸ್. ಪಾಟೀಲ್‌ರವರ ಕ್ಷೇತ್ರಕ್ಕೆ ಬಹಳ ಅನ್ಯಾಯವಾಗಿರಬೇಕು, ಆದ್ದರಿಂದ ಈ ರೀತಿ ಹೇಳುತ್ತಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ತಪ್ಪಾಗಿರುವುದು ಸರ್ಕಾರಕ್ಕೆ ಗೊತ್ತಾದ ಮೇಲೆ ಅದನ್ನು ತಿದ್ದಿಕೊಳ್ಳಬೇಕು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ :— ಅಸಮಾನತೆಯ ಹಂಚಿಕೆ ವ್ಯವಸ್ಥೆ ಆಗಿದೆ.

ಶ್ರೀ ಹೆಚ್.ಡಿ. ರೇವಣ್ಣ :— 19ನೇ ತಾರೀಖು ಇಷ್ಯೂ ಆಗಿರುವ ಸರ್ಕಾರಿ

ಆದೇಶದಲ್ಲಿ ತುಮಕೂರು ಜಿಲ್ಲೆಯಲ್ಲಿರುವ ಕಳ್ಳಂಬೆಳ್ಳ ಮತ್ತು ಕುಣಿಗಲ್ ಹಾಗೂ ಇನ್ನು 3 ಕ್ಷೇತ್ರಗಳಲ್ಲಿ 300 ಮನೆಗಳನ್ನು ಕೊಟ್ಟಿದ್ದಾರೆಂದು ಮಾನ್ಯ ವಿರೋಧಪಕ್ಷದ ನಾಯಕರು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಈಗ ಮತ್ತೆ 23ನೇ ತಾರೀಖು ಹೊರಡಿಸಿರುವ ಆರ್ಡರ್‌ನಲ್ಲಿ ಕಳ್ಳಂಬೆಳ್ಳಕ್ಕೆ 250 ಮನೆಗಳನ್ನು ಕೊಡಲಾಗಿದೆ ಹಾಗೆಯೇ ಕುಣಿಗಲ್, ಚಿಕ್ಕನಾಯಕನಹಳ್ಳಿ, ಬೆಳ್ಳಾವಿ ಕ್ಷೇತ್ರಗಳಿಗೂ ಕೊಟ್ಟಿದ್ದೇವೆ. ಮಾನ್ಯ ವಿರೋಧಪಕ್ಷದ ನಾಯಕರು ಹೇಳಿರುವ ವಿಧಾನಸಭಾ ಕ್ಷೇತ್ರಗಳು ಕಾಂಗ್ರೆಸಿಗೆ ಸೇರಿವೆ ಎಂದು ನಾವೇನೂ ತಾರತಮ್ಯ ಮಾಡಿಲ್ಲ. ಮೊದಲು 300 ಮನೆಗಳನ್ನು ಕೊಡಲಾಗಿದೆ, ಎರಡನೇ ಸಾರಿ 250 ಮನೆಗಳನ್ನು ಕೊಡುತ್ತೇವೆ. ಯಾವ ತಾಲ್ಲೂಕುಗಳಲ್ಲಿ ಕಡಿಮೆ ಇದೆ ಅಂಥ ಕಡೆ ಸರಿದೂಗಿಸಬೇಕೆಂದು ತಾವೇ ಹೇಳಿದ್ದೀರಿ. ಸಚಿವ ಸಂಪುಟ ಸಭೆ ಮುಂದೆ ಇಡಲು ಮಾನ್ಯ ಮುಖ್ಯಮಂತ್ರಿಗಳ ಅನುಮೋದನೆ ಪಡೆದುಕೊಂಡು ಮುಂದಿನ ಸಚಿವಸಂಪುಟ ಸಭೆ ಮುಂದೆ ಬರುತ್ತದೆ. 60 ವಿಧಾನಸಭಾ ಕ್ಷೇತ್ರ ಮತ್ತು 40 ತಾಲ್ಲೂಕುಗಳಲ್ಲಿ ಈ ರೀತಿಯ ಮನೆಗಳು ಕಡಿಮೆ ಇರುವುದರಿಂದ ಹೆಚ್ಚು ಕೊಡಬೇಕೆಂದು ಬೇಡಿಕೆ ಬಂದಿದೆ. ಆದ್ದರಿಂದ ಈ ಸಾರಿ 60 ವಿಧಾನಸಭಾ ಕ್ಷೇತ್ರಕ್ಕೆ ಮತ್ತು 40 ತಾಲ್ಲೂಕುಗಳಿಗೆ ಮನೆಗಳನ್ನು ಕೊಡುತ್ತೇವೆ. ಈ ವಿಷಯ ಪತ್ರಿಕೆಯಲ್ಲಿ ಬರುವುದಕ್ಕಿಂತ ಮುಂಚೆಯೇ ಇದನ್ನು ಮಾನ್ಯ ಮುಖ್ಯಮಂತ್ರಿಗಳ ಅನುಮೋದನೆಗೆ ಕಳುಹಿಸಿದ್ದೇನೆಂದು ಈ ಸಭೆಗೆ ತಿಳಿಸಿದ್ದೇನೆ.

ಶ್ರೀ ವಿ. ಮುನಿಯಪ್ಪ :— ಮೊದಲು ಕೊಟ್ಟಿರುವವರಿಗೆ ಈ ಸಾರಿ ಮತ್ತೆ ಕೊಡುತ್ತಿರೋ, ಹಾಗೆಯೇ, ಈಗ ಯಾರಿಗೆ ಕೊಡುತ್ತೀರೆಂಬುದನ್ನು ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ :— ಈಗ ಹಂಚಿಕೆ ಮಾಡಿರುವುದರಲ್ಲಿ ಈಕ್ವಲ್ ಆಗಿಲ್ಲ ಎನ್ನತಕ್ಕಂಥದ್ದು ತಮಗೆ ಮನವರಿಕೆಯಾಗಿದೆ. ಆದ್ದರಿಂದ ಈಗ ಜಸ್ಟೀಸ್ ಮಾಡಬೇಕಲ್ಲಾ?

ಅಧ್ಯಕ್ಷರು :— ಮಾನ್ಯ ಸಚಿವರು ಸ್ಪಷ್ಟವಾಗಿ ಹೇಳಲಿಲ್ಲ. ಆದರೆ, ತಮಗೆ ನನ್ನ ಸ್ವಂತ ಅನುಭವದಿಂದ ಹೇಳುತ್ತೇನೆ. ಏನೆಂದರೆ, ಕೋಲಾರ ಜಿಲ್ಲೆಯಲ್ಲಿ 12 ವಿಧಾನಸಭಾ ಕ್ಷೇತ್ರ ಮತ್ತು 11 ತಾಲ್ಲೂಕುಗಳನ್ನು ಸೇರಿ ಮೂರು ವರ್ಷಗಳ ಹಿಂದೆ ಮಂಜೂರು ಮಾಡಿರತಕ್ಕಂಥ ಮನೆಗಳಿಗೆ ಇವತ್ತಿನವರೆಗೂ ಕೂಡ ಪಾಯ ಹಾಕಿಲ್ಲ. ಮತ್ತು ಫಸ್ಟ್ ಬಿಲ್ಲನ್ನೂ ಸಹ ತೆಗೆದುಕೊಂಡಿಲ್ಲ. ಆದರೆ ನಮ್ಮಲ್ಲಿ ಪೂರ್ತಿ ಹಣವನ್ನು ಬಳಕೆ ಮಾಡಿಕೊಂಡಿದ್ದೇವೆ. ಆದ್ದರಿಂದ, ನಾನು ಮಾನ್ಯ ಸಚಿವರಿಗೆ ಒಂದು ಮನವಿಯನ್ನು ಕೊಟ್ಟೆ ಅದೇನೆಂದರೆ, ಯಾವ್ಯಾವ ತಾಲ್ಲೂಕುಗಳಲ್ಲಿ ಹಣ ಬಳಕ್ಕೆ ಆಗಿಲ್ಲವೋ ಅಂಥ ಹಣವನ್ನು ಡೈವರ್ಟ್ ಮಾಡಿದರೆ ನಾವು ಉಪಯೋಗ ಮಾಡಿಕೊಳ್ಳುತ್ತೇವೆ. ಮುಂದೆ ನಮಗೆ ಬರುವ ಹಣವನ್ನು ಅವರಿಗೆ ಕೊಡಿ ಎಂದು ಕೇಳಿದ್ದೆವು. ನಂತರ ಇವರು

ಬಂದು, ಎಲ್ಲಿ ಕಡೆ ಪರಿಶೀಲನೆ ಮಾಡಿ ಯಾವ್ಯಾವ ತಾಲ್ಲೂಕುಗಳಲ್ಲಿ ಯಾರ್‍ಯಾರು ಹಣವನ್ನು ಉಪಯೋಗ ಮಾಡಿಲ್ಲವೋ ಅದರ ಮಾಹಿತಿಯನ್ನು ಕೊಡಿ ಎಂದು

4 -10 ಪಿ.ಎಂ.

ಕೇಳಿದರು. ನಾವು ಇಲ್ಲಿ ಮಾತನಾಡತಕ್ಕಂಥದ್ದು ಬೇರೆ. ಇಲ್ಲಿ ಯಾರು ಸಿ.ಇ.ಓ ಮತ್ತು ಇ.ಓ.ಗಳು ಬರುವುದಕ್ಕಾಗುವುದಿಲ್ಲ. ಇದಕ್ಕೆ ವಿಚಾರಣಾಧಿಕಾರಿಗಳು ಏನೂ ಬೇಕಾಗಿಲ್ಲ. ನೀವೇ ಸಂಬಂಧಪಟ್ಟ ಸಿ.ಇ.ಓ ಅವರನ್ನು ಆಫೀಸಿಗೆ ಕರೆಯಿಸಿ ಕೂಡಿಸಿಕೊಂಡು ಎಷ್ಟು ಇವೆ ನೋಡಿ. ನಾನು ಸಮರ್ಥನೆ ಮಾಡುತ್ತಿಲ್ಲ. It is for him to defend himself and the Government. ತಮ್ಮ ವಾದವನ್ನು ತಾವು ಮುಂದುವರಿಸಬಹುದು. ನಾನು ಏನು ಹೇಳುತ್ತಿದ್ದೇನೆಂದರೆ, ಈ ಕಾರ್ಯಕ್ರಮದಲ್ಲಿ ರಾಜಕಾರಣ ಇರಬಾರದು, ಬದ್ಧತೆ ಇರಬೇಕು. ನೀವು ಈ ಸದನದ ಪರವಾನಿಗೆಯನ್ನು ಪಡೆದುಕೊಂಡು ನನ್ನ ಕ್ಷೇತ್ರಕ್ಕೆ ಬನ್ನಿ ಶೇಕಡಾ 60 ಭಾಗ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡಕ್ಕೆ ಮನೆಗಳನ್ನು ವಿತರಣೆ ಮಾಡಿದ್ದೇನೆ. ನಾನು ಊರಿಗೆ ಹೋದ ತಕ್ಷಣ ಆ ಜನರ ಪೈಕಿ ಮನೆ ಇಲ್ಲದೆ ಯಾರಾದರೂ ಉಳಿದಿದ್ದಾರೆಯೇ ಎಂದು ಕೇಳುತ್ತೇನೆ. ಇನ್ನು ಯಾರು ಉಳಿದಿದ್ದಾರೆ ಅವರಿಗೆ ಮೊದಲು ಕೊಡೋಣ. ನಂತರ ಉಳಿದವರಿಗೆ ಮಾಡೋಣ. ಇದನ್ನು ನಾವು ರಾಜಕಾರಣ ಮಾಡುವುದಕ್ಕೆ ಅಥವಾ ಭಕ್ಷೀಸ್ ಕೊಡುವುದಕ್ಕೆ ಎಂದು ಹೇಳಿ ಪೋಲೀಂಗ್ ಸ್ಟೇಷನ್ ಲಿಸ್ಟ್ ನೋಡಿಕೊಂಡು ಅಲ್ಲಿ 8 ಇಲ್ಲಿ 11 ಮನೆಗಳನ್ನು ಕೊಡೋಣ ಎಂದು ಹೇಳಿ, ಆ ಊರಿನಲ್ಲಿ ನಮಗೆ ಓಟು ಕೊಟ್ಟಿಲ್ಲ, ಈ ರೀತಿ ಮಾಡಿದರೆ ನಾವು ತೆಗೆದುಕೊಂಡು ಎಲ್ಲಿ ಹೋಗುವುದಿಲ್ಲ. ಸನ್ಮಾನ್ಯ ಖರ್ಗೆಯವರು ಹೇಳಿದಂತೆ ಈ ಕಾರ್ಯಕ್ರಮವನ್ನು ಶ್ರೀ ದೇವರಾಜ್ ಅರಸುರವರು ಹಾಗೂ ಮಾನ್ಯ ಬಂಗಾರಪ್ಪನವರು ಮೊದಲನೆ ಬಾರಿಗೆ ಜಾರಿಗೆ ತರುವಾಗ ಬದ್ಧತೆಯಿಂದ ತಂದರು. ಆ ಬದ್ಧತೆ ಎಲ್ಲೋ ಹೋಯಿತು. ಇದು ರಾಜಕಾರಣದ ಅಸ್ತ್ರವಾಗಿದೆ. ಸುಮ್ಮನೆ ಏಕೆ ಮಾತನಾಡುವುದು.

ಶ್ರೀಕಾಗೋಡು ತಿಮ್ಮಪ್ಪ :— ಅಧ್ಯಕ್ಷರೆ, ಯಾಕೆ ಕಡಿಮೆಯಾಗಿದೆ, ಅವರೇ ಸೇರಿಸಿಕೊಡುವ ಮಾತನ್ನು ಹೇಳುತ್ತಿದ್ದಾರೆ ತಾನೆ? ಅದಕ್ಕೆ ಒಂದು ನಿರ್ಧಾರವನ್ನು ತೆಗೆದುಕೊಳ್ಳಿ. ಒಬ್ಬರಿಗೆ ಸಾವಿರ ಮನೆಗಳನ್ನು ಹಂಚಿದ್ದಾರೆ, ಉಳಿದವರಿಗೆ ಕನಿಷ್ಟ 800 ಮನೆಗಳಾದರೂ ಬರಬೇಕು. 150-200 ಮನೆಗಳನ್ನು ಕೊಟ್ಟಿದ್ದಾರೆ. ವಿಶೇಷವಾದ ಸಂದರ್ಭದಲ್ಲಿ ಯಾರಿಗೆ ಕೊಟ್ಟಿದ್ದಾರೆ ಅದನ್ನು ತಿಳಿದುಕೊಳ್ಳಿ. ಕನಿಷ್ಟಪಕ್ಷ ಪ್ರತಿಯೊಬ್ಬ ಶಾಸಕನಿಗೂ 800 ಮನೆಗಳು ಬರಬೇಕಲ್ಲಾ.

ಅಧ್ಯಕ್ಷರು :— ಯುಟಿಲೈಸ್ ಆಗದೆ ಹೋದರೆ ಕೊಟ್ಟು ಏನು ಮಾಡುತ್ತೀರಿ ಅಂತ.

ಶ್ರೀ ಕಾಗೋಡು ತಿಮ್ಮಪ್ಪ :— ಅಧ್ಯಕ್ಷರೆ, ಒಬ್ಬರಿಗೆ ಸಾವಿರ ಮನೆಗಳನ್ನು ಕೊಡುವುದು, ಇನ್ನೊಬ್ಬರಿಗೆ 200-300 ಮನೆಗಳನ್ನು ಕೊಟ್ಟರೆ ಇದು ಯಾವ ನ್ಯಾಯವಾಗುತ್ತದೆ? ಒಬ್ಬರಿಗೆ 800 ಮನೆಗಳನ್ನಾದರೂ ಕೊಡಬೇಕಲ್ಲಾ. ನಾನು ಬಂದು ಕೇಳಿದರೆ ನನಗೆ ಕೊಡುವುದು, ನೀವು ಬಂದು ಕೇಳಿದರೆ ನಿಮಗೆ ಕೊಡುವುದು ಅಲ್ಲ.

+ ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, ಮಾನ್ಯ ವಸತಿ ಸಚಿವರು ಒಂದು ಲಕ್ಷ ಮನೆಗಳನ್ನು ಯಾವ ಮಾನದಂಡ ಇಟ್ಟುಕೊಂಡು ಕೊಟ್ಟಿದ್ದಾರೆಂದು ಅವರು ಹೇಳಿದ್ದಾರೆ. ಪ್ರತಿ ವರ್ಷ ಆಶ್ರಯ, ಅಂಬೇಡ್ಕರ್ ಮತ್ತು ಇಂದಿರಾ ಅವಾಸ್ ಮನೆಗಳನ್ನು ವಿತರಣೆ ಮಾಡುತ್ತಾರೆ. ಈ ಸಾರಿ ವಿಶೇಷವಾದಂಥ ಒಂದು ಪರಿಸ್ಥಿತಿ ಏಕೆ ನಿರ್ಮಾಣವಾಯಿತು ಅಂದರೆ, 1998-99ಕ್ಕೆ ಇದ್ದಂಥ ಮನೆಗಳನ್ನು ಎಲ್ಲಾ ಕ್ಷೇತ್ರಗಳಿಗೂ ಕೂಡ ಒಂದು ಮಾನದಂಡವನ್ನು ಇಟ್ಟುಕೊಂಡು ಹಂಚಿದ್ದಾರೆ. ಹಿಂದಿನ ವರ್ಷ 1997-98 ರಲ್ಲಿ ಕೂಡ ಮನೆಗಳನ್ನು ಹಂಚಿದ್ದಾರೆ, ಹಾಗೂ 1996-97ಕ್ಕೂ ಕೂಡ ಮನೆಗಳನ್ನು ಹಂಚಿದ್ದಾರೆ. ಈ ವರ್ಷ ಹೆಚ್ಚು ಮಳೆಯಾಗಿರುವುದರಿಂದ ಅನೇಕ ಕಡೆ ಹೆಚ್ಚು ಮನೆಗಳು ಬಿದ್ದು ಹೋಗಿದ್ದು ಸರ್ಕಾರದ ಗಮನಕ್ಕೆ ಬಂದಿರುವುದರಿಂದ ಮಾನ್ಯ ವಸತಿ ಸಚಿವರು ಒಂದು ಲಕ್ಷ ಮನೆಗಳನ್ನು ಆಶ್ರಯ ಯೋಜನೆಯಲ್ಲಿ ಹೆಚ್ಚಿಗೆ ಕೊಡಬೇಕೆಂದು ವಿಶೇಷವಾದ ಒಂದು ಯೋಜನೆಯನ್ನು ತೆಗೆದುಕೊಂಡು ಬಂದರು. ಅದನ್ನು ತೆಗೆದುಕೊಂಡು ಬಂದ ನಂತರ ಹುಡ್ಕೋದವರು ಲೋನ್ ಕೊಡುವುದಕ್ಕೆ ಹೆಚ್ಚುವರಿಯಾಗಿ ಒಪ್ಪಿಕೊಂಡಿದ್ದಾರೆ. ಸರ್ಕಾರ ಕೊಡಬೇಕಾದ ಸಬ್ಸಿಡಿಯನ್ನು ಕೊಟ್ಟರೆ ಈ ಒಂದು ಲಕ್ಷ ಮನೆಗಳನ್ನು ಕೊಡೋಣವೆಂದು ಹೇಳಿ ಅವರು ಸಚಿವ ಸಂಪುಟದ ಮುಂದೆ ತಂದರು, ಅದಕ್ಕೆ ಸಚಿವ ಸಂಪುಟ ಕೂಡ ಒಪ್ಪಿಗೆ ಕೊಟ್ಟು ಆಯಿತು. ಸಚಿವ ಸಂಪುಟ ಒಪ್ಪಿಗೆ ಕೊಟ್ಟ ಮೇಲೆ ಇವರು ಎಲ್ಲರಿಗೂ ಸಮಾನವಾಗಿ 200-300 ಮನೆಗಳನ್ನು ಎಲ್ಲಾ ಕ್ಷೇತ್ರಗಳಿಗೆ ಕೊಟ್ಟಿದ್ದಾರೆ. ಉಳಿದಂತೆ ಎಲ್ಲೆಲ್ಲಿ ಮನೆಗಳು ಬಿದ್ದು ಹೋಗಿವೆ ಎಂದು ಶಾಸಕರು ಮನವಿಗಳನ್ನು ಕೊಟ್ಟಿದ್ದಾರೆ ಅಂತಹ ಕಡೆ ಹೆಚ್ಚಿಗೆ ಮನೆಗಳನ್ನು ಕೊಟ್ಟಿದ್ದೇವೆ ಎನ್ನತಕ್ಕಂಥ ಮಾತನ್ನು ಮಾನ್ಯ ವಸತಿ ಸಚಿವರು ಹೇಳಿದ್ದಾರೆ.

(ಗೊಂದಲ)

ಈ ತರಹ ಗಲಾಟೆ ಮಾಡಿದರೆ ನಾವು ಹೇಳುವುದು ಹೇಗೆ? ನೀವು ಹೇಳಿದಂತೆ ಕೇಳುವುದಕ್ಕೆ ನಾವು ಇಲ್ಲಿ ಬಂದು ಕುಳಿತುಕೊಂಡಿದ್ದೇವಾ? ಅಧ್ಯಕ್ಷರೆ, ಇಷ್ಟೆಲ್ಲಾ ಹೇಳಿ 7-8 ಕಡೆ 800 ಹಾಗೂ ಒಂದು ಸಾವಿರ ಮನೆಗಳನ್ನು ಕೊಟ್ಟಿದ್ದೇವೆಂದು ಅವರು ಹೇಳಿದ್ದಾರೆ. ಇದರಲ್ಲಿ ಯಾವುದೇ ರೀತಿಯ ರಾಜಕೀಯ ಮಾಡಬೇಕೆನ್ನುವ

ಉದ್ದೇಶ ಇಲ್ಲ. ಕಾಂಗ್ರೆಸ್‌ನವರಿಗೂ ಕೂಡ ಕೆಲವೊಂದು ಕಡೆ ಕೊಟ್ಟಿದ್ದಾರೆ. ಭಾರತೀಯ ಜನತಾ ಪಾರ್ಟಿಯವರಿಗೂ ಕೂಡ ಕೊಟ್ಟಿದ್ದಾರೆ. ಪಕ್ಷೇತರರದವರಿಗೂ ಕೂಡ ಕೊಟ್ಟಿದ್ದಾರೆ. ನಮ್ಮೆಲ್ಲರಿಗೂ ಕೊಟ್ಟಿದ್ದಾರೆ. ಇದರಲ್ಲಿ ರಾಜಕೀಯ ಮಾಡಬೇಕೆನ್ನುವ ಉದ್ದೇಶದಿಂದ ಮಾಡಿರತಕ್ಕಂಥದ್ದು ಅಲ್ಲ. ಎಲ್ಲಿ ಅಗತ್ಯ ಇದೆ ಎಂದು ಅವರಿಗೆ ಮನವರಿಕೆಯಾಗಿದೆ, ಅಲ್ಲಿ ಕೊಟ್ಟಿದ್ದಾರೆ. ಈಗ ಅದರಲ್ಲಿ ಕಡಿಮೆಯಾಗಿದೆ ಎನ್ನತಕ್ಕಂಥ ಮಾತನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದು, ಹಾಗೂ ಕೆಲವು ಕಡೆ ಉದ್ದೇಶಪೂರ್ವಕವಾಗಿ ಕಡಿಮೆ ಮಾಡಿದ್ದಾರೆ ಎನ್ನುವ ಮಾತನ್ನೂ ಕೂಡ ಹೇಳಿದ್ದಾರೆ. ಅದು ಮೇಲ್ನೋಟಕ್ಕೆ ಹಾಗೆ ಕಾಣಿಸುತ್ತದೆ. ಮೇಲ್ನೋಟಕ್ಕೆ ಕೆಲವು ಕಡೆ ಹೆಚ್ಚು ಕಡಿಮೆ ಕಾಣಿಸುತ್ತದೆ. ಅದರಲ್ಲಿ ಎಲ್ಲೆಲ್ಲಿ ಕಡಿಮೆಯಾಗಿದೆ, ಈ ವರ್ಷ ಮನೆಗಳನ್ನು ಕೊಡುವಾಗ ಆಶ್ರಯ ಮನೆಗಳು ಹಾಗೂ ಅಂಬೇಡ್ಕರ್ ಯೋಜನೆ ಮನೆಗಳು ಹಾಗೂ ಇಂದಿರಾ ಅವಾಸ್ ಯೋಜನೆಯ ಮನೆಗಳನ್ನು ಕೊಡುವಾಗ ಎಲ್ಲಿ ಕಡಿಮೆಯಾಗಿದೆ ಅಲ್ಲಿ ಸರಿಪಡಿಸುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಮತ್ತೆ ಮತ್ತೆ ಇದನ್ನು ನೀವು ಉದ್ದೇಶಪೂರ್ವಕವಾಗಿ ಕೊಟ್ಟಿದ್ದೀರಿ, ಇದರಲ್ಲಿ ರಾಜಕೀಯ ಮಾಡಿದ್ದೀರಿ ಎನ್ನತಕ್ಕಂಥದ್ದು ಅದು ಸರಿಯಲ್ಲ. ಇದರಲ್ಲಿ ರಾಜಕೀಯ ಮಾಡಿಲ್ಲ, ಇದರಲ್ಲಿ ಯಾವ ಉದ್ದೇಶ ಕೂಡ ಇಲ್ಲ. ಈ ವರ್ಷ ವಿಶೇಷವಾಗಿ ಮಳೆ ಬಂದು ಅತಿವೃಷ್ಟಿಯಿಂದ ಅನೇಕ ಕಡೆ ಮನೆಗಳು ಬಿದ್ದು ಹೋಗಿರುವುದರಿಂದ ತಹಶೀಲ್ದಾರವರ ವರದಿ ಮತ್ತು ಜಿಲ್ಲಾಧಿಕಾರಿಗಳವರಿಂದ ವರದಿಯನ್ನು ತರಿಸಿಕೊಂಡು ಹಾಗೂ ಶಾಸಕರು ಕೊಟ್ಟ ಮನವಿಗಳನ್ನು ಪರಿಶೀಲಿಸಿ ಅದರ ಮೇಲೆ ಮನೆಗಳನ್ನು ಹಂಚಿದ್ದಾರೆ. ಅದರಲ್ಲಿ ಕೆಲವು ಲೋಪದೋಷಗಳು ಆಗಿವೆ. ಆ ಲೋಪದೋಷಗಳನ್ನು ನಾವು ಸರಿಪಡಿಸುತ್ತೇವೆ. ದಯಮಾಡಿ ಮಾನ್ಯ ವಿರೋಧ ಪಕ್ಷದ ನಾಯಕರು ಇಷ್ಟಕ್ಕೇ ಬಿಡಬೇಕೆಂದು ನಾನು ಅವರಲ್ಲಿ ಮನವಿ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :— ಅಧ್ಯಕ್ಷರೆ, ಅವರು ಇಷ್ಟು ಮಾಡಿರುವ ಜಿ.ಓ. ಅವರೆ ಓದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. 7-4-1998ಕ್ಕೆ ಒಂದು ಹಾಗೂ ಇನ್ನೊಂದು 16-11-1998ಕ್ಕೆ ಜಿ.ಓ. ಹೊರಡಿಸಿದ್ದಾರೆ. ಅದರಲ್ಲಿ ಏನು ಹೇಳಿದೆ ಎಂದರೆ, 1998-99ನೇ ಸಾಲಿನಲ್ಲಿ ರಾಜ್ಯದಲ್ಲಿ ಬಿದ್ದ ಭಾರಿ ಮಳೆಯಿಂದಾಗಿ ಯಾರ ಯಾರ ಮನೆಗಳು ಕುಸಿದು ಬಿದ್ದಿವೆ ಅಂತಹವರಿಗೆ ಹಂಚುವ ಸಲುವಾಗಿ ಅಂದರೆ, ಬಿಜಾಪುರ, ರಾಯಚೂರು, ಗುಲ್ಬರ್ಗಾ, ಬೀದರ ಹಾಗೂ ಬಳ್ಳಾರಿ ಜಿಲ್ಲೆಗಳಿಗೆ ತಾಲ್ಲೂಕುವಾರು ಗುರಿ ನೀಡಿ ಈ ಮನೆಗಳ ಹಂಚಿಕೆ ಆಶ್ರಯ ವಸತಿ ಸಮಿತಿಯವತಿಯಿಂದ ಹೊರತುಪಡಿಸಿ ಜಿಲ್ಲಾಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಫಲಾನುಭವಿಗಳಿಗೆ ಹಂಚಿಕೆ ಮಾಡಿದ್ದು. ಹಾಗೂ ಈ ಮನೆಗಳನ್ನು ಭೂಸೇನಾ ನಿಗಮವು ಕಟ್ಟಿಸುವುದೆಂದು ಜಿ.ಓ.ಇಷ್ಯು ಮಾಡಿದ್ದೀರಿ. 10 ಸಾವಿರ ಮನೆಗಳು. ಈಗ ಎರಡನೆಯದು ಮಳೆಯಿಂದ ಎಂದು ಇಲ್ಲ. 19-11-1998ಕ್ಕೆ

ತಾವು ಹೊರಡಿಸಿದ ಜಿ.ಓ. ಅಂದರೆ, ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ 1998-99ನೇ ಸಾಲಿಗೆ ಆಶ್ರಯ ಯೋಜನೆ ಅಡಿ ಹೆಚ್ಚುವರಿಯಾಗಿ 90 ಸಾವಿರಮನೆಗಳ ಭೌತಿಕ ಗುರು ನಿಗಧಿಪಡಿಸಿ ಇದರಲ್ಲಿ 34,200 ಮನೆಗಳನ್ನು ಈಗಾಗಲೇ ನೀಡಲಾಗಿದೆ. ಇದರಲ್ಲಿ 24 ವಿಧಾನಸಭಾ ಕ್ಷೇತ್ರಗಳು. ಅಂದರೆ, ಇದರಲ್ಲಿ ಯಾವ ಮಳೆ ಇಲ್ಲ, ಚಳಿ ಇಲ್ಲ, ಹಾಗೂ ಯಾವ ಕಾರಣಕ್ಕೂ ಇಲ್ಲ. ಇವರು 90 ಸಾವಿರ ಮನೆಗಳನ್ನು ಇವರು ಡಿಸ್ಕ್ರಷನ್‌ನ್ನು ಉಪಯೋಗ ಮಾಡಿ ಇನ್‌ಡಿಸ್ಕ್ರಿಮಿನೇಟ್‌ಆಗಿ ಅಲಾಟ್ ಮಾಡಿರುತ್ತಾರೆ. 10 ಸಾವಿರ ಮನೆಗಳು ಮಾತ್ರ ಮಳೆಯ ಹೆಸರಿನಲ್ಲಿ, 500 ಮನೆಗಳು ಬಳ್ಳಾರಿ, ಬಿಜಾಪುರ ಈ ಕ್ಷೇತ್ರಗಳಿಗೆ ಹೋಗಿದೆ. ಆದರೆ ಈ ಜಿ.ಓ. ಪ್ರಕಾರ ಅವರು ಏನು ಇಷ್ಟು ಮಾಡಿದ್ದಾರೆ ತಾವು ಯಾವ ಯಾವ ಕ್ಷೇತ್ರಗಳಲ್ಲಿ ಕೊಡಬೇಕಾಗಿತ್ತು ಅಂತಹ ಕ್ಷೇತ್ರಗಳಿಗೆ ಮಾತ್ರ ಕೊಟ್ಟಿದ್ದಾರೆ ಎನ್ನುವುದನ್ನು ಈ ಜಿ.ಓ.ದಿಂದ ಸ್ಪಷ್ಟವಾಗುತ್ತದೆ. ಅದಕ್ಕೆ ದಯಮಾಡಿ ಅಧ್ಯಕ್ಷರೆ, ಈ ರೀತಿಯಾದ ಡಿಸ್ಕ್ರಿಮಿನೇಟ್ ಆರ್ಡರ್ ಆಗಿದೆ, ಎಲ್ಲಿ ಮಳೆ ಬಿದ್ದಿದೆ, ಎಲ್ಲಿ ಹಾನಿಯಾಗಿದೆ ಅಂತಹದ್ದರಲ್ಲಿ ಆ ಜಿ.ಓ. ಪ್ರಕಾರ 10 ಸಾವಿರ ಮನೆಗಳನ್ನು ಬೇಕಾದರೆ ಕೊಡಲಿ. ನಮ್ಮ ಅಭ್ಯಂತರ ಇಲ್ಲ. ಆದರೆ ಎಲ್ಲಿ ತಾವು ವೈಯಕ್ತಿಕವಾಗಿ 700-800, 500 ಒಬ್ಬರಿಗೆ 200 ಮನೆಗಳನ್ನು ವಿತರಣೆ ಮಾಡಿದ್ದೀರಿ ಈ ತಾರತಮ್ಯವನ್ನು ತೆಗೆದು ಹಾಕಬೇಕು. ತಕ್ಷಣ ಇದನ್ನು ವಾಪಸ್ಸು ಪಡೆದುಕೊಳ್ಳಬೇಕು, ಮತ್ತು ಎಲ್ಲರಿಗೂ ಈಕ್ವಲ್‌ಆಗಿ ಹಂಚಬೇಕು. ಮಳೆಯಲ್ಲಿ ಮನೆಗಳನ್ನು ಕಳೆದುಕೊಂಡವರಿಗೆ ಬಿಟ್ಟು ಮುಂದೆ ಹೆಚ್ಚಿಗೆ ಕೊಡುವುದಾದರೆ 100 ಮನೆಗಳನ್ನು ಕೊಡಿ, ಆದರೆ ಇದರಲ್ಲಿ ಸರಿಸಮನಾಗಿ ಹಂಚಬೇಕು.

+ ಶ್ರೀ ಜಿ.ಎಸ್. ಯಡಿಯೂರಪ್ಪ (ಶಿಕಾರಿಪುರ) :— ಮಾನ್ಯ ಅಧ್ಯಕ್ಷರೆ, ನಿಮ್ಮ ಲೆಕ್ಕದ ಪ್ರಕಾರವೇ ಒಂದು ಲಕ್ಷಕ್ಕೂ ಹೆಚ್ಚು ಮನೆಗಳು ಅತಿವೃಷ್ಟಿಯಿಂದ ನೆಲಸಮವಾಗಿದೆ ಎಂದು ವರದಿಯನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದೀರಿ. ಇದು ತಮಗೂ ಗೊತ್ತಿರುವ ಸಂಗತಿಯಾಗಿದೆ. ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ್ದೇನೆ. ಮಾನ್ಯ ಹಣಕಾಸಿನ ಸಚಿವರು ಹಾಗೂ ಸಂಬಂಧಪಟ್ಟ ಸಚಿವರೂ ಕೂಡ ಇದ್ದಾರೆ. ನನಗೆ ಏನು ಮಾಹಿತಿ ಬೇಕಾಗಿದೆ ಎಂದರೆ ಮಳೆಯು ಜಾಸ್ತಿಯಾಗಿ ಮನೆಗಳು ಬಿದ್ದಿದೆ ಎಂಬ ಅಂದಾಜಿನ ಮೇಲೆ ಹೆಚ್ಚುವರಿ ಮನೆಗಳನ್ನು ತಾವು ಕೊಟ್ಟಿದ್ದರೂ ಸಹ ನಿಮ್ಮ ರೆವಿನ್ಯೂ ರೆಕಾರ್ಡ್ಸ್‌ನ ಪ್ರಕಾರ ಅತಿವೃಷ್ಟಿಯಿಂದ ಮನೆಗಳನ್ನು ಕಳೆದುಕೊಂಡಂತಹ ಫಲಾನುಭವಿಗಳಿಗೆ 10 ಸಾವಿರ ಮನೆಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ಅಲ್ಲಿ 5 ಸಾವಿರ ಮನೆಗಳನ್ನು ಕಟ್ಟುವಂತಹ ಕೆಲಸ ಇನ್ನೂ ಪ್ರಾರಂಭವಾಗಿಲ್ಲ. ನಾನು ಆ ಸ್ಥಳಗಳಿಗೆ ಪ್ರವಾಸ ಮಾಡಿ ಬಂದಿದ್ದೇನೆ. ಆದಕ್ಕಾಗಿ ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ, ತಾವು ಯಾರಿಗೆ ಮನೆಗಳನ್ನು ಕೊಡಬೇಕೆಂದಿದ್ದೀರಿ ಅವರಿಗೆ ಕೊಡಿ. ನಿಮ್ಮ ಫಲಾನುಭವಿಗಳ ಪಟ್ಟಿಯ

ಪ್ರಕಾರ ಜಿಲ್ಲಾಧಿಕಾರಿಯವರು ಸರ್ವೆ ಮಾಡಿ, ಸ್ಥಳ ತನಿಖೆಯನ್ನು ಮಾಡಿ ಮನೆಗಳು ಸಂಪೂರ್ಣವಾಗಿ ನೆಲಸಮವಾಗಿದೆ ಎಂದು ಹೇಳುತ್ತಾರೆ. ಅವರಿಗೆ ಬೇರೆ ಯಾವುದಾದರೂ ಬಾಬಿನಲ್ಲಿ ಇರುವಂತಹ ಹಣವನ್ನು ಕಡಿಮೆ ಮಾಡಿದರೂ, ಬಡವರಿಗೆ 50 ಸಾವಿರ ಮನೆಗಳನ್ನು ಕಟ್ಟಿಸಿಕೊಡದಿದ್ದರೆ ಅವರು ಮಳೆಗಾಲದಲ್ಲಿ ಬೀದಿ ಪಾಲಾಗುತ್ತಾರೆ. ಈಗಾಗಲೇ ಅವರು ರಸ್ತೆಯಲ್ಲಿ ಇದ್ದಾರೆ. ಅದಕ್ಕೆ ಏನಾದರೂ ದಯಮಾಡಿ ಆದ್ಯತೆಯನ್ನು ಕೊಟ್ಟು ಪಟ್ಟಿ ಮಾಡಿ ಕೊಡುತ್ತೀರಾ? ಎರಡನೆಯದಾಗಿ, ಎಲ್ಲಿ ಕಡಿಮೆ ಮನೆಗಳು ಆಗಿವೆ ಎಂಬುದರ ಬಗ್ಗೆ ನಾವು ಚರ್ಚೆಯನ್ನು ಮಾಡಿದೆವು. ನಾವು ಯಾರೂ ಅದರ ಬಗ್ಗೆ ವಿವರವನ್ನು ಕೇಳುವುದಕ್ಕೆ ಹೋಗುವುದಿಲ್ಲ. ಅದು ನಿಮಗೆ ಗೊತ್ತಿದೆ. ಆ ಪಟ್ಟಿಯನ್ನು ಈ ವರ್ಷದಲ್ಲೇ ಕೊಡಬೇಕು. ಮುಂದಿನ ವರ್ಷ ಅದನ್ನು ಅಡ್ಜಸ್ಟ್ ಮಾಡುತ್ತೇವೆಂದು ಮಾನ್ಯ ಹಣಕಾಸಿನ ಸಚಿವರು ಹೇಳಿದರು. ಇದು ತಮಗೆ ಗೊತ್ತಿದೆ. ಒಂದು ಕಡೆ ಬಡವರಿಗೆ ಮನೆ ಸಿಕ್ಕಿದೆ, ಮತ್ತೊಂದು ಕಡೆ ಸಿಕ್ಕಿಲ್ಲ. ಈ ಶಾಸಕ ಪ್ರಭಾವ ಬೀರಿ ಮನೆಯನ್ನು ತರಲಿಲ್ಲ ಎಂಬ ಆರೋಪಕ್ಕೆ ನಾವು ಗುರಿಯಾಗಬೇಕಾಗುತ್ತದೆ. ನಾವು ಕ್ಷೇತ್ರದಲ್ಲಿ ಕೆಲಸ ಮಾಡುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಕಡಿಮೆ ಮನೆಗಳನ್ನು ಕೊಟ್ಟಿರುವ ಕಡೆ ಅದನ್ನು ಸರಿಮಾಡುವುದಕ್ಕೆ ನಿಮ್ಮಿಂದ ಸಾಧ್ಯವಾಗುತ್ತದೆಯೇ? ಇನ್ನು ಮೂರನೆಯದಾಗಿ ಈಗಾಗಲೇ ಫಲಾನುಭವಿಗಳ ಬಗ್ಗೆ ಪಟ್ಟಿ ಮಾಡುತ್ತಿದ್ದಾರೆ. ಗ್ರಾಮಪಂಚಾಯಿತಿ ಚುನಾವಣೆಗಳು ಮುಂದೆ ಹೋಯಿತು. ಈಗ ಅಲ್ಲಿ ಫಲಾನುಭವಿಗಳ ಪಟ್ಟಿಯನ್ನು ಮಾಡುವುದಕ್ಕೆ ಗೊಂದಲವಾಯಿತು. ಅದಕ್ಕೆ ಮನೆ ಕಟ್ಟಿಸಿಲ್ಲ, ಫಲಾನುಭವಿಗಳ ಪಟ್ಟಿ ಬರುವುದಕ್ಕೆ ತಡವಾಗಿದೆ ಎಂದು ಅದನ್ನು ರದ್ದು ಮಾಡುವಂತಹ ಕೆಲಸವನ್ನು ದಯಮಾಡಿ ಮಾಡಬೇಡಿ. ಫಲಾನುಭವಿಗಳನ್ನು ಆಯ್ಕೆ ಮಾಡಿ ಪಟ್ಟಿಯನ್ನು ಕಳುಹಿಸುತ್ತಾ ಇದ್ದೇವೆ. ಅಂಥಹ ಕಡೆ ಪಂಚಾಯಿತಿ ವ್ಯವಸ್ಥೆ ಅದಲುಬದಲು ಆಗಿರುವುದರಿಂದ ಕೆಲವು ಕಡೆ ನಿಧಾನವಾಗಿದೆ. ಮನೆಗಳನ್ನು ಕಳೆದುಕೊಂಡವರಿಗೆ ಕನಿಷ್ಟ 50 ಸಾವಿರ ಮನೆಗಳನ್ನು ಕೊಡಬೇಕು. ಎರಡನೆಯದು, ಮನೆಗಳ ಹಂಚಿಕೆಯಲ್ಲಿ ಆಗಿರುವ ವ್ಯತ್ಯಾಸವನ್ನು ಸರಿಪಡಿಸಬೇಕು. ಮೂರನೆಯದು ಫಲಾನುಭವಿಗಳ ಪಟ್ಟಿಯನ್ನು ಮಾಡಿ ಕಳುಹಿಸಬೇಕು.

(ಈ ಹಂತದಲ್ಲಿ ಶ್ರೀ ಕಾಗೋಡು ತಿಮ್ಮಪ್ಪನವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಬಿ.ಆರ್. ಯಾವಗಲ್ (ನರಗುಂದ) :— ಮಾನ್ಯ ಛೇರ್ಮನ್‌ರವರೆ, ಈ ಮನೆಯ ಹಂಚಿಕೆ ಯಾವ ಆಧಾರ ಮತ್ತು ಸೂತ್ರದ ಮೇಲೆ ಆಗಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಒಂದು ಸುತ್ತಿನಲ್ಲಿ 200 ಮನೆಗಳನ್ನು ಕೊಟ್ಟನಂತರ ಎರಡನೇ ಮತ್ತು ಮೂರನೇ ಸುತ್ತಿನಲ್ಲಿ ಆಯಾ ಕ್ಷೇತ್ರಗಳಿಗೆ ಸೀಮಿತವಾಗಿ ಕೊಟ್ಟರು. ದುರ್ದೈವವಶಾತ್ ಸುತ್ತಮುತ್ತಲಿನ ಎಲ್ಲಾ ಕ್ಷೇತ್ರಗಳಲ್ಲಿ ಮನೆಗಳ ಹಂಚಿಕೆಯಾಗುವಂತಹ ಸನ್ನಿವೇಶ ಬಂದಿದೆ. ಅದ್ಯಾವ ಸಿಟ್ಟು ಏನೋ ನಮಗೆ 200 ಮನೆಗಳನ್ನು ಬಿಟ್ಟು ಜಾಸ್ತಿ ಕೊಡಲೇ ಇಲ್ಲ.

ದಯವಿಟ್ಟು ಈ ನ್ಯೂನ್ಯತೆಯನ್ನು ಸರಿಪಡಿಸಬೇಕು. ರಾಜಕೀಯ ಭಿನ್ನಾಭಿಪ್ರಾಯಕ್ಕೋಸ್ಕರ ಆಯಾಯ ಕ್ಷೇತ್ರದ ಜನರಿಗೆ ತೊಂದರೆಯಾದ ರೀತಿ ಮನೆಗಳ ಮರುಹಂಚಿಕೆಯಾಗಬೇಕು. ಮುಂದೆ ಕೊಡುತ್ತೇನೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ.

ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ) :— ಮಾನ್ಯ ಮಂತ್ರಿಗಳು ಮಾತನಾಡುವಂತಹ ಸಂದರ್ಭದಲ್ಲಿ ಯಾರ್ಯಾರು ಜಿಲ್ಲಾಧ್ಯಕ್ಷರುಗಳು ಮನವಿಯನ್ನು ಕೊಟ್ಟಿದ್ದರೋ ಅವರ ಮನವಿಯನ್ನೂ ಕೂಡ ಪರಿಗಣಿಸಿ ಅವರಿಗೂ ನಾವು ಮನೆ ಹಂಚಿಕೆಯನ್ನು ಮಾಡಿದ್ದೇವೆಂದು ಹೇಳಿದರು. ಈ ಸದನದಲ್ಲಿ ನಮಗೆ ಸ್ಪಷ್ಟವಾಗಬೇಕಾದ ವಿಚಾರವೇನೆಂದರೆ ನೀವೇನು ಮನೆಗಳ ಹಂಚಿಕೆ ಸಮಿತಿಯಲ್ಲಿ ಶಾಸಕರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದೀರಿ, ಅವರಿಗೆ ಒಬ್ಬ ಜಿಲ್ಲಾಧ್ಯಕ್ಷರು ಮನೆಗಳ ಹಂಚಿಕೆಗಾಗಿ ಮನವಿಯನ್ನು ಕೊಟ್ಟಾಗ ಹಂಚಿಕೆ ಮಂಜೂರಾತಿಯ ವಿಷಯದಲ್ಲಿ ಅಧ್ಯಕ್ಷರಾಗಿರುವ ಶಾಸಕರ ಕರ್ತವ್ಯವೇನು? ಇದನ್ನು ನೀವು ಸದನದಲ್ಲಿ ಸ್ಪಷ್ಟಪಡಿಸಿ. ಕೇವಲ ಜಿಲ್ಲಾಧ್ಯಕ್ಷರ ಮನವಿಯನ್ನು ಪರಿಗಣಿಸಿ ಆಶ್ರಯ ಮನೆಗಳನ್ನು ಹಂಚಿಕೆ ಮಾಡುವುದಾದರೆ ಶಾಸಕರಾಗಿ ನಾವು ಏಕೆ ಇರಬೇಕು? ಈ ಬಗ್ಗೆ ಸ್ಪಷ್ಟಪಡಿಸಬೇಕೆಂದು ನಾನು ತಮ್ಮ ಮುಖಾಂತರ ಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀ ಬಿ. ಶಿವರಾಮ್ (ಗಂಡಸಿ) :— ಮಾನ್ಯ ಛೇರ್ಮನ್‌ರವರೆ, ಆಶ್ರಯ ಸಮಿತಿಗೆ ಶಾಸಕರು ಅಧ್ಯಕ್ಷರಾಗುವುದಕ್ಕೆ ಮುಂಚೆ, 1998-99ನೇ ಸಾಲಿಗೆ ಹೆಚ್ಚುವರಿ ಮನೆಗಳಿಗೆ ಒಂದು ಲಕ್ಷ ಏನು ನಿಗಧಿಮಾಡಲಾಗಿತ್ತು ಅದರಲ್ಲಿ ಮನೆಗಳ ಹಂಚಿಕೆಯ ಗುರಿ 40 ಸಾವಿರ ಇತ್ತು. ಆಗ ಮಳೆ ಬಂದು ಮಳೆಗಳೇನೂ ಕುಸಿದಿರಲಿಲ್ಲ. ಈ ಮನೆಗಳು ಮೊದಲೇ ಹಂಚಿಕೆಯಾಗಿತ್ತು. ದಿ : 28-5-98ಕ್ಕೆ ಒಂದು ಸರ್ಕಾರದವರು ಒಂದು ಆದೇಶವನ್ನು ಹೊರಡಿಸಿ 1998-99ನೇ ಸಾಲಿಗೆ ಆಶ್ರಯ ಯೋಜನೆಯ ಅಡಿಯಲ್ಲಿ 40 ಸಾವಿರ ಮನೆಗಳ ಗುರಿಯನ್ನು ನೀಡಿದ್ದು, ಮೇಲೆ ಓದಲಾದ ಸರ್ಕಾರಿ ಆದೇಶದಲ್ಲಿ 33,300 ಮನೆಗಳನ್ನು ತಾಲ್ಲೂಕುವಾರು ಗುರಿಯನ್ನು ನೀಡಲಾಗಿದೆ. ಇದಾದ ನಂತರ ಉಳಿದಂತಹ ಮನೆಗಳು ಏನಿದ್ದವು ಅವುಗಳನ್ನು ಆಶ್ರಯ ಗ್ರಾಮೀಣ ಮನೆಗಳ ಹೆಚ್ಚುವರಿ ಹಂಚಿಕೆ ಮಾಡಲು ತೀರ್ಮಾನಿಸಿ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ. 40 ಸಾವಿರದಲ್ಲೂ ಉಳಿದಿದ್ದನ್ನು ಸ್ವಇಚ್ಛೆಯಿಂದ ಆದೇಶ ಮಾಡಿದ್ದಾರೆ. ಆಗ ಏನೂ ಮಳೆ ಬಂದು ಮನೆ ಬಿದ್ದಿರಲಿಲ್ಲ. ದಿ: 28-5-98ಕ್ಕೆ ಒಂದು ಆದೇಶವನ್ನು ಹೊರಡಿಸಿ ಮೈಸೂರು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರಕ್ಕೆ 550 ಮನೆಗಳ ಗುರಿ, ಚನ್ನರಾಯಪಟ್ಟಣ, ಶ್ರವಣಬೆಳಗೊಳ ಕ್ಷೇತ್ರಕ್ಕೆ 300, ದಂಡಿಗನಹಳ್ಳಿ ಹೋಬಳಿಗೆ 200, ಹಾಸನ ವಿಧಾನಸಭಾ ಕ್ಷೇತ್ರಕ್ಕೆ 500 ಗುರಿ ಇತ್ತು. ಆಗ ಮಳೆ ಬಂದು ಮನೆಗಳು ಬಿದ್ದು ಹೋಗಿತ್ತೇ?

ಛೇರ್ಮನ್ :— ನೀವು ಚರ್ಚೆಯಲ್ಲಿ ಭಾಗವಹಿಸಿದ್ದೀರಿ. ಸಂಕ್ಷಿಪ್ತವಾಗಿ ಯಾವುದಾದರೂ ಪಾಯಿಂಟ್‌ನ್ನು ಕೇಳಿ.

ಶ್ರೀ ಬಿ. ಶಿವರಾಮ್ :— ಇದರ ಜೊತೆಗೆ ಗ್ರಾಮಾಂತರವಲ್ಲದೆ ಪಟ್ಟಣಕ್ಕೂ ಮನೆಗಳನ್ನು ಕೊಡುತ್ತಾರೆ. ಹಾಸನಕ್ಕೆ 1997-98ನೇ ಸಾಲಿಗೆ ಕೊಟ್ಟಿರುವ ಗುರಿ 1500 ಮನೆಗಳು. ಹೊಳೆನರಸೀಪುರಕ್ಕೆ 1500, ಅರಸೀಕೆರೆಗೆ 200, ಒಂದೊಂದು ಜಿಲ್ಲೆಯಲ್ಲಿ ಗ್ರಾಮಾಂತರಕ್ಕೆ 9700 ಮನೆಗಳು, ಪಟ್ಟಣಗಳಿಗೆ 4100 ಮನೆಗಳನ್ನು ಕೊಡುವ ಗುರಿ ಇತ್ತು.

(ಗೊಂದಲ)

ಛೇರ್ಮನ್ :— ಮಾನ್ಯ ಮಂತ್ರಿಗಳು ಉತ್ತರ ಕೊಡುವಂತಹ ಸಂದರ್ಭದಲ್ಲಿ ಈ ಚರ್ಚೆ ಪ್ರಾರಂಭವಾಗಿದೆ.

(ಗೊಂದಲ)

ಛೇರ್ಮನ್ :— ಮಂತ್ರಿಗಳು ಉತ್ತರ ಹೇಳುವಂತಹ ಸಂದರ್ಭದಲ್ಲಿ ಮಧ್ಯದಲ್ಲಿ ಇಂಟರ್‌ಪ್ರಿಟೇಷನ್ ನಡೆದಿದೆ. ದಯವಿಟ್ಟು ಅವರು ಉತ್ತರ ಹೇಳಿದ ನಂತರ ಏನೇನು ಕ್ಲಾರಿಫಿಕೇಷನ್ ಕೇಳಬೇಕೋ ಕೇಳಿ.

ಶ್ರೀ ಹೆಚ್.ಡಿ. ರೇವಣ್ಣ :— ವೈಯಕ್ತಿಕವಾಗಿ ಅಂದರೆ ವೈಯಕ್ತಿಕವಾಗಿ ನಾನು ಹೇಳುತ್ತೇನೆ. ಮಾನ್ಯ ಶಿವರಾಮುರವರ ಕ್ಷೇತ್ರದಲ್ಲಿ 40 ಮಿನಿವಾಟರ್ ಸಪ್ಲೈ ಮಾಡಿಸಿದ್ದರು. ನಾನು ಜಿಲ್ಲಾ ಸಚಿವನಾಗಿ ಹೇಳುತ್ತಿದ್ದೇನೆ. ಸಾವಿರ ರೂಪಾಯಿ ಟೋಟಲ್ ಗ್ರಾಂಟ್ಸ್ ಇಡುವುದು 40 ಮಿನಿ ವಾಟರ್ ಸಪ್ಲೈ ಸ್ಯಾಂಕ್ಷನ್ ಮಾಡಿಸುವುದು. 5 ವರ್ಷದಲ್ಲಿ ಯಾವ ಸರ್ಕಾರ ಬಂದರೂ ಅದನ್ನೇ ಮಾಡಬೇಕಾಗುತ್ತದೆ.

ಶ್ರೀ ಬಿ. ಶಿವರಾಮ್ :— ನಾನು ವೈಯುಕ್ತಿಕವಾಗಿ ಹೇಳುತ್ತೇನೆ. xxx

ಛೇರ್ಮನ್ :— ಇವೆಲ್ಲಾ ಅಸಂಬದ್ಧವಾದ ಮಾತುಗಳು. ಶಿವರಾಮ್‌ರವರು ಹೇಳಿರತಕ್ಕಂತಹ ಮಾತನ್ನು ಕಡತಕ್ಕೆ ಹಾಕಬೇಡಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :— ಮಾನ್ಯ ವಿರೋಧಪಕ್ಷದ ನಾಯಕರು, ಮಂತ್ರಿಗಳು ಆರ್ಡರನ್ನೇ ನೋಡಿಲ್ಲವೆಂದು ಹೇಳಿದರು. ಜಿಲ್ಲಾಧಿಕಾರಿಗಳು ಕೊಟ್ಟಂತಹ ಮಾಹಿತಿ ಆಧಾರದ ಮೇಲೆ 10 ಸಾವಿರ ಮನೆಗಳಿಗಾಗಿ ಮೊದಲನೆಯ ಆದೇಶವನ್ನು ನಾನು ಹೊರಡಿಸಿದ್ದೇನೆ. ಅದನ್ನು ಜಿಲ್ಲಾಧಿಕಾರಿಗಳ ವರದಿಯ ಆಧಾರದ ಮೇಲೆ ಮಾಡಿದ್ದೇವೆ.

---

xxx ಈ ಪದಗಳನ್ನು ಛೇರ್ಮನ್‌ರವರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಉದಾಹರಣೆಗೆ ಹೇಳುವುದಾದರೆ, ಆ ಕಡೆಗೆ ಐನೂರು ಮನೆ ಕೊಟ್ಟಿದ್ದೇವೆ. ಈ ಕಡೆಗೆ ಆರು ನೂರು ಮನೆ ಕೊಟ್ಟಿದ್ದೇವೆ. ಗುಲ್ಬರ್ಗಾದಲ್ಲಿ 1200 ಮನೆಗಳು ಬರುತ್ತವೆ. ಅದು ಜನತಾದಳ ಮತ್ತು ಕಾಂಗ್ರೆಸ್‌ಗೆ ಬರುತ್ತದೆ. ಅದನ್ನು ಹೆಸರು ಹಿಡಿದು ಇಲ್ಲಿ ಹೇಳುವುದಕ್ಕಾಗುವುದಿಲ್ಲ. ಇದಾದ ಮೇಲೆ ಎರಡನೆಯ ಆದೇಶ ಕೆಲವು ವಿಧಾನಸಭಾ ಕ್ಷೇತ್ರದ್ದು ತಾಲ್ಲೂಕುವಾರು 175 ತಾಲ್ಲೂಕುಗಳಿಗೆ ಇನ್ನೂರರಂತೆ ಕೊಟ್ಟಿದ್ದೇವೆ. ಪ್ರತಿ ತಾಲ್ಲೂಕಿಗೆ 175 ಮನೆಯೆಂದು ಕೊಟ್ಟಿದ್ದೇವೆ. ಮೂರನೆಯ ಆದೇಶ ಪ್ರತಿ ತಾಲ್ಲೂಕಿಗೆ ಮುನ್ನೂರರಂತೆ ಅಲ್ಲಿ ಆ ಪಾರ್ಟಿ, ಈ ಪಾರ್ಟಿ ಅಂತೆ ಅಲ್ಲ, ಅಲ್ಲಿ ಕಾಂಗ್ರೆಸ್ ನವರು ಇದ್ದಾರೆ, ಬಿಜೆಪಿಯವರು ಇದ್ದಾರೆ, ಜನತಾದಳದವರು ಇದ್ದಾರೆ. ಕೆಲವು ಕಡೆ ಯಾರು ಹೆಚ್ಚಿಗೆ ಬೇಡಿಕೆ ಇಟ್ಟಿದ್ದಾರೆ ಅವರಿಗೆ ಹೆಚ್ಚಿಗೆ ಕೊಟ್ಟಿದ್ದೇವೆ. ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರೇ, ಯಾವ ಆಧಾರವೆಂದು ಹೇಳುತ್ತೇವೆ, ತಾವು ದಯವಿಟ್ಟು ಎರಡು ನಿಮಿಷ ನಾನು ಹೇಳುವುದನ್ನು ಕೇಳಿ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ:— ಮಾನ್ಯ ಮಂತ್ರಿಗಳು ಕರೆಕ್ಟಾಗಿ ಉತ್ತರ ಕೊಡಬೇಕು. ಅತ್ತ ಕಡೆ ಕೊಟ್ಟಿದ್ದೇನೆ ಇತ್ತ ಕಡೆ ಕೊಟ್ಟಿದ್ದೇವೆಂದು ಹೇಳುತ್ತಾರೆ.

ಛೇರ್ಮನ್ :— ಮಂತ್ರಿಗಳು ಹೇಳುವುದರಲ್ಲಿ ಸ್ಪಷ್ಟತೆಯಿಲ್ಲ. ಎರಡನೆಯ ಸಾರಿ ಮುನ್ನೂರು ಮನೆಗಳಂತೆ ಹಂಚಿದ್ದೇವೆಂದು ಹೇಳುತ್ತೀರಿ ಅದನ್ನು ಹೇಗೆ ಹಂಚಿದ್ದೀರಿ? ಕ್ಷೇತ್ರವಾರು ಹಂಚಿದ್ದಿರೋ ತಾಲ್ಲೂಕುವಾರು ಹಂಚಿದ್ದಿರೋ, ಅದನ್ನು ಸ್ಪಷ್ಟವಾಗಿ ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ :— ಹೇಳುತ್ತೇನೆ. ಮೊದಲನೆಯ ಸಾರಿ ಪ್ರತಿ ತಾಲ್ಲೂಕಿಗೆ ಇನ್ನೂರು ಮನೆಗಳಂತೆ ಹತ್ತುಸಾವಿರ ಮನೆಗಳನ್ನು ಕೊಟ್ಟಿದ್ದೇವೆ. ಎರಡನೆಯ ಆರ್ಡರ್‌ನಲ್ಲಿ ಪ್ರತಿ ತಾಲ್ಲೂಕಿಗೆ ಇನ್ನೂರು ಮನೆಗಳಂತೆ ಕೊಟ್ಟಿದ್ದೇವೆ. ಅದು ಆ ಪಾರ್ಟಿ ಈ ಪಾರ್ಟಿ ಅಂತ ಅಲ್ಲ.

ಛೇರ್ಮನ್ :— ಉಪ ಮುಖ್ಯಮಂತ್ರಿಗಳು ಶಾಸನಸಭಾ ಕ್ಷೇತ್ರವಾರು ಎಂದು ಹೇಳಿದರು. ತಾವು ಹೇಳುವುದು ತಾಲ್ಲೂಕುವಾರು.

ಶ್ರೀ ಹೆಚ್.ಡಿ. ರೇವಣ್ಣ :— ದಯಮಾಡಿ ಅವಕಾಶ ಕೊಡಿ; ಎರಡು ನಿಮಿಷದಲ್ಲಿ ಹೇಳುತ್ತೇನೆ. ಎರಡನೆಯ ಆದೇಶದಲ್ಲಿ ಪ್ರತಿ ತಾಲ್ಲೂಕಿಗೆ ಇನ್ನೂರು ಎಂದು ಹೇಳಿದ್ದೇವೆ. ಕೆಲವು ತಾಲ್ಲೂಕುಗಳಲ್ಲಿ ಮತ್ತು ವಿಧಾನಸಭಾ ಕ್ಷೇತ್ರಗಳಲ್ಲಿ ಮೆದಲನೆಯ ಆದೇಶದಲ್ಲಿ ಐನೂರು ಬರುತ್ತದೆ, ಎರಡನೆಯ ಆದೇಶದಲ್ಲಿ ಐನೂರು ಬರುತ್ತದೆ. ಎರಡನೆಯ ಆದೇಶದಲ್ಲಿ ಕ್ಷೇತ್ರವಾರು ಮುನ್ನೂರರಂತೆ ಕೊಟ್ಟಿದ್ದೇವೆ. ಮೂರನೆಯ ಆದೇಶದಲ್ಲಿ 251 ಪ್ರತಿ ವಿಧಾನಸಭಾ ಕ್ಷೇತ್ರವಾರು ಕೊಟ್ಟಿದ್ದೇವೆ. ನಾಲ್ಕನೆಯ

ಆದೇಶದಲ್ಲಿ ಐನೂರರಂತೆ ಹತ್ತು ವಿಧಾನಸಭಾ ಕ್ಷೇತ್ರಗಳಿಗೆ ಕೊಟ್ಟಿದ್ದೇವೆ. ಅದು ಆದಮೇಲೆ ಕೆಲವು ವಿಧಾನಸಭಾ ಕ್ಷೇತ್ರಗಳಲ್ಲಿ ಮನೆಗಳು ಕಡಿಮೆ ಎನ್ನುವುದು ನನಗೆ ಮನವರಿಕೆಯಾದ ಮೇಲೆ, ಕೆಲವು ಶಾಸಕರೂ ಸಹ ಹೇಳಿದರು. ಈ ಸಭೆಯಲ್ಲಿ ಹೇಳುವುದಕ್ಕೆ ಮುಂಚೆ ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಿಕೊಟ್ಟಿದ್ದೇನೆ. ಪತ್ರಿಕೆಯಲ್ಲಿ ಯಾರೋ ಇನ್ನೊಬ್ಬರು, ಜಾಲಪ್ಪನವರು ಹೇಳಬಹುದು. ಅದಕ್ಕಿಂತ ಮುಂಚೆ ಒಂದೊಂದು ವಿಧಾನಸಭಾ ಕ್ಷೇತ್ರಕ್ಕೆ ಎಷ್ಟೆಷ್ಟು ಮನೆಗಳು ಬರುತ್ತವೆಂದು ನಾವೇ ಹೇಳಿದ್ದೇವೆ.

ಛೇರ್ಮನ್ :— ಮಾನ್ಯ ಬಸವರಾಜ್‌ರವರು ಒಂದು ಪ್ರಶ್ನೆ ಎತ್ತಿದ್ದಾರೆ. ನಿಮ್ಮ ಡಿಸ್ಕಷನರಿ ಪ್ರಕಾರ ಮನೆಗಳನ್ನು ಹಂಚಿದ್ದೀರಿ. ಆ ಮನೆಗಳನ್ನು ವಿತರಣೆ ಮಾಡತಕ್ಕದ್ದು ಆಶ್ರಯ ಸಮಿತಿ ಮಾಡಬೇಕೋ ಅಥವಾ ನೀವೇ ಮಾಡುತ್ತಿರೋ?

ಶ್ರೀ ಹೆಚ್.ಡಿ. ರೇವಣ್ಣ :— ಹಂಚತಕ್ಕ ಕೆಲಸವನ್ನು ಆಶ್ರಯ ಸಮಿತಿಯವರು ಮಾಡಬೇಕು.

ಶ್ರೀ ಹೆಚ್.ಡಿ. ಬಸವರಾಜ್ :— ಸ್ಪಷ್ಟೀಕರಣ ಮಾಡಬೇಕು, ನಾನು ಇನ್ನೊಮ್ಮೆ ಹೇಳುತ್ತೇನೆ. ಮಂತ್ರಿಗಳಿಗೆ ಜಿಲ್ಲಾಪಂಚಾಯಿತಿ ಅಧ್ಯಕ್ಷರುಗಳಿಗೆ ಮನವಿ ಕೊಟ್ಟು ಇದನ್ನು ಪರಿಗಣನೆ ಮಾಡಿಯೆಂದು ಹೇಳಿದರು. ಆ ಮನವಿಯನ್ನು ಮಂಜೂರು ಮಾಡುವುದಕ್ಕೆ ಮತ್ತೆ ಶಾಸಕರಿಗೆ ತಾನೇ ಬರಬೇಕಾಗಿರುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೆ, ರೈಟಿಂಗ್‌ನಲ್ಲಿ ನೀವೇ ಒಂದು ಆರ್ಡರ್ ಕೊಡಿರಿ. ಇಂಥಿಂಥ ಹಳ್ಳಿಗೆ ಇಷ್ಟಿಷ್ಟು ಮನೆಗಳನ್ನು ಕೊಡಿ ಅಂದರೆ ಏನು ಮಾಡಬೇಕು? ಆರ್ಡರ್ ನೋಡುತ್ತಾರೆ ಕೊಡುತ್ತಾರೆ.

ಛೇರ್ಮನ್ :— ಮಂತ್ರಿಗಳು ಉತ್ತರ ಕೊಡುವುದಕ್ಕೆ ಸದಸ್ಯರು ಅವಕಾಶ ಕೊಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಮಂತ್ರಿಗಳ ಉತ್ತರ ಮುಗಿದ ಮೇಲೆ ನಾವು ಹೇಳಿದ್ದೇವೆ. ಅವರು ಸುಮ್ಮನೆ ಉತ್ತರ ಹೇಳುತ್ತಲೇ ಇದ್ದರೆ ನಾವೇನು ಮಾಡಬೇಕು. ಅವರದ್ದು ಉತ್ತರ ಮುಗಿದ ಮೇಲೆ ನಾವು ಮಾತನಾಡಿದ್ದೇವೆ. ಅವರು ಕೂತ ಮೇಲೆ ನಾವು ಮಾತನಾಡಿದ್ದೇವೆ.

ಛೇರ್ಮನ್ :— ಮಂತ್ರಿಗಳು ಹೇಳುವುದನ್ನು ಪೂರೈಸಲಿ.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿ) :— ಮಂತ್ರಿಗಳು ಉತ್ತರವನ್ನು ಪೂರ್ಣ ಮಾಡುವುದಕ್ಕೆ ಬಿಡುತ್ತಿಲ್ಲ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ:— ನಾವೇನು ಕೇಳುತ್ತಿದ್ದೇವೆಂದರೆ, ಬಸವಕಲ್ಯಾಣ ಕ್ಷೇತ್ರಕ್ಕೆ ಏಕೆ ಜಾಸ್ತಿ ಮನೆಗಳು, ಬೀದರ್‌ಗೆ ಏಕೆ ಕಡಿಮೆ ಮನೆಗಳು?

ಛೇರ್ಮನ್:— ಮಾನ್ಯ ಹಷ್ಮಿಯವರೆ, ಮಂತ್ರಿಗಳು ಉತ್ತರ ಪೂರೈಸಲಿ. ಅವರು ಉತ್ತರ ಕೊಡುವುದಕ್ಕೆ ಅವಕಾಶ ಕೊಡಿ. ಹೀಗೆ ಮಧ್ಯೆ ಮಧ್ಯೆ ಎದ್ದು ಮಾತನಾಡಿದರೆ ಹೇಗೆ? ಆಮೇಲೆ ತಾವೇನು ಹೇಳಬೇಕೋ ಹೇಳಿ. ಮಾನ್ಯ ವಸತಿ ಸಚಿವರು ಹೇಳಿ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು) :— ನಾನು ಕ್ರಿಯಾಲೋಪ ಎತ್ತುತ್ತೇನೆ. ಅದೇನೆಂದರೆ, ಮಾನ್ಯ ಸದಸ್ಯರು ಪ್ರಶ್ನೆ ಎತ್ತಿದ್ದಾರೆ. ಅವರಿಗೆ ಬೇಕಾಗಿರತಕ್ಕ ಮಾಹಿತಿಯನ್ನು ಪಡೆಯುತ್ತಾರೆ. ಪದೇ ಪದೇ ತಾವೂ ಸಹ ಹೇಳುತ್ತಿದ್ದೀರಿ ಸರ್ಕಾರದ ಉತ್ತರವನ್ನು ದಯವಿಟ್ಟು ಕೇಳಿಯೆಂದು. ಸರ್ಕಾರದ ಉತ್ತರವನ್ನು ಕೇಳಬೇಕಾದ ಸಂದರ್ಭದಲ್ಲಿ, ಉತ್ತರವನ್ನು ಪಡೆಯಲು ಇಷ್ಟವಿಲ್ಲದೆ, ಹಾಗಾದರೆ ಸರ್ಕಾರದ ಉತ್ತರ ಏಕೆ ಬೇಕು? ದಯವಿಟ್ಟು ಮಂತ್ರಿಗಳು ಹೇಳುವುದನ್ನು ಕೇಳಲಿ. ಏನಾದರೂ ಸಂಶಯವಿದ್ದರೆ ಮರು ಪ್ರಶ್ನೆಗಳನ್ನು ಕೇಳಲಿ. ಮಂತ್ರಿಗಳು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಇದರಲ್ಲಿ ಎಲ್ಲಿಯಾದರೂ ಕೊರತೆ ಇದ್ದರೆ ಕೊಡುತ್ತೇನೆಂದರೆ ಮತ್ತೇನು ನಿಮಗೆ? ಅವರು ಕೊಡುವುದಿಲ್ಲವೆಂದರೆ ಅದು ಬೇರೆ. ಸ್ವಲ್ಪ ಉತ್ತರ ಹೇಳಿ.

(ಗೊಂದಲ)

ಶ್ರೀ ಸಿ.ಆರ್. ಸಗೀರ್ ಅಹ್ಮದ್ :— ಇದರಲ್ಲಿ ಪಾಯಿಂಟ್ ಆಫ್ ಆರ್ಡರ್ ಏನಿದೆ?

ಶ್ರೀ ಎಂ.ಸಿ. ನಾಣಯ್ಯ :— ಸರ್ಕಾರದ ಉತ್ತರ ಬೇಕೋ ಬೇಡವೋ?

ಶ್ರೀ ಸಿ.ಆರ್. ಅಹ್ಮದ್ :— ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳ ಸಚಿವರು ಮಾತನಾಡುತ್ತಿದ್ದಾರೆ ಅವರು ಒಂದು ಕ್ಲಾರಿಫಿಕೇಷನ್‌ಗೆ ಉತ್ತರ ಕೊಡಲಿ. ಸರ್ಕಾರದಲ್ಲಿ ವಸತಿ ಸಚಿವರಾದವರಿಗೆ ಅವರ ವಿವೇಚನೆಯಡಿಯಲ್ಲಿ ಎಷ್ಟು ಮನೆಗಳನ್ನು ವಿತರಣೆ ಮಾಡುವಂತಹ ಅಧಿಕಾರವನ್ನು ಸರ್ಕಾರ ನೀಡಿದೆ?

ಛೇರ್ಮನ್ :— ಮೊದಲು ಅವರು ಉತ್ತರ ಹೇಳಲಿ. ಈಗ ಉತ್ತರ ಹೇಳತಕ್ಕವರು ಮಂತ್ರಿಗಳು. ಅವರು ಉತ್ತರ ಕೊಡುವುದು ಸಮಾಧಾನವಾಗದಿದ್ದರೆ ಬೇರೆಯವರ ಮುಖಾಂತರ ಕೇಳಬಹುದು. ಸಧ್ಯಕ್ಕೆ ಅವರು ಉತ್ತರ ಪೂರೈಸಲಿ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ:— ನಾವು ಕೇಳಿದ ಪ್ರಶ್ನೆಗೆ ಉತ್ತರ ಕೊಡಲಿಲ್ಲ.

ಛೇರ್ಮನ್ :— ಉತ್ತರ ಕೊಡದಿದ್ದರೆ ಮತ್ತೆ ಕೊಡಿಸುತ್ತೇನೆ. ಸ್ವಲ್ಪ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ :— ಮಾನ್ಯ ವಿರೋಧಪಕ್ಷದ ನಾಯಕರು ಇತರೆ ಮಾನ್ಯ ಸದಸ್ಯರು ಏನು ಅಪಾದನೆ ಮಾಡಿದರು ಅದಕ್ಕೆ ಉತ್ತರ ಕೊಡುವುದಕ್ಕೆ ತಯಾರಾಗಿದ್ದೇವೆಂದು ಹೇಳಿದ ಮೇಲೆ ಅವರಿಗೆ ನನ್ನ ಉತ್ತರ ಸರಿಯಾಗಲಿಲ್ಲವೆಂದರೆ ಮತ್ತೆ ಕೇಳಲಿ. ಇಂಥಿಂಥ ತಾಲ್ಲೂಕಿಗೆ ಇಷ್ಟಿಷ್ಟು ಮನೆಯೆಂದು ಆಶ್ರಯ ಕಮಿಟಿಯವರು ಕೊಡಬಹುದು. ಇಂಥಿಂಥ ತಾಲ್ಲೂಕಿನಲ್ಲಿ ಇಂಥಿಂಥ ಊರುಗಳಿಗೆ ಇಷ್ಟಿಷ್ಟು ಮನೆಗಳನ್ನು ಕೊಡಿಯೆಂದು ಹೇಳಲಿಕ್ಕೆ ನನಗೆ ಅಧಿಕಾರವಿಲ್ಲ. ಮಾನ್ಯ ಬಸವರಾಜ್‌ರವರು ಹೇಳಿದಹಾಗೆ ಮಾನ್ಯ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರು ಮತ್ತು ಸದಸ್ಯರು, ಲ್ಯಾಂಡ್ ಆರ್ಮಿಯ ಅಧ್ಯಕ್ಷರು ಬಂದರೆ 50 ಮನೆಗಳನ್ನು ನಮ್ಮ ತಾಲ್ಲೂಕಿಗೆ ಕೊಡಿಯೆಂದರೆ ಆಶ್ರಯ ಸಮಿತಿಯವರು ನಿಜವಾಗಿಯೂ ಫಲಾನುಭವಿಗಳು ಇದ್ದರೆ ಕೊಡಬಹುದು. ಇಲ್ಲದಿದ್ದರೆ ಆ ಊರಿನಲ್ಲಿ ನಿಜವಾದ ಫಲಾನುಭವಿಗಳು ಇಲ್ಲವೆಂದು ಸರ್ಕಾರಕ್ಕೆ ವಾಪಸ್ಸು ಕಳುಹಿಸಿಕೊಡಬಹುದು. ಇಂಥಿಂಥವರಿಗೆ ಮನೆ ಕೊಡಿ ಇಂಥಿಂಥ ಫಲಾನುಭವಿಗಳಿಗೆ ಕೊಡಿಯೆಂದು ನಾನು ಏನಾದರೂ ಆದೇಶ ಕೊಟ್ಟಿದ್ದೇನೆಯೇ? ಇಷ್ಟು ಹೇಳಿದ್ದೇನೆ, ಇದಕ್ಕಿಂತ ಇನ್ನೇನು ಹೇಳಲಿ? ವಿಧಾನಸಭಾ ಕ್ಷೇತ್ರ, ಅದು ಜನತಾದಳ, ಕಾಂಗ್ರೆಸ್ ಅಥವ ಬಿಜೆಪಿ ಎಂದು ನಾನೇನೂ ತಾರತಮ್ಯ ಮಾಡಲಿಲ್ಲ. ಮಾನ್ಯ ಹಷ್ಮಿಯವರು ದುಡ್ಡು ಬರಬೇಕೆಂದು ಹೇಳುತ್ತಾರೆ. ಆಶ್ರಯ ಸಮಿತಿಯಲ್ಲಿ ಇನ್ನೂ ಕೆಲವು ತಾಲ್ಲೂಕುಗಳಲ್ಲಿ ಕೊಟ್ಟಿಲ್ಲ. ಆದರೂ ನಾನು ಹುಡ್ಕೋ ಸಂಸ್ಥೆಯ ಅಧ್ಯಕ್ಷರ ಮನವೊಲಿಸಿ ಹಣವನ್ನು ನಿನ್ನೆ ಬಿಡುಗಡೆ ಮಾಡಿಸಿದ್ದೇನೆ. ಅರ್ಬನ್ ಆಶ್ರಯ ಸಮಿತಿಗೋಸ್ಕರ 20 ಕೋಟಿ ರೂಪಾಯಿ ಹಣವನ್ನು ನಮ್ಮ ಕಾರ್ಯದರ್ಶಿಯವರು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಸೇರಿ 40 ಕೋಟಿಯಲ್ಲಿ 20 ಕೋಟಿ ಬಿಡುಗಡೆ ಮಾಡಿಸಿದ್ದೇನೆ. ಕೆಲವು ಕಡೆಗಳಲ್ಲಿ ಇನ್ನೂ ಫಲಾನುಭವಿಗಳ ಲಿಸ್ಟ್ ಆಗಿಲ್ಲ. ಏಕೆ ಆಗಲಿಲ್ಲ? ಮಾನ್ಯ ಮುನಿಯಪ್ಪನವರು ಅವರ ಕ್ಷೇತ್ರದಲ್ಲಿ ಕಳೆದ ಎರಡು ವರ್ಷಗಳಿಂದ 375 ಮನೆಗಳನ್ನು ಕಟ್ಟಿಸಲಿಲ್ಲ.

ಶ್ರೀ ಬಿ. ಮುನಿಯಪ್ಪ :— ನಮ್ಮಲ್ಲಿ ಯಾವುದೂ ಬಾಕಿಯಿಲ್ಲ.

4.40 ಪಿ.ಎಂ.

ಶ್ರೀ ಹೆಚ್.ಡಿ. ರೇವಣ್ಣ :— ನಾನೇ ಕೋಲಾರ ಜಿಲ್ಲೆಯಲ್ಲಿ ಬೆಳಗ್ಗೆಯಿಂದ ಸಾಯಂಕಾಲದವರೆಗೆ...

ಛೇರ್ಮನ್ :— ಮುನಿಯಪ್ಪನವರೇ, ಆ ಪ್ರಶ್ನೆ ಇಲ್ಲ. ಸುಮ್ಮನಿರಿ.

ಶ್ರೀ ಹೆಚ್.ಡಿ. ರೇವಣ್ಣ :— ಮಾನ್ಯ ಸಭಾಧ್ಯಕ್ಷರೇ, ಈಗ ನಾನು ಸವಿಸ್ತಾರವಾಗಿ ಹೇಳಿದ್ದೇನೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಕೆಲವುಕಡೆ ಒಂದು ತಾಲ್ಲೂಕಿನಲ್ಲಿ ಒಂದು ಸಾವಿರ, ಸಾವಿರದ ಇನ್ನೂರು ಇರಬಹುದು. ಗುಲ್ಬರ್ಗಾ ಜಿಲ್ಲೆಯಲ್ಲಿ 11 ಸಾವಿರ ಮನೆಗಳನ್ನು ಕೊಟ್ಟಿದ್ದೇವೆ. ವಿರೋಧ ಪಕ್ಷದ ನಾಯಕರು ಮುಖ್ಯಮಂತ್ರಿಗಳಿಗೆ ಒಂದು ಪತ್ರವನ್ನು ಕೊಟ್ಟಿದ್ದರು 50 ಸಾವಿರ ಮನೆಗಳನ್ನು ಹೆಚ್ಚು ಕೊಡಬೇಕು ಎಂದು. ಕೆಲವು ಕಡೆ ಮಳೆ ಹೆಚ್ಚು ಬಿದ್ದಿರುವ ಕಡೆ ಹೆಚ್ಚು ಮನೆಗಳನ್ನು ಕೊಡಬೇಕೆಂದು ಎಂದು ಅವರೇನು ಪತ್ರ ಕಳುಹಿಸಿಕೊಟ್ಟಿದ್ದರು ಅದನ್ನು ಮುಖ್ಯಮಂತ್ರಿಗಳಿಗೆ ಕಳಿಹಿಸಿದ್ದೇನೆ. ನಮ್ಮ ಹಣಕಾಸಿನ ಪರಿಸ್ಥಿತಿಯನ್ನೂ ಕೂಡ ನಾವು ನೋಡಬೇಕಾಗುತ್ತದೆ. ಈಗ ನಮ್ಮ ಇಲಾಖೆಗೆ ಕೊಟ್ಟಿರುವುದು ನೂರು ಕೋಟಿ ರೂಪಾಯಿಗಳು. ಅದರಲ್ಲಿ ನಿವೇಶನ, ಮನೆ ಕಟ್ಟುವುದಕ್ಕೆ ಸಾಲ ಎಲ್ಲ....

ಭೇರನ್ನ್ :— ಪ್ರಶ್ನೆ ಇರುವುದು ಏನೆಂದರೆ ಸರಿಯಾಗಿ ವಿತರಣೆಯಾಗಿಲ್ಲ ಎನ್ನುವಂಥಾದ್ದು. ಆಗಿದೆಯೇ ಇಲ್ಲವೇ ಅಷ್ಟು ಉತ್ತರ ಹೇಳಿ.

(ಗೊಂದಲ)

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿ):— ಇಷ್ಟು ಸಾರಿ ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಮೊದಲನೇ ಕಂತಿನಲ್ಲಿ ಎಲ್ಲೆಲ್ಲಿ ಮನೆಗಳು ಬಿದ್ದುಹೋಗಿವೆ, ಅಲ್ಲಿ ತತ್‌ಕ್ಷಣಕ್ಕೆ ಕೊಡಬೇಕು ಎನ್ನುವ ಕಾರಣಕ್ಕೋಸ್ಕರ ಹತ್ತು ಸಾವಿರ ಮನೆಗಳನ್ನು ಕೊಡಬೇಕೆಂದು ಒಂದು ಆರ್ಡರ್ ಮಾಡಿದ್ದೇವೆ. ಜಿಲ್ಲಾಧಿಕಾರಿಗಳು, ತಹಸೀಲ್ದಾರರ ವರದಿ ಮೇಲೆ ಇದು ಕೂಡಲೇ ಎಲ್ಲಿ ತಕ್ಷಣ ಪರಿಹಾರ ಕೊಡಬೇಕಾಗಿತ್ತೋ ಅದಕ್ಕೋಸ್ಕರವಾಗಿ 10 ಸಾವಿರ ಮನೆಗಳನ್ನು ಕೊಟ್ಟಿದ್ದೇವೆ. ಎರಡನೇ ಕಂತಿನಲ್ಲಿ 175 ತಾಲ್ಲೂಕುಗಳಿಗೆ ಮುನ್ನೂರು ಮನೆಗಳಂತೆ ಕೂಡ ಹಂಚಿದ್ದೇವೆ. ಮೂರನೇಯದಾಗಿ ಇದರಲ್ಲಿ ಎಲ್ಲಾ ಪಕ್ಷದವರೂ ಇದ್ದಾರೆ. ಎಲ್ಲಾ ತಾಲ್ಲೂಕುಗಳಲ್ಲಿ ಎಲ್ಲ ಪಕ್ಷದವರೂ ಇದ್ದಾರೆ. ಬಿ.ಜೆ.ಪಿ.ಯವರು ಇದ್ದಾರೆ, ಕಾಂಗ್ರೆಸ್‌ನವರು ಇದ್ದಾರೆ, ಜನತಾದಳದವರು ಇದ್ದಾರೆ, ಪಕ್ಷೇತರರು ಇದ್ದಾರೆ, ಲೋಕಶಕ್ತಿ ಎಲ್ಲರೂ ಕೂಡ ಇದ್ದಾರೆ.

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ:— ನಮಗೆ ಅನ್ಯಾಯವಾಗಿದೆ. ಬಸವಕಲ್ಯಾಣ, ಹುಮ್ನಾಬಾದಿಗೆ ಮುನ್ನೂರು ಮನೆಗಳನ್ನು ಕೊಟ್ಟಿದ್ದಾರೆ. ನಮಗೆ ಏಕೆ ಕೊಟ್ಟಿಲ್ಲ?

(ಗೊಂದಲ)

ಶ್ರೀ ಸಿದ್ಧರಾಮಯ್ಯ :— ಮಾನ್ಯ ಅಧ್ಯಕ್ಷರೇ, ಅವರು ಇನ್ನೊಂದು ಏನು ಸ್ಪಷ್ಟವಾಗಿ ಹೇಳಿದ್ದಾರೆ ಎಂದರೆ ತಾಲ್ಲೂಕುಗಳಿಗೆ ಇಷ್ಟು ಮನೆಗಳು ಎಂದು ಕೊಟ್ಟಿದ್ದೇವೆಯೇ

ಹೊರತು ಫಲಾನುಭವಿಗಳನ್ನು ಆಯ್ಕೆ ಮಾಡತಕ್ಕಂಥಾದ್ದು ಆಶ್ರಯ ಕಮಿಟಿಯ ಆ ಸಮಿತಿಯಲ್ಲೇ ಮಾಡತಕ್ಕಂಥಾದ್ದು. ಅಲ್ಲಿ ಯಾರಿಗೆ ಕೊಡಬೇಕೋ ಅದನ್ನು ಆಯ್ಕೆ ಮಾಡಿ ಕೊಡತಕ್ಕಂಥಾದ್ದು ಅವರೇ ಮಾಡುತ್ತಾರೆ. ಅಂದಮೇಲೆ ಇಲ್ಲಿ ರಾಜಕೀಯ ಮಾಡತಕ್ಕಂಥಾದ್ದು ಏನಿದೆ? ದುರುದ್ದೇಶದಿಂದ ಮಾಡಿರತಕ್ಕಂಥಾದ್ದು ಏನಿದೆ? ಇವತ್ತು ಬಡವರಿಗೆ ಮನೆಗಳನ್ನು ಕೊಡತಕ್ಕಂಥಾದ್ದು ಆಗಲಿ, ಇದರಲ್ಲಿ ರಾಜಕೀಯ ಮಾಡಬೇಕಾದ ಆಗತ್ಯ ಇಲ್ಲ. ನಮಗಂತೂ ಆ ಅಗತ್ಯತೆ ಕಂಡು ಬರುವುದಿಲ್ಲ. ಇದು ಒಂದು ಲಕ್ಷ ಮನೆಗಳನ್ನು ಅಡಿಶನಲ್‌ಆಗಿ ಕೊಟ್ಟಿರತಕ್ಕಂಥಾದ್ದು. ರೆಗ್ಯುಲರ್ ಸ್ಕೀಮ್‌ನಲ್ಲಿ ಬರತಕ್ಕಂಥಾದ್ದು ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ಈ ಯೋಜನೆಗಳಲ್ಲಿ 1998-99 ರಲ್ಲಿ ನಾವು ಏನು ಒಂದು ಮನೆಗಳನ್ನು ಹಂಚಿದ್ದೇವೋ, ಅದರ ಜೊತೆಗೆ ಇನ್ನೂ ಒಂದು ಲಕ್ಷ ಮನೆಗಳನ್ನು ಈ ಸಾರಿ ಮಳೆ ಹೆಚ್ಚಿಗೆ ಬಿದ್ದಿದೆ, ಕೆಲವು ಕಡೆ ಮನೆಗಳು ಬಿದ್ದುಹೋಗಿವೆ ಎಂದು ಅನೇಕ ಜನ ಶಾಸಕರು ಬಂದು ಹೇಳುತ್ತಿದ್ದರು. ಅದಕ್ಕೋಸ್ಕರವಾಗಿ ವಿಶೇಷವಾದಂಥ ತೀರ್ಮಾನ ಮಾಡಿ ಹುಡ್ಕೋ ಚೇರ್ಮನ್‌ರನ್ನು ಒಪ್ಪಿಸಿ ಅವರು 65 ಕೋಟಿ ರೂಪಾಯಿ ಸಾಲ ಕೊಡುತ್ತೇವೆ ಎಂದು ಒಪ್ಪಿಕೊಂಡ ಮೇಲೆ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಅಲ್ಲಿ ಇಲ್ಲಿ ಕೆಲವು ಕಡೆ ಏನು ಹಂಚಿಕೆಯಾಗಿರುವುದು ಕಡಿಮೆಯಾಗಿದೆ ಅದನ್ನು ಸರಿಪಡಿಸುತ್ತೇವೆ ಎಂದು ಕೂಡ ಹೇಳಿದ್ದೇವೆ. ಮತ್ತೆ ಆಜ್ಞೆಯನ್ನು ವಾಪಸ್ಸು ತೆಗೆದುಕೊಳ್ಳಬೇಕು ಎಂದರೆ ಕೆಲವು ಕಡೆ ಈಗಾಗಲೇ ಮನೆಗಳನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಮನೆಗಳ ಹಂಚಿಕೆಯೂ ಆಗಿದೆ. ಫಲಾನುಭವಿಗಳ ಪಟ್ಟಿ ಕೂಡ ತಯಾರಾಗಿದೆ. ಈ ಹಂತದಲ್ಲಿ ಆಜ್ಞೆಯನ್ನು ವಾಪಸ್ಸು ತೆಗೆದುಕೊಳ್ಳುವುದು ಹೇಗೆ ಸಾಧ್ಯವಾಗುತ್ತದೆ? ಆದ್ದರಿಂದ ವಾಪಾಸ್ಸು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಅಲ್ಲಿ ಇಲ್ಲಿ ಏನು ಕಡಿಮೆ ಬಂದಿದೆ ಅದನ್ನು ಸರಿಪಡಿಸತಕ್ಕಂಥಾದ್ದನ್ನು ನಾವು ಮಾಡುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ರಾಜಕೀಯ ದುರುದ್ದೇಶದಿಂದ ಇದನ್ನು ಮಾಡಿಲ್ಲ, ನ್ಯಾಯವಾಗಿ ಹಂಚಿದ್ದೇವೆ, ಎಲ್ಲೆಲ್ಲಿ ಮಳೆ ಬಿದ್ದಿದೆ ಅಂತಹ ಕಡೆ ಕೊಟ್ಟಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿದರು. ಈಗ ಬಳ್ಳಾರಿ ಜಿಲ್ಲೆಯಲ್ಲಿ ಬರೇ ಕೂಡ್ಲಿಗಿ, ಹೊಸಪೇಟೆ, ಶಿರಗುಪ್ಪ ಇಲ್ಲಿ ಮಾತ್ರ ಮಳೆ ಬಿದ್ದಿತ್ತಾ? ಉಳಿದ ಕಡೆ ಮಳೆ ಆಗಲಿಲ್ವಾ? ಆಮೇಲೆ ಬಿಜಾಪುರದಲ್ಲಿ ಬಸವನಬಾಗೇವಾಡಿ...

ಛೇರ್ಮನ್ :— ಈಗ ಅವರು ಹೇಳಿದ್ದರಲ್ಲಿ ಎರಡು ಉತ್ತರ ಬಂದಿದೆ. ಒಂದು ಏನೆಂದರೆ ಮೊದಲನೇ ಕಂತಿನಲ್ಲಿ ಇನ್ನೂರು ಮನೆಗಳನ್ನು ಕ್ಷೇತ್ರವಾರು ಹಂಚಿದ್ದೇವೆ. ಎರಡನೇ ಸಾರಿ...

ಮಾನ್ಯ ಸದಸ್ಯರು :— ಅದು ತಾಲ್ಲೂಕುವಾರು...

ಶ್ರೀ ಸಿದ್ಧರಾಮಯ್ಯ :— ಒಂದನೇ ಆಜ್ಞೆಯಲ್ಲಿ ಎಲ್ಲಿ ಮನೆಗಳು ಬಿದ್ದು ಹೋಗಿದ್ದವು ಆ ಭಾಗಕ್ಕೆ ಕೊಡುವುದು ಎಂದು 10 ಸಾವಿರ ಮನೆಗಳನ್ನು ಕೊಟ್ಟಿದ್ದೇವೆ. ಎರಡನೇ ಸಾರಿ 175 ತಾಲ್ಲೂಕುಗಳಿಗೆ 200 ಮನೆಗಳಂತೆ ಕೊಟ್ಟಿದ್ದೇವೆ. ಆ ಉಳಿದಂಥ ಮನೆಗಳನ್ನು ಎಲ್ಲೆಲ್ಲಿ ಶಾಸಕರು ಕೇಳಿದ್ದಾರೆ ಅಲ್ಲಿ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಕ್ಷೇತ್ರವಾರು ಅಲ್ಲ, ಎಲ್ಲಿ ಕೇಳಿದ್ದಾರೆ ಅಲ್ಲಿ ಕೊಟ್ಟಿದ್ದಾರೆ.

ಶ್ರೀ ಸಿದ್ಧರಾಮಯ್ಯ :— ಈಗ ಯಾದ್ಗೀರ್‌ದಲ್ಲಿ ಮನೆಗಳನ್ನು ಕೊಟ್ಟರೆ ಅದು ಕ್ಷೇತ್ರವಾರು ಆಗುತ್ತದೆಯೇ? ಹೊಸಪೇಟೆಗೆ ಕೊಟ್ಟರೆ ಅದು ನಮ್ಮ ಪಾರ್ಟಿಗೆ ಎಂದು ಆಗುತ್ತದೆಯೇ? ಬಸವನಬಾಗೇವಾಡಿಯಲ್ಲಿ ನಮ್ಮ ಪಾರ್ಟಿಯವರು ಇದ್ದಾರಾ? ಜೇವರ್ಗಿಯಲ್ಲಿ ನಮ್ಮ ಪಾರ್ಟಿಯವರು ಇದ್ದಾರಾ?

ಭೇರಪ್ಪ್ :— ಒಂದು ಸಂಶಯ ಇದೆ. ಇದು ನನಗೂ ಅರ್ಥವಾಗುತ್ತಿಲ್ಲ. ಸರ್ಕಾರದ ತೀರ್ಮಾನ ಪ್ರಕಾರ ಹಂಚಿಕೆ ಮಾಡಿರತಕ್ಕಂಥಾದ್ದು ಶಾಸನಸಭಾ ಕ್ಷೇತ್ರವಾರೋ ಅಥವಾ ತಾಲ್ಲೂಕುವಾರೋ?

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಅಧ್ಯಕ್ಷರೇ, ಈಗ ಅವರಿಗೆ ಅನುಕೂಲ ಆದಹಾಗೆ ಮಾಡಿದ್ದಾರೆ. ಎಲ್ಲಿ ತಾಲ್ಲೂಕುವಾರು ಕೊಡಬೇಕು ಅಲ್ಲಿ ತಾಲ್ಲೂಕುವೈಸ್ ಕೊಟ್ಟಿದ್ದಾರೆ. ಎಲ್ಲಿ ಮತಕ್ಷೇತ್ರ ವೈಸ್ ಅವರಿಗೆ ಎಲ್ಲಿ ಬೇಕಾಗಿದೆಯೋ ಅಂತಹ ಕಡೆ ಮತಕ್ಷೇತ್ರ ವೈಸ್ ಕೊಟ್ಟಿದ್ದಾರೆ. ಮಳೆ ಹೆಸರಿನಲ್ಲಿ ಅವರಿಗೆ ಬೇಕಾದಂಥ ತಾಲ್ಲೂಕುಗಳಿಗೆ ಮಾತ್ರ ಕೊಟ್ಟಿದ್ದಾರೆ. ಈಗ ಉದಾಹರಣೆಗೆ..

ಶ್ರೀ ಸಿದ್ಧರಾಮಯ್ಯ :— ಎಲ್ಲಿ ಕಡಿಮೆ ಇದೆ, ಯಾವ ಕ್ಷೇತ್ರದಲ್ಲಿ ಆಗತ್ಯ ಇದೆ, ಅದನ್ನು ಸರಿಪಡಿಸತಕ್ಕಂಥಾದ್ದನ್ನು ನಾವು ಮಾಡುತ್ತೇವೆ.

ಶ್ರೀ ಎ. ಮುನಿಯಪ್ಪ :— ಎಲ್ಲಾ ಕಡೆ ಸಮಾನವಾಗಿ ಕೊಟ್ಟಿಲ್ಲ.

(ಗೊಂದಲ)

ಭೇರಪ್ಪ್ :— ಮುನಿಯಪ್ಪನವರೇ, ನೀವು ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ :— ನಾನು ಹೇಳಿಬಿಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಆಯಿತು, ನೀವೇ ಹೇಳಿಬಿಡಿ.

ಶ್ರೀ ಹೆಚ್.ಡಿ. ರೇವಣ್ಣ:— ನಾನು ಮುಂಚೆಯೇ ಹೇಳಿಬಿಡುತ್ತೇನೆ. ಸಭಾಧ್ಯಕ್ಷರೇ, ಈಗಾಗಲೇ 175 ತಾಲ್ಲೂಕುಗಳದ್ದು ಒಂದು ಕಡೆ ಇರಲಿ. 300 ಮನೆಗಳನ್ನು ನಾವು ಕೊಟ್ಟಿರುವುದರಲ್ಲಿ ವಿಧಾನಸಭಾ ಕ್ಷೇತ್ರ ಎಂದು ಏನು ಮನೆಗಳನ್ನು ಕೊಟ್ಟಿದ್ದೇವೆ, ಅದರಲ್ಲಿ ಬಿಟ್ಟುಹೋಗಿರುವಂಥಾದ್ದು ಏನಿದೆ, ಈಗಾಗಲೇ ಅದಕ್ಕೆ ಮುಖ್ಯಮಂತ್ರಿಗಳು ಅನುಮೋದನೆಯನ್ನು ಕೊಟ್ಟಿದ್ದಾರೆ. ಮುಂದಿನ ಸಚಿವಸಂಪುಟ ಸಭೆಯಲ್ಲಿ ಅದು ಅಪ್ರೂವ್ ಆದಮೇಲೆ ಆ ಮುನ್ನೂರು ಮನೆಗಳಂತೆ. ನಾವು ಕೊಡುತ್ತೇವೆ. ಬಾಕಿ ಉಳಿದಂಥ ಜಿಲ್ಲೆಗಳಿಗೆ ಕೊಡುತ್ತೇವೆ ಅಂತ ನಾನು ಹೇಳಿದ್ದೇನೆ.

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ:— ನಮ್ಮ ಪ್ರಶ್ನೆಗೆ ಮುಖ್ಯಮಂತ್ರಿಗಳು ಉತ್ತರ ಕೊಡಬೇಕು.

ಚೇರ್ಮನ್ :— ಖರ್ಗೆಯವರೇ, ಬೇಗನೇ ಪೂರೈಸಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಾನು ಬೇಗನೆ ಮುಗಿಸುತ್ತೇನೆ. ಇವರು ಯಾವ್ಯಾವ ಜಿಲ್ಲೆಯಲ್ಲಿ ಮಳೆ ಬಿದ್ದಿತ್ತು, ಮನೆಗಳನ್ನು ಕಳೆದುಕೊಂಡಿದ್ದಾರೆ ಅಂತಹವರಿಗೆ ನಾವು ಕೊಟ್ಟಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿದರು. ಅದಕ್ಕೇ ನಾನು ಸ್ಪಷ್ಟವಾಗಿ ಕೇಳಿದ್ದು. ಉದಾಹರಣೆಗೆ ಬೀದರ್ ಜಿಲ್ಲೆಯಲ್ಲಿ ಬಸವಕಲ್ಯಾಣ, ಹುಮ್ನಾಬಾದ್ ಈ ಎರಡು ತಾಲ್ಲೂಕುಗಳಲ್ಲಿ ಮಳೆ ಬಿದ್ದಿದೆ ಏನು? ಔರಾಬಾದ್‌ನಲ್ಲಿ ಮಳೆ ಬಿದ್ದಿಲ್ಲವೇನು? ಹತ್ತು ಸಾವಿರ ಮನೆಗಳು ಏನಿವೆ, ಎಲ್ಲಿ ಅತಿವೃಷ್ಟಿಯಿಂದ ಮನೆಗಳು ಕುಸಿದುಬಿದ್ದಿವೆ ಅಲ್ಲಿ ಕೊಟ್ಟಂಥ ಮನೆಗಳು. ಹೌದಾ? ಆಮೇಲೆ ಬಿಜಾಪುರ ಜಿಲ್ಲೆಯಲ್ಲಿ ಬಸವನಬಾಗೇವಾಡಿ, ಚಿಕ್ಕೋಡಿ, ಇಂಡಿ, ಸಿಂಧಗಿ, ಮುದ್ದೇಬಿಹಾಳ ಈ ನಾಲ್ಕು ತಾಲ್ಲೂಕುಗಳು ಮಾತ್ರವೇನು? ಬೇರೆ ತಾಲ್ಲೂಕುಗಳಲ್ಲಿ ಮಳೆ ಬೀಳಲಿಲ್ಲವೇನು? ಆಮೇಲೆ ಬಳ್ಳಾರಿ ಜಿಲ್ಲೆಯಲ್ಲಿ ಕೂಡ್ಲಿಗಿ, ಹೊಸಪೇಟೆ, ಹಡಗಲಿ, ಶಿರಗುಪ್ಪ ಈ ನಾಲ್ಕು ತಾಲ್ಲೂಕುಗಳಲ್ಲಿ ಮಾತ್ರ ಮಳೆಬಿದ್ದಿದೆ. ಬೇರೆ ಕಡೆ ಇಲ್ಲ? ನಾನು ಅದಕ್ಕಾಗಿ ಹೇಳುತ್ತಿದ್ದೇನೆ ಏನೆಂದರೆ ಡಿ.ಸಿ.ಯವರ ರಿಪೋರ್ಟ್ ಜಿಲ್ಲಾವಾರು ಇದ್ದರೂ ಕೂಡ ಕೊಡುವಾಗ ತಮಗೆ ಎಲ್ಲಿ ಬೇಕು, ಯಾವ ತಾಲ್ಲೂಕುಗಳಿಗೆ ಬೇಕೋ ಅವಕ್ಕೆ ಮಾತ್ರ ಕೊಟ್ಟಿದ್ದೀರಿ ಎನ್ನತಕ್ಕಂಥಾದ್ದು ನಮ್ಮ ವಾದ. ಅದಕ್ಕಾಗಿ ನಿಮ್ಮ ಡಿ.ಸಿ.ಯವರು ಎಲ್ಲಿ ಯಾವ್ಯಾವ ತಾಲ್ಲೂಕುಗಳಲ್ಲಿ ಮನೆಗಳು ಬಿದ್ದುಹೋಗಿವೆ ಎಂದು ಹೇಳಿಬಿಡಲಿ. ಬಳ್ಳಾರಿ, ಗುಲ್ಬರ್ಗಾ ಬೀದರ್ ಈ ಐದು ಜಿಲ್ಲೆಗಳಲ್ಲಿ ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದಿರಲ್ಲಾ, 12.11.98ರ ಸರ್ಕಾರಿ ಆಜ್ಞೆ ಪ್ರಕಾರ ಒಂದೊಂದು ತಾಲ್ಲೂಕ್‌ನಲ್ಲಿ ಅವರಿಗೆ ಏಕೆ ಕೊಟ್ಟಿಲ್ಲ ಎನ್ನತಕ್ಕಂಥಾದ್ದು ಹೇಳಲಿ. ಅದಕ್ಕಾಗಿ ಇದು ತಾರತಮ್ಯ ಉದ್ದೇಶಪೂರ್ವಕ ಮಾಡಿದ್ದಾರೆ. ಅವರಿಗೆ ಎಲ್ಲಿ ಬೇಕೋ ಅಲ್ಲಿಯೇ ಕೊಟ್ಟಿದ್ದಾರೆ. ತಿರುಗಿ ಎರಡನೇ ಸರ್ಕಾರಿ ಆಜ್ಞೆಯಲ್ಲಿ ಕೂಡ ಆ ಮನೆಗಳನ್ನೂ ಕೂಡ ಇದೇ ರೀತಿಯಾಗಿ ಮಾಡಿದ್ದಾರೆ. ಇದನ್ನು

ಸರಿಪಡಿಸಲೇ ಬೇಕು, ಈ ಸರ್ಕಾರಿ ಆಜ್ಞೆಯನ್ನು ವಿತ್‌ಡ್ರಾ ಮಾಡಿ ಸರಿಸಮಾನವಾಗಿ ಹಂಚಿರಿ. ಮಳೆ ಬಿದ್ದ ಕಡೆ ಹತ್ತು ಸಾವಿರ ಮನೆ ಎಕ್ಸಟ್ರಾ ಏನು ಕೊಟ್ಟಿದ್ದೀರಿ, ಅದನ್ನು ಕೊಟ್ಟುಕೊಳ್ಳಿ. ಅದಕ್ಕೆ ನಮ್ಮ ಅಭ್ಯಂತರ ಇಲ್ಲ. ಆದರೆ ಉಳಿದ ಕಡೆ ಇಡೀ ಶಾಸನಸಭಾ ಸದಸ್ಯರು ಏನಿದ್ದಾರೆ ಅವರಿಗೆ ಸಮಾನವಾಗಿ ನೀವು ಹಂಚತಕ್ಕದ್ದು ಮಾಡಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ :— ತಿಪಟೂರು ತಾಲ್ಲೂಕಿನಲ್ಲಿ ಬರೇ ಹಳ್ಳಿಗಳಿಗೆ ನಿರ್ದಿಷ್ಟವಾಗಿ ಕೊಟ್ಟಿದ್ದಾರೆ. ಆ ಆಜ್ಞೆಯನ್ನು ವಾಪಸ್ಸು ತೆಗೆದುಕೊಳ್ಳಬೇಕು. ಎಲ್ಲರೂ ಒಪ್ಪುವುದಾದರೆ ನಾವು ರಾಜಿ ಆಗುತ್ತೇವೆ. ಕೇವಲ ಐದು ಹಳ್ಳಿಗಳಿಗೆ ಒಂದು ಹಳ್ಳಿಯಲ್ಲಿ 70, ಇನ್ನೊಂದು ಹಳ್ಳಿಯಲ್ಲಿ 50, ಮತ್ತೊಂದು ಹಳ್ಳಿಯಲ್ಲಿ 40 ಮನೆಗಳನ್ನು ಕೊಡಬೇಕು ಸಚಿವರು ಆದೇಶ ಹೊರಡಿಸಿದ್ದಾರೆ. ಆಶ್ರಯ ಸಮಿತಿಯಲ್ಲಿ ನಾವು ಕುಳಿತುಕೊಂಡು ಏನು ಮಾಡುವುದು? ಅಲ್ಲಿ ಫಲಾನುಭವಿಗಳು ಸಿಕ್ಕುವುದಿಲ್ಲ, ಹುಡುಕಿಕೊಂಡು ಹೋದರೆ ರೇಷಿಯೋ ಪ್ರಕಾರ ಮನೆಗಳನ್ನು ಕೊಡಿಸುವುದಕ್ಕೆ ಆಗುವುದಿಲ್ಲ. ಇದನ್ನೆಲ್ಲಾ ಸರ್ಕಾರದ ಆದೇಶ ಅಂತೀರಾ? ಕನಿಷ್ಟ ನೀವು ತಿಪಟೂರು ತಾಲ್ಲೂಕಿನಲ್ಲಿ ನಿರ್ದಿಷ್ಟವಾಗಿ ಇಂತಿಂಥ ಹಳ್ಳಿಗಳಿಗೆ ಎಷ್ಟು ಮನೆಗಳಂತೆ ಕೊಟ್ಟಿದ್ದೀರಿ, ಅದನ್ನು ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಅವರು ಹೇಳುತ್ತಾ ಇರುವುದು, ಒಂದು ಹಳ್ಳಿಗೆ, ಎರಡು ಹಳ್ಳಿಗಳಿಗೆ ಸರ್ಕಾರ ಆಜ್ಞೆ ಮಾಡಿದೆ, ಅದನ್ನು ವಾಪಸ್ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ತಾವು ಸರ್ಕಾರಿ ಆದೇಶ ತರಿಸಿ ಓದಿ ಸಾರ್. 5 ರಿಂದ 7 ಹಳ್ಳಿಗಳಿಗೆ ಇವರು ಇನ್ನೂರು ಮನೆಗಳನ್ನು ಕೊಟ್ಟಿದ್ದಾರೆ. ನಮ್ಮ ಕಮಿಟಿ ವ್ಯಾಪ್ತಿಗೆ ಇವರು ಬಿಟ್ಟಿಲ್ಲ. ಕಿಬ್ಬನಹಳ್ಳಿ ಹೋಬಳಿ ನನ್ನ ಕ್ಷೇತ್ರಕ್ಕೆ ಸೇರುತ್ತದೆ, ಇಲ್ಲಿ ಒಂದೇ ಒಂದು ಮನೆ ಕೊಟ್ಟಿಲ್ಲ. ಈ ಆದೇಶವನ್ನು ತಾವು ಮಾರ್ಪಾಟು ಮಾಡಲೇಬೇಕು ತಿಪಟೂರು ತಾಲ್ಲೂಕಿಗೆ ನೀವು ಎಷ್ಟು ಮನೆಗಳನ್ನು ಕೊಡುತ್ತೀರೋ, ಅವುಗಳನ್ನು ಆಶ್ರಯ ಸಮಿತಿಗೆ ವಹಿಸಿ. ದಸರೀಘಟ್ಟಕ್ಕೆ 70 ಮನೆ, ಹುಣಸೇಘಟ್ಟಕ್ಕೆ 50 ಮನೆ ಎಂದು ನೀವು ಆದೇಶ ಮಾಡಿದರೆ, ನಾವು ಮಾಡುವುದೇನು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :— ಮಾನ್ಯ ಅಧ್ಯಕ್ಷರೇ, ಮಾನ್ಯ ಉಪ ಮುಖ್ಯಮಂತ್ರಿಗಳು ಬಹಳ ಚೆನ್ನಾಗಿ ಆರ್ಗ್ಯುಮೆಂಟ್ ಮಾಡಿದರು. ಅವರ ಉದ್ದೇಶ ಏನೆಂದರೆ, ಮಳೆ ಬಿದ್ದಲ್ಲಿ ಮಾತ್ರ ಮನೆಗಳನ್ನು ಕೊಟ್ಟಿದ್ದೇವೆಂದು ಹೇಳಿದರು. ಔರಾದ್‌ನಲ್ಲಿ ಮಳೆ ಬಿದ್ದಿಲ್ಲವೇ? ಬರಿ ಹುಮ್ನಾಬಾದ್‌ನಲ್ಲಿ ಬಿದ್ದಿದೆ ಮತ್ತು ಬಸವಕಲ್ಯಾಣದಲ್ಲಿ ಬಿದ್ದಿದೆಯೇ? ಬೇರೆ ತಾಲ್ಲೂಕುಗಳಲ್ಲಿ ಮಳೆ ಬಿದ್ದಿಲ್ಲವೆ? ಹಾಗಾದರೆ ಔರಾದ್‌ಗೆ ಏಕೆ

ಕೊಟ್ಟಿಲ್ಲ. ಔರಾದ್ ತಾಲ್ಲೂಕಿಗೆ ಬರೀ 200 ಮನೆ ಕೊಟ್ಟು, ಇನ್ನೂ ಒಂದು ಮನೆಯನ್ನೂ ಕಟ್ಟಿಲ್ಲ. ಬರೀ ಹುಮ್ನಾಬಾದ್ ಮತ್ತು ಬಸವಕಲ್ಯಾಣ ತಾಲ್ಲೂಕುಗಳಿಗೆ ಕೊಟ್ಟಿದ್ದೀರಿ. ಬೀದರ್‌ಗೆ ಕೊಟ್ಟಿಲ್ಲ, ಔರಾದ್‌ಗೆ ಕೊಟ್ಟಿಲ್ಲ, ಹುಲಸೂರ್‌ಗೆ ಕೊಟ್ಟಿಲ್ಲ ಏಕೆ? ಅಲ್ಲಿ ಮಳೆ ಬಿದ್ದಿಲ್ಲವೇ? ಸರ್ಕಾರದ ರಿಪೋರ್ಟ್ ಇಲ್ಲವೆ? ಅಂದರೆ ತಾರತಮ್ಯ ಆಗಿದೆ. ಈ ತಾರತಮ್ಯ ಆಗಿರುವುದು ಸರಿಪಡಿಸಬೇಕು. ಇದು ಸರಿಯಲ್ಲ. ಮುಂದೆ ಕೊಡುತ್ತೇವೆ ಎಂದು ಹೇಳಿದ್ದಾರೆ. ಆದ್ದರಿಂದ ಈಗ ವಾಪಸ್ಸು ತೆಗೆದುಕೊಂಡು ಮಾಡಿ ಎಂದು ಹೇಳುತ್ತಿದ್ದೇನೆ.

ಶ್ರೀ ಸೈಯದ್ ಜುಲ್ಫೀಕರ್ ಹಶ್ಮಿ:— ಇಡೀ ಬೀದರ್ ಜಿಲ್ಲೆಯಲ್ಲಿ ಮಳೆಯಿಂದ ಹಾನಿಯಾಗಿದೆ. ಇವರು ಏನು ಮಾಡಿದ್ದಾರೆ. ಬಸವಕಲ್ಯಾಣಕ್ಕೆ 300 ಮನೆಗಳು, ಹುಮ್ನಾಬಾದ್‌ಗೆ 300 ಮನೆಗಳನ್ನು ಕೊಟ್ಟಿದ್ದಾರೆ. ಬೀದರ್, ಔರಾದ್, ಹುಲಸೂರು ಮತ್ತು ಬಾಲ್ಕಿಗೆ ಕೊಟ್ಟಿಲ್ಲ. ಏಕೆ ಕೊಟ್ಟಿಲ್ಲ. ಎಂಬುದನ್ನು ಹೇಳಬೇಕು.

ಚೇರ್ಮನ್ (ಶ್ರೀ ಕಾಗೋಡು ತಿಮ್ಮಪ್ಪ) :— ಬೀದರ್ ಜಿಲ್ಲೆಯಲ್ಲಿ ಮಳೆ ಹಾನಿಯಿಂದ ಲುಕ್ಸಾನಾಗಿರತಕ್ಕ ಮನೆಗಳ ಸಂಖ್ಯೆ ಎಷ್ಟು ಎಂಬ ಮಾಹಿತಿ ನಿಮ್ಮ ಹತ್ತಿರ ಇದೆಯೇ?

ಶ್ರೀ ಸೈಯದ್ ಜುಲ್ಫೀಕರ್ ಹಶ್ಮಿ:— ಜಿಲ್ಲಾಧಿಕಾರಿಗಳಿಂದ ಸರ್ಕಾರಕ್ಕೆ ವರದಿ ಬಂದಿದೆ. ನಾವೇಕೆ ಕೊಡಬೇಕು? ಅವರ ಹತ್ತಿರ ರಿಪೋರ್ಟ್ ಇದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :— ರಿಪೋರ್ಟ್ ನಾಳೆ ತಂದುಕೊಡುತ್ತೇವೆ.

ಚೇರ್ಮನ್ (ಶ್ರೀ ಕಾಗೋಡು ತಿಮ್ಮಪ್ಪ) :— ನಿಮ್ಮ ಹತ್ತಿರ ಇದ್ದರೆ ಮಂತ್ರಿಗಳ ಕಡೆ ಕೊಡಿ. ಇಲ್ಲದೇ ಹೋದರೆ, ಅವರೇ ತರಿಸಿಕೊಂಡು ನೋಡುತ್ತಾರೆ. ಬೀದರ್ ಜಿಲ್ಲೆಯಲ್ಲಿ ಮಳೆಯಿಂದ ಹಾನಿಗೊಳಗಾದವರಲ್ಲಿ ಕೆಲವರಿಗೆ ಮಾತ್ರ ಕೊಟ್ಟಿದ್ದಾರೆ, ಬೇರೆಯವರಿಗೆ ಕೊಟ್ಟಿಲ್ಲವೆಂದು ಹೇಳುತ್ತಿದ್ದೀರಿ. ಇಂತಹ ಮನೆಗಳು ಎಷ್ಟಿವೆ ಎಂಬ ಮಾಹಿತಿ ನಿಮ್ಮ ಹತ್ತಿರ ಇದ್ದರೆ ಕೊಡಿ, ಇಲ್ಲದೇ ಹೋದರೆ ಜಿಲ್ಲಾಧಿಕಾರಿಗಳಿಂದ ತರಿಸಿಕೊಳ್ಳುತ್ತಾರೆ.

ಶ್ರೀ ಡಿ.ಆರ್. ಪಾಟೀಲ್ :— ತಾರತಮ್ಯ ಆಗಿದೆ ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಯಾವ ಮಟ್ಟದಲ್ಲಿ ಆಗಿದೆ ಎಂಬುದು ಮುಖ್ಯಮಂತ್ರಿಗಳ ಗಮನಕ್ಕೂ ಬರಲಿ ಎಂದು ಹೇಳುತ್ತೇನೆ. ಗದಗ್ ಕ್ಷೇತ್ರಕ್ಕೆ ಒಂದು ನೂರು ಮನೆಗಳು, ಪಕ್ಷದ ಮುಂಡರಗಿ ಕ್ಷೇತ್ರಕ್ಕೆ ಹನ್ನೊಂದು ನೂರು ಮನೆಗಳು, ರೋಣಕ್ಕೆ 1350 ಮನೆಗಳು ಹೀಗೆ ಕೊಟ್ಟಿದ್ದಾರೆ.

ಆದ್ದರಿಂದ ಯಾವ ಮಟ್ಟದಲ್ಲಿ ತಾರತಮ್ಯವಾಗಿದೆ ಎಂಬುದನ್ನು ನೋಡಲಿ. ನೀವು, ಇದನ್ನು ಸಹಿಸಿಕೊಂಡು ಸುಮ್ಮನಿರಿ ಎಂದು ಹೇಳಿದರೆ, ಕುಳಿತುಕೊಳ್ಳುತ್ತೇವೆ.

ಶ್ರೀ ಜಿ.ಟಿ. ಪಾಟೀಲ್ :— ನಮ್ಮ ಜಿಲ್ಲೆಯಲ್ಲಿ ಮೂರು ವರ್ಷದ ಇತಿಹಾಸದಲ್ಲಿ ಅತಿ ಹೆಚ್ಚು ಮಳೆಯಾಗಿದೆ. ದುರ್ದೈವ ಏನೆಂದರೆ, ಇದರಲ್ಲಿ 7 ತಾಲ್ಲೂಕುಗಳು ಬರುತ್ತವೆ. ಇಡೀ 7 ತಾಲ್ಲೂಕುಗಳಿಗೆ ಕೇವಲ 200 ಮನೆಗಳನ್ನು ಕೊಟ್ಟಿದ್ದೀರಿ. ಜಿಲ್ಲೆಗೆ ಹದಿನಾಲ್ಕು ನೂರು ಮನೆಕೊಟ್ಟಿದ್ದಾರೆ. ಇಷ್ಟು ಮಳೆ ಬಿದ್ದಿದ್ದು, ಇವರಿಗೆ ಜಿಲ್ಲಾಧಿಕಾರಿಗಳಿಂದ ವರದಿ ಬಂದಿಲ್ಲವೇ ಅಥವಾ ವಸತಿ ಸಚಿವರ ಗಮನದಲ್ಲಿ ಬಾಗಲಕೋಟೆ ಜಿಲ್ಲೆ ಇದೆಯೋ ಅಥವಾ ಇಲ್ಲವೋ? ಇದರ ಬಗ್ಗೆ ದಯಮಾಡಿ ಕ್ಲಾರಿಫಿಕೇಷನ್ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ರೇವುನಾಯಕ್ ಬೆಳಮಗಿ :— ನಮ್ಮ ಕಮಲಾಪುರ ಕ್ಷೇತ್ರ ಬಹಳ ಹಿಂದುಳಿದ ಕ್ಷೇತ್ರವಾಗಿದೆ. ಆದರೆ, ಅತಿವೃಷ್ಟಿಯಿಂದ ಈ ಕ್ಷೇತ್ರದಲ್ಲಿ ಬಹಳ ಮನೆಗಳು ಬಿದ್ದಿವೆ. ಉಪಮುಖ್ಯಮಂತ್ರಿಗಳು, ಎಲ್ಲಿ ಮಳೆ ಹೆಚ್ಚಾಗಿದೆ ಅಂತಹ ಕಡೆಗಳಲ್ಲಿ ಹೆಚ್ಚು ಮನೆಗಳನ್ನು ಕೊಟ್ಟಿದ್ದೇವೆಂದು ಹೇಳಿದರು. ಮತ್ತೆ ಸಂಬಂಧಪಟ್ಟ ಸಚಿವರು ಹೆಚ್ಚಿನ ಮಳೆಯಿಂದ ಎಲ್ಲಿ ಮನೆಗಳು ಬಿದ್ದಿವೆ ಅಂತಹ ಕಡೆಗಳಲ್ಲಿ ಹೆಚ್ಚು ಮನೆಗಳನ್ನು ಕೊಟ್ಟಿದೆ ಎಂದು ಹೇಳಿದರು. ಆದರೆ, ನಮ್ಮ ಕಮಲಾಪುರ ಕ್ಷೇತ್ರದಲ್ಲಿ ಹೆಚ್ಚಿನ ಮನೆಗಳು ಬಿದ್ದಿವೆ. ಆದರೆ, ಈ ಕ್ಷೇತ್ರಕ್ಕೆ ಮನೆಗಳನ್ನು ಕೊಟ್ಟಿಲ್ಲ. ನಮ್ಮ ಜನ ಕೇಳುತ್ತಿದ್ದಾರೆ, ನನಗೆ ಬಹಳ ನೋವಾಗಿದೆ. ಇದರ ಬಗ್ಗೆ ಯಾವರೀತಿಯಲ್ಲಿ ಸರಿಪಡಿಸುತ್ತೀರೋ ಅದು ನಿಮಗೆ ಬಿಟ್ಟ ವಿಷಯ. ಆದರೆ, ಕಮಲಾಪುರ ಅತ್ಯಂತ ಹಿಂದುಳಿದ ಕ್ಷೇತ್ರ ಹಾಗೂ ಮೀಸಲು ಕ್ಷೇತ್ರ. ಬಹಳಷ್ಟು ಮನೆಗಳು ಬಿದ್ದಿವೆ. ಇದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಕೈಜೋಡಿಸಿ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ನಮ್ಮ ಕ್ಷೇತ್ರಕ್ಕೆ ಹೆಚ್ಚಿನ ಮನೆಗಳನ್ನು ಕೊಡಬೇಕೆಂದು ಕಳಕಳಿಯಿಂದ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

(ಸನ್ಮಾನ್ಯ ಅಧ್ಯಕ್ಷರು ಶ್ರೀ ರಮೇಶ್ ಕುಮಾರ್‌ರವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು.)

ಅಧ್ಯಕ್ಷರು :— ಈ ವಿಚಾರವನ್ನು ಪ್ರಮುಖವಾಗಿ ಮಾನ್ಯ ವಿರೋಧಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದಾರೆ. ನಿಲುವಳಿ ಸೂಚನೆ ಮೂಲಕ ತೆಗೆದುಕೊಳ್ಳಬೇಕೆಂದು ಹೇಳಿ, ಅವರು ಅಪೇಕ್ಷಿಸಪಟ್ಟಿದ್ದರು. ವಿಷಯದ ಗಾಂಭೀರ್ಯತೆಯನ್ನು ನಾನು ಮನಸ್ಸಿನಲ್ಲಿಟ್ಟುಕೊಂಡು ಈ ದಿವಸವೇ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಹೇಳಿ, ನಾನು ಬೇರೆನಿಯಮದಡಿಯಲ್ಲಿ ಚರ್ಚೆಗೆ ಅವಕಾಶ ಕೊಟ್ಟಿದ್ದೇನೆ. ಈಗ ಅವರು ಹೇಳಬೇಕಾದುದನ್ನೆಲ್ಲಾ ಹೇಳಿದ್ದಾರೆ, ಸರ್ಕಾರದ ಪರವಾಗಿ ಸಚಿವರೂ ಕೂಡ ಉತ್ತರವನ್ನು ಕೊಟ್ಟಿದ್ದಾರೆ.

ನಿರಂತರವಾಗಿ ಎಲ್ಲರೂ ಕೈ ಎತ್ತಿ, ಅವರವರ ಕ್ಷೇತ್ರದ ಬಗ್ಗೆ ಕೇಳುತ್ತಾ ಹೋದರೆ ಬಹಳಷ್ಟು ಕಾಲ ಬೇಕಾಗುತ್ತದೆ. ಆದ್ದರಿಂದ ಈ ಚರ್ಚೆ ಎಷ್ಟು ಹೊತ್ತಿನವರೆಗೆ ನಡೆಯಬೇಕು. ಇದರ ಜೊತೆಗೆ ಇನ್ನೊಂದು ಪ್ರಮುಖವಾದ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಬೇಕು. ಅವರಿಗೆ ನಾನು ಮಾತು ಕೊಟ್ಟೆ. ಈಶ್ವರಪ್ಪನವರು ಮತ್ತು ಯಡಿಯೂರಪ್ಪನವರು ಕಾಯುತ್ತಾ ಕುಳಿತಿದ್ದಾರೆ. ಎಲ್ಲೋ ಒಂದು ಕಡೆ ಇದನ್ನು ಕೊನೆಗಾಣಿಸಬೇಕಲ್ಲಾ. Each one of us will have problems... ಲೀಡರ್ಸ್‌ನ್ನು ಕರೆದು, ಮಾತನಾಡಿ ಎಂಬ ಮುಖ್ಯ ಉದ್ದೇಶವೇ ನಿಮ್ಮ ಎಲ್ಲರ ಅಭಿಪ್ರಾಯವನ್ನು ಅವರು ಕ್ರೋಢೀಕರಿಸಿ, ಮಾತನಾಡುತ್ತಾರೆ ಎಂಬ ಉದ್ದೇಶದಿಂದ. ಅವರು ಕ್ರೋಢೀಕರಿಸಿ ಮಾತನಾಡಿದ ಮೇಲೆ, ಮತ್ತೆ ಒಬ್ಬೊಬ್ಬರೂ ಮಾತನಾಡುವುದಾದರೆ ಲೀಡರ್ ಏಕಿರಬೇಕು? ದಯಮಾಡಿ ಸಹಕರಿಸಿ. We are trying to put an end to this issue. Let the Government reply This cannot be an endless debate.. ತಾವು ಅಂತಿಮವಾಗಿ ಏನಾದರೂ ಹೇಳುವುದಿದ್ದರೆ ಹೇಳಿ.

ಶ್ರೀ ಬಿ. ನಂಜಾಮರಿ (ತಿಪಟೂರು) :— ಸನ್ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ 5 ಗ್ರಾಮ ಪಂಚಾಯ್ತಿಗೆ ಮಾತ್ರ ಕೊಟ್ಟಿದ್ದಾರೆ. ಒಂದೊಂದು ಗ್ರಾಮ ಪಂಚಾಯ್ತಿಗೂ ಲೆಟರ್ ಕೊಟ್ಟಿದ್ದಾರೆಂದು ಹೇಳಿದರು. ಆದರೆ, ನಾನು ಯಾವುದೇ ಗ್ರಾಮ ಪಂಚಾಯ್ತಿಗೂ ಲೆಟರ್ ಕೊಟ್ಟಿಲ್ಲ. ಒಂದೊಂದು ಗ್ರಾಮ ಪಂಚಾಯ್ತಿಗೆ 75 ಕೊಟ್ಟು, 20-20 ರಂತೆ ಮೂರು ಗ್ರಾಮ ಪಂಚಾಯ್ತಿಗೆ ಕೊಟ್ಟಿದ್ದಾರೆ. ನಮ್ಮ ಕ್ಷೇತ್ರದಲ್ಲಿ ಬಹಳ ತಾರತಮ್ಯವಾಗಿರುತ್ತದೆ, ಇದನ್ನು ದಯವಿಟ್ಟು ಸರಿಪಡಿಸಿಕೊಡಬೇಕು ಮತ್ತು ಸಮಭಾಗವಾಗಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಾವು ಈ ವಿಷಯವನ್ನು ಪಕ್ಷಾತೀತವಾಗಿ ಪ್ರಸ್ತಾಪ ಮಾಡಿದ್ದೇವೆ. ರಾಜಕೀಯ ಮಾಡಬೇಕೆಂಬ ಉದ್ದೇಶದಿಂದ ಯಾರೂ ಕೂಡ ಇದನ್ನು ಪ್ರಸ್ತಾಪ ಮಾಡಿಲ್ಲ. ಆ ಕಡೆ ಇರತಕ್ಕ ಶಾಸಕರನ್ನು ಪರೋಕ್ಷವಾಗಿ ತಮ್ಮ ಆಫೀಸಿಗೆ ಕರೆದು ಬೇಕಾದರೆ ಕೇಳಿ. ಅವರಿಗೆ ನ್ಯಾಯ ಸಿಕ್ಕಿದೆಯೇ? ಈ ಕಡೆಯವರಿಗಿಂತಲೂ ಹೆಚ್ಚಿನ ರೀತಿಯಲ್ಲಿ ಅನ್ಯಾಯವಾಗಿರುತ್ತದೆ. ಇದನ್ನು ಸರಿಪಡಿಸಬೇಕೆಂದರೆ ಒಂದೇ ದಾರಿ, ಪುನಃ ಎಲ್ಲವನ್ನೂ ರೀ-ಡಿಸ್ಟ್ರಿಬ್ಯೂಟ್ ಮಾಡಬೇಕು. ಮಳೆಯಿಂದ ಬಿದ್ದು ಹೋದ ಕಡೆಗಳಲ್ಲಿ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಅಲ್ಲಿ ನಾವು ಕೊಡಬೇಕಾಗುತ್ತದೆ ನೀವು ಅದಕ್ಕಾಗಿ ಆ 10 ಸಾವಿರ ಮನೆಗಳನ್ನು ಕೊಡಿ. ಆದರೆ, ನೀವು ಎಲ್ಲಿ 90 ಸಾವಿರ ಮನೆಗಳ ಬಗ್ಗೆ ತಾರತಮ್ಯ ಮಾಡಿದ್ದೀರಿ, ಇವುಗಳನ್ನು ಪುನಃ ರೀ-ಡಿಸ್ಟ್ರಿಬ್ಯೂಟ್ ಮಾಡಿ ಪ್ರತಿಯೊಬ್ಬ ಶಾಸಕರಿಗೂ ಸರಿಸಮಾನವಾಗಿ ಹಂಚಬೇಕು. ಎರಡನೆಯದು ಮಾನ್ಯ ಮಂತ್ರಿಗಳು, ತಾಲ್ಲೂಕುವಾರು, ಹೋಬಳಿವಾರು, ವಿಲೇಜ್ ವಾರು ಇಂಡಿವಿಜುಯಲ್ ಬೆನಿಫಿಷಿಯರಿ ಹೆಸರು ಬರೆದು ಏನು ಕಳುಹಿಸುತ್ತಾರೆ,

ಅದು ಸರಿಯಲ್ಲ. ಅವರು ಹೇಳಬಹುದು, ಆ ಕಮಿಟಿಯಲ್ಲಿ ಇಟ್ಟು, ಅರ್ಹರು ಇದ್ದರೆ ಮಾಡಲಿ, ಇಲ್ಲದೇ ಹೋದರೆ ಬಿಡಲಿ ಎಂದು. ಮಂತ್ರಿಗಳಿಂದ ಯಾವುದೇ ಒಂದು ಆದೇಶ ಹೋದ ಮೇಲೆ, naturally they bound by that. ಇನ್‌ಫ್ಲುಯೆನ್ಸ್ ಆಗುತ್ತದೆ. ಆ ಸದಸ್ಯರನ್ನು ಅಪಾಯಿಂಟ್ ಮಾಡುವವರೇ ನೀವು. ನ್ಯಾಚುರಲಿ ಅವರೇನು ನಿಮ್ಮ ವಿರುದ್ಧ ತೆಗೆದುಕೊಳ್ಳುತ್ತಾರೆಯೇ ಅಥವಾ ಅವರಿಗೇನು ಸ್ಟ್ಯಾಚುಟರಿ ಪವರ್ಸ್ ಇದೆಯೇ? ಅದಕ್ಕಾಗಿ ದಯವಿಟ್ಟು ನೀವು ನೇರವಾಗಿ ಲೆಟರ್‌ಗಳನ್ನು ಕೊಟ್ಟು ಹಂಚುವುದನ್ನು ಮಾಡಬೇಡಿ. ಒಂದು ಹೋಬಳಿಯಲ್ಲಿ, ಅಂದರೆ ಚನ್ನರಾಯಪಟ್ಟಣ ಹೋಬಳಿಯಲ್ಲಿ 2,600 ಮನೆಗಳು.

ಶ್ರೀ ಹೆಚ್.ಡಿ. ರೇವಣ್ಣ :— ಅಷ್ಟಕ್ಕೆ ಆದೇಶಕೊಟ್ಟಿದ್ದರೆ, ನಾನು 5 ನಿಮಿಷ ಈ ಜಾಗದಲ್ಲಿ ಇರುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಹಾಗಾದರೆ ಒಂದು ಹೋಬಳಿಗೆ ಎಷ್ಟು ಕೊಟ್ಟಿದ್ದೀರಿ ಎಂಬುದನ್ನು ಹೇಳಿ.

ಶ್ರೀ ಸಿ.ಎಸ್. ಪುಟ್ಟೇಗೌಡ :— ಯಾವ ಹೋಬಳಿಗೂ 2,600 ಮನೆಗಳನ್ನು ಕೊಟ್ಟಿಲ್ಲ.

ಶ್ರೀಮಲ್ಲಿಕಾರ್ಜುನ ಖರ್ಗೆ :— ನೀವು ಇಂಡಿವಿಜುಯಲ್ ಲೆಟರ್ಸ್ ಕೊಟ್ಟಿದ್ದೀರಿ. ಅದಕ್ಕಾಗಿ ನಾನು ಹೇಳತಕ್ಕಂತಾದ್ದು, ಈ ರೀತಿಯಾಗಿ ಇಚ್ಛೆಬಂದಂತೆ, ತಾವು ಆದೇಶ ಕೊಡುತ್ತಾ ಹೋದರೆ, ಇದು ತೊಗಲಕ್ ದರ್ಬಾರು ಆಗುತ್ತದೆ. ದಯವಿಟ್ಟು ಇದನ್ನು ತಾವು ನಿಲ್ಲಿಸಬೇಕು. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಯೇ ಇದ್ದಾರೆ. ಇದನ್ನು ಸರಿಪಡಿಸುತ್ತೇವೆಂದು ಹೇಳಿದರೆ, ನಮ್ಮದೇನೂ ಅಭ್ಯಂತರವಿಲ್ಲ, ನಾವು ಒಪ್ಪಿಕೊಳ್ಳುತ್ತೇವೆ. ಬೇಕಾದರೆ ಒಂದೆರಡು ದಿವಸ ಟೈಮ್ ತೆಗೆದುಕೊಳ್ಳಲಿ. ಇದನ್ನು ಮಾಡುವುದಕ್ಕಾಗುವುದಿಲ್ಲ ಮುಂದೆ ನೋಡೋಣ ಎಂದು ಹೇಳುವುದಾದರೆ ಅನಿವಾರ್ಯವಾಗಿ ನಾವು ಧರಣಿ ಹೂಡಬೇಕಾಗುತ್ತದೆ ಕುಳಿತುಬಿಡುತ್ತೇವೆ.

ಶ್ರೀ ವಿ. ಮುನಿಯಪ್ಪ :— ಮಳೆ ಎಲ್ಲೆಲ್ಲಿ ಆಗಿ ಮನೆ ನಾಶವಾಗಿದೆ ಅಲ್ಲಿಗೆ ಕೊಟ್ಟಿದ್ದೇವೆ, ಕೋಲಾರದಲ್ಲಿ ಆ ರೀತಿ ಆಗಿಲ್ಲವೆಂದು ಮಾಹಿತಿ ಕೊಟ್ಟಿದ್ದೀರಿ. ಆದರೆ ನಾನು ಕೋಲಾರದ ಮಾಹಿತಿಯನ್ನು ತರಿಸಿದ್ದೇನೆ, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಕೆ.ಜಿ.ಎಫ್.ಗಳಿಗೆ ಇನ್ನೂರು ಇನ್ನೂರು ಮನೆಗಳನ್ನು ಕೊಟ್ಟಿದ್ದಾರೆ. ಉಳಿದ ಕಡೆಗಳಲ್ಲಿ ಸಾವಿರದ ನೂರು ಮನೆಗಳನ್ನು ಕೊಟ್ಟಿದ್ದಾರೆ. ದಯಮಾಡಿ ಈ ತಾರತಮ್ಯವನ್ನು ಸರಿಪಡಿಸಬೇಕು.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಯವರು) :— ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ತಂದಿರತಕ್ಕಂಥ ಪ್ರಶ್ನೆಯ ಬಗ್ಗೆ ಸುದೀರ್ಘವಾಗಿ ಸಂಬಂಧಪಟ್ಟ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಅವರು ದುರುದ್ದೇಶದಿಂದ,

ರಾಜಕೀಯದಿಂದ, ತಾರತಮ್ಯ ಮಾಡಬೇಕು ಎಂದು ಖಂಡಿತವಾಗಿ ಮಾಡಿಲ್ಲ, ಅವರು ಮಾಡಿರುವ ಆದೇಶಗಳಿಂದಲೇ ಇದು ಸ್ಪಷ್ಟವಾಗಿ ಗೊತ್ತಾಗುತ್ತದೆ. 175 ತಾಲ್ಲೂಕುಗಳಿಗೆ ಇನ್ನೂರು ಇನ್ನೂರು ಮನೆಗಳನ್ನು ಕೊಟ್ಟರೆ ಇದರಲ್ಲಿ ರಾಜಕೀಯ ಮಾಡುವ ವಿಚಾರವೇನಿದೆ?

ಶ್ರೀ ಕಾಗೋಡುತಿಮ್ಮಪ್ಪ :— ಮಾನ್ಯ ಅಧ್ಯಕ್ಷರೆ. ತಾವು ಶಾಸನಸಭಾವಾರು ಎಂದಾದರೂ ಹೇಳಿ ಇಲ್ಲದಿದ್ದರೆ ತಾಲ್ಲೂಕುವಾರು ಎಂದಾದರೂ ಹೇಳಿ. ತಮ್ಮ ಸರಿಯಾದ ನಿಲುವೇನು ಎಂಬ ಬಗ್ಗೆ ಸ್ಪಷ್ಟವಾಗಿ ಹೇಳಿ.

ಶ್ರೀ ಸಿದ್ಧರಾಮಯ್ಯ :— ತಾಲ್ಲೂಕುವಾರು ಮನೆಗಳನ್ನು ಕೊಟ್ಟಿರುವುದು, ಕೆಲವು ಕಡೆ ಕಡಿಮೆಯಾಗಿದೆ, ಅದನ್ನು ಸರಿಪಡಿಸಬೇಕು ಎಂಬ ಬಗ್ಗೆ ಸರ್ಕಾರದ ಗಮನಕ್ಕೆ ತಂದಿದ್ದೀರಿ. ಅದನ್ನು ಸರಿಪಡಿಸುವ ನಿಟ್ಟಿನಲ್ಲಿ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇನೆ, ಇದರ ಬಗ್ಗೆ ಮುಖ್ಯಮಂತ್ರಿಯವರ ಜೊತೆಗೂ ಚರ್ಚೆ ಮಾಡಿದ್ದೇನೆ, ಕ್ಯಾಬಿನೇಟ್ ಮುಂದೆ ಈ ವಿಚಾರವನ್ನು ತರುತ್ತಿದ್ದೇನೆ, ಎಲ್ಲೆಲ್ಲಿ ಅಗತ್ಯವಿದೆ ಅದನ್ನು ಮಾಡುವುದಾಗಿ ಸಂಬಂಧಪಟ್ಟ ಸಚಿವರು ಈಗಾಗಲೇ ಹೇಳಿದ್ದಾರೆ. ಹಾಗೆ ಹೇಳಿದ ಮೇಲೆ ಈಗಾಗಲೇ ಮನೆಗಳನ್ನು ಹಂಚಿಕೆ ಮಾಡಿ ಹೊರಡಿಸಿರುವ ಆದೇಶವನ್ನು ವಾಪಸ್ ತೆಗೆದುಕೊಳ್ಳಲು ಈ ಹಂತದಲ್ಲಿ ಸಾಧ್ಯವಾಗುವುದಿಲ್ಲ. ಏಕೆಂದರೆ, ಕೆಲವು ಕಡೆಗಳಲ್ಲಿ ಈಗಾಗಲೇ ಗ್ರಾಮಸಭೆಗಳು ನಡೆದಿವೆ, ಕೆಲವು ಕಡೆಗಳಲ್ಲಿ ಆಶ್ರಯ ಸಮಿತಿಯ ಸಭೆಗಳು ಆಗಿದೆ. ಮನೆಗಳೆಲ್ಲಾ ಹಂಚಾಗಿದೆ, ಯಾರ್ಯಾರು ಫಲಾನುಭವಿಗಳು ಎಂದು ತಾಲ್ಲೂಕು ಪಂಚಾಯಿತಿಯಿಂದ ಪಟ್ಟಿಗಳು ಹೊರಟುಹೋಗಿದೆ. ಈ ಹಂತದಲ್ಲಿ ಈಗ ಮಾಡಿರುವ ಆಜ್ಞೆಯನ್ನು ವಾಪಸ್ ತೆಗೆದುಕೊಳ್ಳಲು ಪ್ರಾಕ್ಟಿಕಲ್‌ಆಗಿ ಸಾಧ್ಯವಾಗುವುದಿಲ್ಲ. ಇದರಲ್ಲಾಗುವ ವ್ಯತ್ಯಾಸವನ್ನು ಸರಿಪಡಿಸಲು ಕ್ರಮ ತೆಗೆದುಕೊಳ್ಳುತ್ತೇವೆ. ಹಿಂದಿನ ಮೂರು ವರ್ಷಗಳಲ್ಲಿ ನಾವೇನು ಎರಡು ಲಕ್ಷದ

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು):— ಮಾನ್ಯ ಅಧ್ಯಕ್ಷರೆ, ಒತ್ತಾಯ ಮಾಡುವುದು, ಬಿಡುವುದು ಬೇರೆ ವಿಚಾರ. ಮನೆಗಳ ಹಂಚಿಕೆ ಮಾಡುವಾಗ ತಾರಾತಮ್ಯವಾಗಿಲ್ಲವೆಂದು ತಾವು ಹೇಳುವುದಾದರೆ ಇದರ ಬಗ್ಗೆ ಮಾಡಿರುವ ಎಲ್ಲಾ ಜಿ.ಓ.ಗಳನ್ನು ತಾವು ನೋಡಿದರೆ ತಾರಾತಮ್ಯವಾಗಿರುವುದು ಸ್ಪಷ್ಟವಾಗುತ್ತದೆ. ತಾವು 200 ಮನೆಗಳನ್ನು ಕೊಟ್ಟಿದ್ದು ತಾಲ್ಲೂಕುವಾರು. ಒಂದೊಂದು ತಾಲ್ಲೂಕುಗಳಲ್ಲಿ ಒಬ್ಬರು ಶಾಸಕರು, ಮತ್ತೆ ಕೆಲವು ತಾಲ್ಲೂಕುಗಳಲ್ಲಿ ಎರಡು ಮೂರು ಜನ ಶಾಸಕರು ಇದ್ದಂಥ ಪ್ರಸಂಗಗಳು ಇದೆ. ತಮಗೆ ಬೇಕಾದಂಥವರಿಗೆ ಕೊಟ್ಟಿದ್ದಾರೆ. ಮಳೆಯಿಂದ ತಾಲ್ಲೂಕುವಾರು ಮನೆಗಳನ್ನೇನು ಕಳೆದುಕೊಂಡಿದ್ದಾರೆ, ಅಂಥ ಕಡೆಗಳಲ್ಲೂ ತಾರತಮ್ಯ

ಮಾಡಿದ್ದಾರೆ. ಬೀದರ್‌ನಲ್ಲಿ ಎರಡು, ಗುಲ್ಬರ್ಗಾದಲ್ಲಿ ನಾಲ್ಕು ಈ ರೀತಿ ಎಲ್ಲೆಲ್ಲಿ ಅವರಿಗೆ ಬೇಕೋ ಆ ರೀತಿ ಮಾಡಿದ್ದಾರೆ. ಆದ್ದರಿಂದ ತಾವು ಹೆಚ್ಚುವರಿ ಮನೆಗಳನ್ನು ಕೊಟ್ಟು ರಾಜ್ಯಪಾಲರ ಭಾಷಣದ ಮೇಲೆ ಉತ್ತರ ಕೊಡುವಾಗ ಇದರ ಬಗ್ಗೆ ಹೇಳಿದರೆ ಸಾಕು. ಸೆಗ್‌ಮೆಂಟ್ ವೈಸ್ ಎಷ್ಟು ತಾರತಮ್ಯವಾಗಿದೆ ಅದನ್ನು ಸರಿಪಡಿಸಿಕೊಡುವ ಬಗ್ಗೆ ಹೇಳಬೇಕು. ಇಲ್ಲದಿದ್ದರೆ ಇರತಕ್ಕ ಮನೆಗಳಲ್ಲೇ ಸರಿಸಮಾನವಾಗಿ ಹಂಚಿಕೊಡುತ್ತೇವೆಂದಾದರೂ ಹೇಳಬೇಕು. ಇವೆರಡರಲ್ಲಿ ಒಂದನ್ನಾದರೂ ಹೇಳಿದರೆ ನಮಗೆ ಸಮಾಧಾನವಾಗುತ್ತದೆ. ಅದನ್ನು ಬಿಟ್ಟು ಮುಂದೆ ನೋಡೋಣವೆಂದರೆ ಸರಿಯಾಗುವುದಿಲ್ಲ. ಅದು ಸರಿಯಾದಂಥ ಉತ್ತರವೂ ಆಗುವುದಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು):— ಮಾನ್ಯ ಅಧ್ಯಕ್ಷರೇ, ಈ ಯೋಜನೆಯಲ್ಲಿ ಎಲ್ಲಾ 175 ತಾಲ್ಲೂಕುಗಳಿಗೂ ಪಕ್ಷ ಬೇದವಿಲ್ಲದೆ 200 ಮನೆಗಳು ಹೋಗಿದೆ. ಎರಡನೇ ಆದೇಶದಲ್ಲಿ ಕೆಲವು ತಾಲ್ಲೂಕುಗಳಿಗೆ 250-300 ಮನೆಗಳನ್ನು ಕೊಡುವುದರಲ್ಲಿ ಕೆಲವು ಕ್ಷೇತ್ರಗಳು ಬಿಟ್ಟುಹೋಗಿದೆಯೆಂದು ನಮ್ಮ ಗಮನಕ್ಕೆ ತಂದಿದ್ದೀರಿ. ಇದರ ಬಗ್ಗೆ ನಾನು ಈಗಾಗಲೇ ಮುಖ್ಯಮಂತ್ರಿಯವರ ಗಮನಕ್ಕೆ ತಂದಿದ್ದೇನೆ. ಅರವತ್ತು ವಿಧಾನಸಭಾ ಕ್ಷೇತ್ರಗಳಿಗೆ ಏನು ಮುನ್ನೂರು ಮನೆಗಳನ್ನು ಕೊಟ್ಟಿಲ್ಲ ಅದನ್ನು ಕೊಡಲು ಮುಖ್ಯಮಂತ್ರಿಯವರಿಂದ ಈಗಾಗಲೇ ಅನುಮತಿಯನ್ನು ತೆಗೆದುಕೊಂಡಿದ್ದೇನೆ. ಮುಂದಿನ ಸಚಿವ ಸಂಪುಟದ ಸಭೆಯಲ್ಲಿ ಇದರ ಬಗ್ಗೆ ನಿರ್ಣಯವಾದ ಮೇಲೆ ಆ ವಿಧಾನಸಭಾ ಕ್ಷೇತ್ರಗಳಿಗೆ ಮುನ್ನೂರು ಮನೆಗಳೇನು ಕಡಿಮೆಯಾಗಿದೆ ಅದನ್ನು ಕೊಡಿಸಿಕೊಡುತ್ತೇನೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:— ಮಾನ್ಯ ಅಧ್ಯಕ್ಷರೆ, ತಾವು ಸಭೆಯಲ್ಲಿ ಇಲ್ಲದಿದ್ದಾಗ ಒಂದು ಸಂಗತಿಯನ್ನು ಹೇಳಿದ್ದೆ. ನಮ್ಮ ಕ್ಷೇತ್ರಕ್ಕೂ ಮತ್ತೊಂದು ಕ್ಷೇತ್ರಕ್ಕೂ ಐವತ್ತು ಮನೆಗಳು ವ್ಯತ್ಯಾಸವಾಗಿದ್ದರೆ ಅದನ್ನು ಸರಿಪಡಿಸುವುದಾಗಿ ಸಚಿವರು ಒಪ್ಪಿಕೊಂಡಿದ್ದಾರೆ. ಇಡೀ ರಾಜ್ಯದಲ್ಲಿ ಅತಿವೃಷ್ಟಿಯಿಂದ ನೊಂದಂಥ ಪ್ರದೇಶಗಳಿಗೆ ನಾವು ಹೋಗಿ ಅನಂತರ ತಮ್ಮನ್ನು ಭೇಟಿಮಾಡಿ ಮನವಿಯೊಂದನ್ನು ಕೊಟ್ಟಿದ್ದೆವು. ತಮ್ಮ ವರದಿಯ ಅನುಸಾರವೇ ಸುಮಾರು ಒಂದು ಲಕ್ಷ ಮನೆಗಳು ಅತಿವೃಷ್ಟಿಯಿಂದ ನೆಲಸಮವಾದವು ಎಂದು ಕೇಂದ್ರಕ್ಕೆ ತಾವು ವರದಿಯನ್ನು ಕೊಟ್ಟಿದ್ದೀರಿ. ಈ ರೀತಿ ಅತಿವೃಷ್ಟಿಯಿಂದ ನಾಶವಾದ ಮನೆಗಳಿಗೆ ಹತ್ತು ಸಾವಿರ ಮನೆಗಳನ್ನು ಕೊಡುವುದಾಗಿ ತಾವು ಹೇಳಿದ್ದೀರಿ. ತಾವು ಬೇಕಾದರೆ ವರದಿಯನ್ನು ತರಿಸಿ ನೋಡಿ, ಸುಮಾರು ಅರವತ್ತರಿಂದ ಎಪ್ಪತ್ತು ಸಾವಿರ ಜನರು ಮನೆ ಇಲ್ಲದೆ ರಸ್ತೆಯಲ್ಲಿ ಇರಬೇಕಾಗಿದೆ. ನಮಗೆ ಕೊಟ್ಟಿರುವ ಐವತ್ತು ಮನೆಗಳನ್ನು ತಾವು ಬೇಕಾದರೆ ವಾಪಸ್ ತೆಗೆದುಕೊಳ್ಳಿ. ಆದರೆ ಯಾವ ಮನೆ ಅತಿವೃಷ್ಟಿಯಿಂದ ಪೂರ್ಣವಾಗಿ ನಾಶವಾಗಿದೆ ಅವರಿಗೆ ಕೂಡಲೇ

ವ್ಯವಸ್ಥೆ ಮಾಡಿಕೊಡುತ್ತೇವೆ ಎಂಬ ಭರವಸೆಯನ್ನು ತಾವು ಕೊಡಬೇಕು. ಮಾನವೀಯತೆಯ ದೃಷ್ಟಿಯಿಂದ ನಾವು ಈ ಕೆಲಸ ಮಾಡಬೇಕಾಗಿದೆ. ಕೇಂದ್ರ, ರಾಜ್ಯ ಯಾವುದಾದರು ಹಣವನ್ನು ಬೇಕಾದರೆ ಇದರಲ್ಲಿ ತೊಡಗಿಸಿ. ಬೆಳೆನಾಶವಾದವರಿಗೆ ಹೆಚ್ಚಿನ ಪರಿಹಾರವನ್ನು ತಾವು ಕೊಡಲಿಲ್ಲ. ಅದನ್ನು ಇಲ್ಲಿ ಬರೆಸುವುದಕ್ಕೆ ಹೋಗುವುದು ಬೇಡ. ಮನೆಗಳ ಬಗ್ಗೆ ಚರ್ಚೆಯಾಗಿರುವ ಈ ಸಂದರ್ಭದಲ್ಲಿ ತಮ್ಮ ಕಂದಾಯ ಅಧಿಕಾರಿಗಳಿಂದ ಅತಿವೃಷ್ಟಿಯಿಂದ ಒಂದು ಲಕ್ಷ ಮನೆಗಳು ನೆಲಸಮವಾಗಿದೆ ಎಂಬ ವಿಷಯ ತಮಗೆ ಮನದಟ್ಟಾಗಿದ್ದರೆ ಅಂಥ ವರ್ಗದವರಿಗೆ ದಯಮಾಡಿ ಮನೆಗಳನ್ನು ಕಟ್ಟಿಸಿಕೊಡುವ ಬಗ್ಗೆ ಏನಾದರೂ ಮಾಡುತ್ತೇವೆ ಎಂಬ ಬಗ್ಗೆ ಆಶ್ವಾಸನೆಯನ್ನು ಕೊಡಬೇಕು.

ಶ್ರೀ ಹೆಚ್.ಡಿ. ರೇವಣ್ಣ:— ಮಾನ್ಯ ಅಧ್ಯಕ್ಷರೆ, ಮುನ್ನೂರು ಮನೆಗಳನ್ನು ಕೊಡುವಲ್ಲಿ ಯಾವ ವಿಧಾನಸಭಾ ಕ್ಷೇತ್ರ ಬಿಟ್ಟುಹೋಗಿದೆ ಅಲ್ಲಿಗೆ ಮುನ್ನೂರು ಮನೆಗಳನ್ನು ಕೊಡಿಸಿಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ತಾವು ಎಲ್ಲಿ ಅತಿವೃಷ್ಟಿಯಿಂದ ಮನೆಗಳನ್ನು ಕಳೆದುಕೊಂಡಿದ್ದಾರೆ ಅಲ್ಲಿ ಸಾವಿರ ಮನೆಗಳನ್ನು ಕೊಟ್ಟರಿ. ಎಲ್ಲರಿಗೂ ಸಾವಿರ ಮನೆಗಳನ್ನು ಕೊಡಿಯೆಂದು ಕೇಳುತ್ತಿಲ್ಲ. ಆದರೆ ಸರಾಸರಿ ಎಲ್ಲರಿಗೆ 400-500 ಮನೆಗಳು ಏನು ಬರುತ್ತದೆ, ಅದನ್ನು ಸರಿಸಮನಾಗಿ ಕ್ಷೇತ್ರವಾರು ಹಂಚಬೇಕು.

ಶ್ರೀ ಹೆಚ್.ಡಿ. ರೇವಣ್ಣ:— ವಿಧಾನಸಭಾ ಕ್ಷೇತ್ರವಾರು ಮುನ್ನೂರು ಮನೆಗಳನ್ನು ಕೊಡಿಸಿಕೊಡುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಯವರು) :— ಮಾನ್ಯ ಅಧ್ಯಕ್ಷರೆ, ಮಾನ್ಯ ವಸತಿ ಸಚಿವರು ಕೊಟ್ಟಿರುವ ಉತ್ತರದಿಂದ ಅವರಿಗೆ ಸಮಾಧಾನವಾಗದಿದ್ದರೆ, ಮೊದಲು ವಾರ್ಷಿಕ ಅಲಾಟ್‌ಮೆಂಟ್ ಏನಿತ್ತು ಅದರ ಪ್ರಕಾರ ಕೊಟ್ಟಿದ್ದಾರೆ, ಎರಡನೆಯದಾಗಿ ತಾಲ್ಲೂಕುವಾರು ಕೊಟ್ಟಿದ್ದೇವೆ, ಮೂರನೆಯದನ್ನು ಕ್ಷೇತ್ರವಾರು ಕೊಟ್ಟಿದ್ದೇವೆ. ಕೆಲವು ಸಂದರ್ಭಗಳಲ್ಲಿ ದೊಡ್ಡ ತಾಲ್ಲೂಕುಗಳಲ್ಲಿ ಎರಡು ಮೂರು ಕ್ಷೇತ್ರಗಳು ಬರುತ್ತವೆ. ಶೃಂಗೇರಿ ಅಂಥ ಕಡೆ ಎರಡು ಮೂರು ತಾಲ್ಲೂಕುಗಳು ಸೇರಿ ಒಂದು ಕ್ಷೇತ್ರವಾಗಿರುತ್ತದೆ. ಅಂಥ ಕಡೆಗಳಲ್ಲಿ ಸ್ವಲ್ಪ ವ್ಯತ್ಯಾಸವಾಗಿರಬಹುದು. ಎಲ್ಲಿ ಇಂಥ ಮನೆಗಳ ಅವಶ್ಯಕತೆಯ

5-10ಪಿ.ಎಂ.

ಜಾಸ್ತಿ ಇದೆ, ಎಲ್ಲಿ ಇರುವ ಮನೆಗಳು ಬಿದ್ದು ಅವರಿಗೆ ಮನೆಗಳಿಲ್ಲದೆ ಇದ್ದಾರೆ, ಅಂಥವರಿಗೆ ನಾವು ಮಳೆಗಾಲ ಬರುವುದರೊಳಗಾಗಿ ಏನಾದರೂ ಒಂದು ಆಶ್ರಯವನ್ನು ಮಾಡಿಕೊಂಡಿದ್ದರೆ ಅವರಿಗೆ ತೊಂದರೆಯಾಗುತ್ತದೆ. ಮಾನ್ಯ ಸಚಿವರೇ ಹೇಳಿದ ಹಾಗೆ

ಅಡಿಶನಲ್ ಗ್ರ್ಯಾಂಟ್, ಮತ್ತಷ್ಟು ಲೋನ್ ತೆಗೆದುಕೊಂಡು, ಮತ್ತಷ್ಟು ಮನೆಗಳನ್ನು ಕಟ್ಟಿಸಿಕೊಡಬೇಕಾಗುತ್ತದೆ. ಹಾಗಾದರೆ ನಾವು ಮನೆಗಳನ್ನು ಕಟ್ಟಿಸಿಕೊಟ್ಟಿರುವುದು ತಪ್ಪೇ?

ಶ್ರೀ ಅರಗಜ್ಞಾನೇಂದ್ರ :— ಸರಕಾರದವರು ಮನೆಗಳನ್ನು ಕಟ್ಟಿಸಿಕೊಟ್ಟಿರುವುದು ತಪ್ಪಲ್ಲ. ಆದರೆ ಅದನ್ನು ಹಂಚಿಕೆ ಮಾಡುವಲ್ಲಿ ತಾರತಮ್ಯ ನೀತಿಯನ್ನು ಅನುಸರಿಸಲಾಗಿದೆ ಎಂಬ ಬಗ್ಗೆ ಮಾತ್ರ ನಮ್ಮ ಅಪಾದನೆ ಇದೆ.

ಶ್ರೀ ಜೆ.ಹೆಚ್. ಪಟೇಲ್ :— ನಾವು ಮನೆಗಳನ್ನು ಕಟ್ಟಿಸಿಕೊಟ್ಟಿದ್ದೇವೆ. ಕೆಲವೊಂದು ಲೋಪದೋಷಗಳು ಆಗಿದ್ದಾವೆ ಎಂಬುದನ್ನೂ ಕೂಡ ಒಪ್ಪಿಕೊಂಡಿದ್ದೇವೆ. ಇಲ್ಲಿ ನಾವು ನಡೆದುದ್ದರಿಂದ ಎಡವಿದ್ದೇವೆ. ನಾವು ನಡೆಯದೇ ಇದ್ದಿದ್ದರೆ ಆರಾಮದಿಂದ ಇರಬಹುದಾಗಿತ್ತು. ಇಲ್ಲಿ ನಾವು ಮನೆಗಳನ್ನು ಕಟ್ಟಿದ್ದರಿಂದ ನಿಮ್ಮ ಆರೋಪ ಬಂತು. ಕಟ್ಟದೇ ಇದಿದ್ದರೆ ಏನೋ ತೊಂದರೆ ಇದ್ದಿರಬಹುದು ಹಾಗಾಗಿ ಮನೆಗಳನ್ನು ಕಟ್ಟಲಿಲ್ಲ ಎಂದು ಎಲ್ಲರೂ ಸುಮ್ಮನೆ ಇರುತ್ತಿದ್ದರು.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನೀವು ನಿಮ್ಮ ಸರಕಾರದ ಜಾಹೀರಾತಿನಲ್ಲಿ ಈ ಕುರಿತು ವಿವರಗಳನ್ನು ಕೊಟ್ಟಿದ್ದೀರಿ. ಹೋದ ಸರಕಾರವು ಮೂರು ವರ್ಷಗಳಲ್ಲಿ ಕಟ್ಟಿದ ಮನೆಗಳ ಸಂಖ್ಯೆ: ಒಂದು ಲಕ್ಷದ ಆರು ಸಾವಿರ. ನಾವು ಕಟ್ಟಿಸಿರುವುದು ಒಂದು ಲಕ್ಷದ 16 ಸಾವಿರ ಎಂದು ನೀವೇ ಹೇಳಿಕೊಂಡಿದ್ದೀರಿ. ಅದನ್ನು ತಾವುಗಳು ನೋಡಬೇಕು.

ಶ್ರೀ ಜೆ.ಹೆಚ್. ಪಟೇಲ್ :— ಮನೆ ಕಟ್ಟಿಸುವ ಒಳ್ಳೆಯ ಕೆಲಸವನ್ನು ಯಾರು ಮಾಡಿದರೂ ಅದು ಒಳ್ಳೆಯ ಕೆಲಸವೇ. ಕೆಲವು ಸಾರಿ ಇಂಥ ಕೆಲಸಗಳನ್ನು ಮಾಡುವಾಗ ತಾರತಮ್ಯಗಳು ಆಗುತ್ತವೆ. ಇಲ್ಲ ಎಂದು ನಾನು ಹೇಳುವುದಿಲ್ಲ. ಒಟ್ಟಾರೆ ನಾನು ಅದನ್ನು ಅಲ್ಲಗಳೆಯುವುದಿಲ್ಲ. ನಮಗೂ ಚುನಾವಣೆಯ ಕಡೆಗೆ ದೃಷ್ಟಿ ಇದೆ. ನಿಮಗೆ ಇರುವ ಹಾಗೆ ನಮಗೂ ಚುನಾವಣೆಯ ಬಗ್ಗೆ ದೃಷ್ಟಿ ಇದೆ. ಆದರೆ ಇಂಥ ವಿಚಾರದಲ್ಲಿ ತೀರಾ ತಾರತಮ್ಯ ಆಗಬಾರದು ಎಂಬುದನ್ನು ನಾನು ಒಪ್ಪುತ್ತೇನೆ. ಈಗಲೂ ಕೂಡ ತಾವುಗಳೆಲ್ಲರೂ ಹೇಳಿದ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು, ಅದರ ಪ್ರಕಾರ ಎಲ್ಲಿ ಬಹಳ ಅವಶ್ಯಕತೆ ಇದೆ, ಎಲ್ಲಿ ಕೆಲಸಗಳು ಆಗಿಲ್ಲ, ಅವುಗಳನ್ನು ನೋಡಿ ಸರಿಪಡಿಸುತ್ತೇನೆ. ನಾನು ಮಾನ್ಯ ವಿರೋಧಪಕ್ಷದ ನಾಯಕರು ಮತ್ತಿತರ ಎಲ್ಲಾ ನಾಯಕರುಗಳಿಗೆ ಮತ್ತು ಮಾನ್ಯ ಸದಸ್ಯರುಗಳಿಗೆ ನಾನು ಹೇಳಬಯಸುವುದೇನೆಂದರೆ, when we admit that whatever wrong has been done, if it has been done, ಕೆಲವು ಸಂದರ್ಭಗಳಲ್ಲಿ ಅದು ತಾಲ್ಲೂಕುಗಳಿಗೆ ಸಂಬಂಧಪಟ್ಟ ಹಾಗೆ ಆಗಿರಬಹುದು. ಏಕೆಂದರೆ ಒಂದು ತಾಲ್ಲೂಕಿನಲ್ಲಿ ಎರಡು

ಕ್ಷೇತ್ರಗಳು ಬರಬಹುದು. ಅಲ್ಲಿಗೆ ನಾವು 200 ಮನೆಗಳನ್ನು ಕೊಟ್ಟರೆ ಏನಾಗುತ್ತದೆ ಅಂದರೆ,... ತಾವುಗಳು ಒಮ್ಮೆ ಹೌಸಿಂಗ್ ಸ್ಕೀಮ್‌ನ ಬಗ್ಗೆ ಒಂದು ಹೊಸ ಐಡಿಯಾವನ್ನು ಕೊಟ್ಟಿದ್ದೀರಿ. ಅದು ಜಾರಿಗೆ ಬಂದರೆ ರಾಜ್ಯದಲ್ಲಿ ಯಾರಿಗೂ ತೊಂದರೆ ಬರಲಾರದು. ಆದರೆ ಅದನ್ನು ಜಾರಿಗೆ ತರುವುದು ಸ್ವಲ್ಪ ಕಷ್ಟಸಾಧ್ಯವಿದೆ. ಆದ್ದರಿಂದ ಈಗ ಈ ವಿಚಾರವನ್ನು ವಿಪರೀತಕ್ಕೆ ತೆಗೆದುಕೊಂಡು ಹೋಗುವುದು ಬೇಡ. We have agreed that whatever wrong has been done, we will set it right. ಅದನ್ನು ಮಾನ್ಯ ಸಚಿವರು ಎರಡು ಸಾರಿ ಇಲ್ಲಿ ಹೇಳಿದ್ದಾರೆ. ಆದ್ದರಿಂದ ಮತ್ತೆ ಮತ್ತೆ ಇಂಥ ತಾಲ್ಲೂಕಿನಲ್ಲಿ ಇಂತಿಷ್ಟು ಆಗಿದೆ ಎಂದು ಹೇಳುವುದು ಬೇಡ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೇ, 4ನೇ ಅಕ್ಟೋಬರ್ ತಿಂಗಳ ಒಂದು ಸರಕಾರದ ಆದೇಶವನ್ನು ತಮ್ಮ ಗಮನಕ್ಕೆ ತರುತ್ತೇನೆ. 250 ಮನೆಗಳನ್ನು ಎಕ್ಸ್‌ಟ್ರಾ ಕೊಟ್ಟಿರುವುದು 32 ಕ್ಷೇತ್ರಗಳಿಗೆ ಮಾತ್ರ. ಬೇರೆಯವರಿಗೆ ಕೊಟ್ಟಿಲ್ಲ. ಹಾಗಾದರೆ ಇದನ್ನು ತಾರತಮ್ಯ ಎಂದು ಕರೆಯುತ್ತೀರಾ ಅಥವಾ ಬೇರೆ ಏನೆಂದು ಹೇಳುತ್ತೀರಿ? ಇಲ್ಲಿ ಅವರಿಗೆ ಯಾರು ಬೇಕಾದವರು ಇದ್ದರು ಅವರಿಗೆ ಕೊಟ್ಟಿದ್ದಾರೆ...

ಶ್ರೀ ಜೆ.ಹೆಚ್. ಪಟೇಲ್ :— ಒಂದು ಪಕ್ಷ ಸ್ವಲ್ಪಮಟ್ಟಿಗೆ ಹಾಗೆ ಕೊಟ್ಟಿದ್ದಾರೆ ಎಂದು ಇಟ್ಟುಕೊಂಡರೂ....

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಹಾಗೆ ತಾರತಮ್ಯ ಮಾಡಬಾರದು ಎಂದು ನಾವು ಹೇಳುತ್ತಾ ಇರುವುದು. ನಿಮಗೆ ಅಧಿಕಾರ ಕೊಟ್ಟಿರುವುದು you have to act judiciously. ಅದನ್ನು ಬಿಟ್ಟು ನೀವು ಜಂಗಲ್ ರಾಜ್ಯ ಮಾಡುತ್ತೇವೆ ಅಂದರೆ ಮಾಡಿಕೊಳ್ಳಿ.

ಶ್ರೀ ಜೆ.ಹೆಚ್. ಪಟೇಲ್ :— ನಾವೇನೂ ಜಂಗಲ್ ರಾಜ್ಯವನ್ನು ಮಾಡುತ್ತಾ ಇಲ್ಲ. ನಿಮಗೆ ನೀವು ಹೇಗೆ ಬಡವರ ಬಗ್ಗೆ ಅನುಕಂಪ ಇದೆಯೋ ಹಾಗೆಯೇ ನಮಗೂ ಅನುಕಂಪ ಇದೆ. ಬಹುಶಃ ನಾವು ಕೊಟ್ಟಿರತಕ್ಕಂಥ ಕಡೆಗಳಲ್ಲಿ ಸ್ವಲ್ಪಮಟ್ಟಿಗೆ ಜಾಸ್ತಿ ಬಡವರು ಇದ್ದಿರಬಹುದು. ನೀವೆಲ್ಲಾ ಕಡಿಮೆ ಬಡವರು ಇರತಕ್ಕಂಥ ಕ್ಷೇತ್ರದಲ್ಲಿರಬಹುದು. ಹಾಗಾಗಿದ್ದರೂ ಕೂಡ ನಿಮ್ಮ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ನಾವು ಅದನ್ನು ರೆಕ್ಟಿಫೈ ಮಾಡುತ್ತೇವೆ. ಈಗ ನಾವು ಸರಕಾರದ ಆದೇಶವನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಹೀಗೆ ಈಗ ಆಗಿರುವ ಆರ್ಡರನ್ನು ವಾಪಸ್ ತೆಗೆದುಕೊಳ್ಳದೆ ಆಗಿರುವ ಆರ್ಡರ್ ಮೇಲೆ ಹೇಗೆ ಸರಿಪಡಿಸಿಕೊಳ್ಳಬಹುದು ಅದರ ಮೇಲೆ ಅದನ್ನು ಹೇಗೆ ಸರಿಪಡಿಸಿಕೊಳ್ಳಬಹುದು ಎಂಬುದನ್ನು ನೋಡಿ ಮಾಡುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಅಡಿಶನಲ್ ಫಂಡ್‌ನ್ನು ಇಶ್ಯೂ ಮಾಡುತ್ತೇನೆ ಎಂದು ಹೇಳಿದರೆ ನಮ್ಮ ತಕರಾರು ಏನೂ ಇಲ್ಲ....

ಶ್ರೀ ಜೆ.ಹೆಚ್. ಪಟೇಲ್ :— ಆಯಿತು.

ಅಧ್ಯಕ್ಷರು :— ಈಗ ಮಾನ್ಯ ಮಂತ್ರಿಯವರು, ಮಾನ್ಯ ಮುಖ್ಯಮಂತ್ರಿಯವರು ಮತ್ತು ತಾವುಗಳೆಲ್ಲರೂ ಹೇಳಿದ್ದನ್ನು ನಾನು ಕೇಳಿದ್ದೇನೆ. ಇಲ್ಲಿ ಯಾರೂ ಕೂಡ ದುರುದ್ದೇಶದ ಅಪಾದನೆಯನ್ನು ಮಂತ್ರಿಗಳ ಬಗ್ಗೆ ಮಾಡಲಿಲ್ಲ. ದಯವಿಟ್ಟು ನಾನು

(ಗೊಂದಲ)

ದಯವಿಟ್ಟು ನಾನು ಹೇಳುವ ಮಾತನ್ನು ಕೇಳಿ, ಗಮನಿಸಿ. ನಿಮ್ಮ ಅಪಾದನೆಗಳು ಮತ್ತು ಅವರು ಕೊಟ್ಟ ಉತ್ತರವನ್ನೂ ಕೇಳಿದ್ದೇನೆ. ಭ್ರಷ್ಟಾಚಾರದ ಯಾವ ಅಪಾದನೆಗಳೂ ಇಲ್ಲ ಎಂದು ನೀವೆಲ್ಲರೂ ಹೇಳಿದ್ದೀರಿ. ಹಂಚಿಕೆಯ ವಿಚಾರದಲ್ಲಿ ತಾರತಮ್ಯ ಆಗಿದೆ ಎಂಬ ವಿಚಾರದಲ್ಲಿ ನೀವುಗಳು ನಮೂದು ಮಾಡಿರುವ ಎಲ್ಲಾ ಸರಕಾರದ ಆಜ್ಞೆಗಳ ಮೂಲಕ ಸ್ಪಷ್ಟವಾಗಿದೆ. ಕೆಲವು ಕಡೆಗಳಲ್ಲಿ ಕೊಟ್ಟೇ ಇಲ್ಲ, ಕೆಲವು ಕಡೆಗಳಲ್ಲಿ ಹೆಚ್ಚು ಕೊಟ್ಟಿದ್ದಾರೆ, ಕೆಲವು ಕಡೆಗಳಲ್ಲಿ ಕಡಿಮೆ ಕೊಟ್ಟಿದ್ದಾರೆ ಎಂದು ನೀವುಗಳು ಹೇಳಿದ್ದನ್ನು ಸಂಬಂಧಪಟ್ಟ ಮಾನ್ಯ ಸಚಿವರು ಮತ್ತು ಮಾನ್ಯ ಮುಖ್ಯಮಂತ್ರಿಯವರು ಒಪ್ಪಿಕೊಂಡಿದ್ದಾರೆ. ಅವರು ಬಹಳ ಸ್ಪಷ್ಟವಾಗಿ ಸರಕಾರಿ ಆಜ್ಞೆಯನ್ನು ಹಿಂದಕ್ಕೆ ಪಡೆದುಕೊಳ್ಳುವುದು ಬೇಡ, ಎಲ್ಲೆಲ್ಲಿ ಅನ್ಯಾಯವಾಗಿದೆ, ಯಾರ್‍ಯಾರಿಗೆ ಕಡಿಮೆಯಾಗಿದೆ, ಅಲ್ಲೆಲ್ಲಾ ಅಡಿಶನಲ್ ಅಲಾಟ್‌ಮೆಂಟ್‌ಗೆ ಅಡ್‌ಜಸ್ಟ್‌ಮೆಂಟ್ ಮಾಡಿಕೊಂಡು ಲೋಪದೋಷಗಳನ್ನು ಸರಿಪಡಿಸಿಕೊಳ್ಳುತ್ತೇವೆ ಎಂಬ ಮಾತನ್ನು ಹೇಳುತ್ತಾ ಇದ್ದಾರೆ. ಕಡಿಮೆ ಬಂದಲ್ಲಿ ಅಲ್ಲಿಗೂ ಕೂಡ ಹಂಚಿಕೆ ಮಾಡುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಜೆ.ಹೆಚ್. ಪಟೇಲ್ :— ಅಲಾಟ್‌ಮೆಂಟ್ ಮತ್ತು ಅದಕ್ಕೆ ಬೇಕಾಗತಕ್ಕಂಥ ಹಣಕಾಸಿನ ವ್ಯವಸ್ಥೆಯನ್ನು ನಾವು ಈಗಾಗಲೇ ಮಾಡಿದ್ದೇವೆ. ಹಾಗೆಯೇ ಅಡಿಶನಲ್ ಅಲಾಟ್‌ಮೆಂಟ್‌ನಲ್ಲಿ ಆಗಿರುವ ಲೋಪದೋಷಗಳು ಸರಿಪಡಿಸುತ್ತೇವೆ.

ಅಧ್ಯಕ್ಷರು :— ಅಲ್ಲಿ ಏನು ಲೋಪದೋಷಗಳು ಆಗಿವೆ ಅದನ್ನು ಸರಿಪಡಿಸುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಈಗ ಅವರು ಅಡಿಶನಲ್ ಅಲಾಟ್‌ಮೆಂಟ್ ನಲ್ಲಿ ಸರಿಪಡಿಸುತ್ತೇವೆ ಎಂದು ಹೇಳಿದ್ದಾರೆ. ಅದನ್ನು 1998-99ರ ಅವಧಿಯಲ್ಲಿಯೇ ಸಹಜವಾಗಿ ಮಾಡಬೇಕಾಗುತ್ತದೆ ಅದನ್ನು 3-4 ದಿನಗಳಲ್ಲಿ ಮಾಡುತ್ತೇವೆಂದು ಹೇಳಿರುತ್ತಾರೆ

ಆದಕ್ಕಾಗಿ ನಾವು ಅವರನ್ನು ಅಭಿನಂದಿಸಬೇಕಾಗುತ್ತದೆ. ಆದರೆ ರಾಜಕೀಯ ಉದ್ದೇಶದಿಂದಲೇ ನಾವು ಹೀಗೆ ಮಾಡಿದ್ದೇವೆ ಎಂಬ ಮಾತನ್ನು ಹೇಳಿದರೆ, ಏನೂ ಬೇಕಾದರೂ ಮಾಡಿ ಎಂದು ಹೇಳಿದರೆ ನಾವೇನು ಹೇಳಬೇಕು? ಚುನಾವಣೆ ಹತ್ತಿರ ಬಂದಿದೆ ಹಾಗೆ, ಹೀಗೆ, ಎಂದು ಹೇಳಿದರೆ ನಾವೇನು ಹೇಳಬೇಕು?

ಶ್ರೀ ಜೆ.ಹೆಚ್. ಪಟೇಲ್ :— ಮಾನ್ಯ ಅಧ್ಯಕ್ಷರೇ, ಒಂದು ಸಮಾರಂಭದಲ್ಲಿ ಬಂದವರೆಲ್ಲರಿಗೂ ನಾವು ಊಟಕ್ಕೆ ಬಡಿಸುತ್ತೇವೆ. ಊಟಕ್ಕೆ ಕುಳಿತವರಲ್ಲಿ ನಿಮ್ಮಂಥವರು ಯಾರಾದರೂ ಬೇಕಾದವರು ಇದ್ದರೆ ಅವರಿಗೆ ಎರಡು ಸೌಟು ತುಪ್ಪ ಜಾಸ್ತಿ ಹಾಕುತ್ತೇವೆ. ಏನು ತಪ್ಪು ಇದೆ ಅದರಲ್ಲಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಹೀಗೆಲ್ಲಾ ಹೇಳಿಕೊಂಡು ರಾಜ್ಯದ ಜನರ ತಿಥಿ ಮಾಡಲು ಹೊರಡಬೇಡಿ. ಇದು ಹೀಗೆ ಆಗಬಾರದು. ಕಬ್ಬು ತಿಂದು ನರಿ ಓಡಿಹೋಯಿತು, ವಾಡಿ ತಿಂದು ಒಂಟೆ ಸಿಕ್ಕಿಬಿತ್ತು ಎಂಬ ಗಾದೆಯ ಮಾತಿನ ಹಾಗೆ ಆಗಬಾರದು. ಯಾರಿಗೆ ಬಾಯಿ ಇಲ್ಲ ಅವರುಗಳು ಅಲ್ಲಿಯೇ ಸಾಯುವುದು, ನಿಮಗೆ ಯಾರ್‍ಯಾರು ಬೇಕು, ಅವರು ಬಂದು ಅರ್ಜಿಕೊಟ್ಟ ಕೂಡಲೆಕೊಡುವುದು, ನಿಮಗೆ ಬೇಕಾದ ಶಾಸಕರುಗಳಿಗೆ 500-1000 ಮನೆಗಳನ್ನು ಕೊಡುವುದು ಸರಿ ಅಲ್ಲ.

ಶ್ರೀ ಎಸ್.ಆರ್. ಲಕ್ಷ್ಮಯ್ಯ :— ಅವರ ಕಾಲದಲ್ಲಿ ಮನೆಗಳನ್ನೇ ಕೊಡಲಿಲ್ಲ. ನಮ್ಮ ಕಾಲದಲ್ಲಿ ಇಷ್ಟಾದರೂ ಮನೆಗಳನ್ನು ಕೊಟ್ಟಿದ್ದೇವೆ.

ಅಧ್ಯಕ್ಷರು :— ಸನ್ಮಾನ್ಯ ಮುಖ್ಯಮಂತ್ರಿಯವರು ಲೋಪವಾಗಿರುವುದು ಹೌದು, ಅದನ್ನು ನಾವು ಸರಿಪಡಿಸಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಮುಖ್ಯಮಂತ್ರಿಯವರು ಲೋಪದೋಶಗಳನ್ನು ಸರಿಪಡಿಸುತ್ತೇವೆ ಎಂದು ಹೇಳಿದ ಬಗ್ಗೆ ಅವರನ್ನು ನಾನು ಅಭಿನಂದಿಸಿದ್ದೇನೆ.

ಅಧ್ಯಕ್ಷರು :— ಈ ಸಭೆಯಲ್ಲಿ ನಾನು ಕೆಲವು ಸಮಯ ಇದ್ದಿರಲಿಲ್ಲ, ತಾವುಗಳು ಕೆಲವರು ಇದ್ದಿರಲಿಲ್ಲ. ಆಗ ಸದನದಲ್ಲಿ ಸ್ಟೇ ಸ್ಟೈಟ್ಸ್ ಬಗ್ಗೆ, ಫ್ಲೋರ್ ಮಿಲ್‌ಗೆ ಪರ್ಮಿಟ್ ಕೊಡುವುದಕ್ಕೆ, ಅನ್ಸಿಲರಿ ಯುನಿಟ್ಸ್ ಕೊಟ್ಟಿದ್ದಕ್ಕೆ, ಸ್ಪಿರಿಟ್ ಲೈಸನ್ಸ್ ಕೊಟ್ಟಿದ್ದಕ್ಕೆ ಮುಂತಾಗಿ ದಿನಗಟ್ಟಳೆ ಇಲ್ಲಿ ಗಲಾಟೆಯಾಗಿ, ಚರ್ಚೆ ಮಾಡಿಕೊಂಡು, ಅವರು ದುಡ್ಡು ಹೊಡೆದರು, ಇವರು ದುಡ್ಡು ಹೊಡೆದರು ಎಂದು ಚರ್ಚೆಯಾಗಿ, ಹೋದುದು ತಮಗೆಲ್ಲರಿಗೂ ಗೊತ್ತಿದೆ. ಆದರೆ ಇವೊತ್ತು ಇಲ್ಲಿ ಬಡವರಿಗೆ ಮನೆಗಳನ್ನು ಕೊಡುವುದರಲ್ಲಿ ಕೆಲವರಿಗೆ ಜಾಸ್ತಿ ಕೊಟ್ಟಿದ್ದಾರೆ, ಕೆಲವರಿಗೆ ಕಡಿಮೆ ಕೊಟ್ಟಿದ್ದಾರೆ ಎಂಬ ವಿಚಾರದಲ್ಲಿ, ಇನ್ನೂ ಜಾಸ್ತಿ ಕೊಡಬೇಕು ಎಂಬ ವಿಚಾರದಲ್ಲಿ ಚರ್ಚೆಯಾದುದರ ಬಗ್ಗೆ

ನಾವೆಲ್ಲರೂ ಹೆಮ್ಮೆ ಪಡಬೇಕು. ಆದ್ದರಿಂದ ಈ ಕುರಿತು ಇನ್ನು ಚರ್ಚೆ ಮಾಡುವುದನ್ನು ಬಿಡಿ. ಈ ವಿಚಾರವನ್ನು ಚರ್ಚಿಸಿ ಒಂದು ತೀರ್ಮಾನಕ್ಕೆ ಬಂದ ಬಗ್ಗೆ ಸಂತೋಷಪಟ್ಟುಕೊಳ್ಳೋಣ. ಈಗ ಮಾನ್ಯ ಯಡಿಯೂರಪ್ಪನವರು ಕೊಟ್ಟ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳುತ್ತೀರಾ? ಅವಕಾಶ ಮಾಡಿಕೊಡುತ್ತೇನೆ.

(ಆ) ವಿಷಯ ಗ್ರಾಮಪಂಚಾಯತ್ ಚುನಾವಣೆಗಳನ್ನು ಮುಂದೂಡಿರುವ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ **(ಶಿಕಾರಿಪುರ)** :— ಮಾನ್ಯ ಅಧ್ಯಕ್ಷರೇ, ಗ್ರಾಮಪಂಚಾಯತ್ ಚುನಾವಣೆಗಳನ್ನು ಸರಕಾರದವರು ಮುಂದೂಡಿರುವಂಥ ಪ್ರಮುಖವಾದ ವಿಚಾರವನ್ನು ನಾವು ಇಲ್ಲಿ ನಿಲುವಳಿ ಸೂಚನೆಯ ಮೂಲಕ ಪ್ರಸ್ತಾಪಕ್ಕೆ ತಂದಾಗ... ತಾವುಗಳು ಇವೊತ್ತು ಅವಕಾಶವನ್ನು ನೀಡಿ ಮಾತನಾಡಿ ಎಂದು ಹೇಳಿದರೆ ನಾನು ಪ್ರಾರಂಭ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :— ನಾವು ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಲು ಕೋರಿದ್ದೇವೆ. ಅದನ್ನು ಅರ್ಧಗಂಟೆ ಕಾಲಾವಧಿಯ ವಿಚಾರವನ್ನಾಗಿಯೋ, ಇನ್ನಾವುದೇ ನಿಯಮಗಳಡಿಯಲ್ಲಿಯೋ ತಾವುಗಳು ಆದೇಶಿಸಿದಂತೆ ಚರ್ಚಿಸಲು ನಾವು ಸಿದ್ಧರಿದ್ದೇವೆ.

ಶ್ರೀ ಎಂ.ಪಿ. ಪ್ರಕಾಶ್ (ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ವಾರ್ತಾ ಹಾಗೂ ಪ್ರವಾಸೋದ್ಯಮ ಸಚಿವರು) :— ಮಾನ್ಯ ಅಧ್ಯಕ್ಷರೇ, ಈ ವಿಚಾರವನ್ನು ಈ ರೂಪದಲ್ಲಿ ತರತಕ್ಕಂಥಾದ್ದರಲ್ಲಿ ಸ್ವಲ್ಪ ತೊಂದರೆಗಳು ಇವೆ. ಇಲ್ಲಿ ಉತ್ತರ ಕೊಡಲು ಸರಕಾರವು ಹಿಂಜರಿಯುವ ಪ್ರಶ್ನೆ ಇಲ್ಲ. ಕಾನೂನಿನ ಪ್ರಕಾರವೇ ಒಂದೇ ದಿವಸದಲ್ಲಿ ಮೋಷನ್‌ಗಳನ್ನು ತರಲು ಆಗುವುದಿಲ್ಲ.

ಅಧ್ಯಕ್ಷರು :— ನಾನು ಇದನ್ನು ನಿಲುವಳಿ ಸೂಚನೆ ಅಡಿಯಲ್ಲಿ ತೆಗೆದುಕೊಂಡಿಲ್ಲ. ವಸತಿ ಚರ್ಚೆ ನಡೆದದ್ದೂ ನಿಲುವಳಿ ಸೂಚನೆ ಕೆಳಗಲ್ಲ.

ಶ್ರೀ ಎಂ.ಪಿ. ಪ್ರಕಾಶ್ :— ಅದು ನಿಲುವಳಿ ಸೂಚನೆ ಕೆಳಗಿದೆ ಎಂದು ಭಾವಿಸಿಕೊಂಡು ಈ ತಾಂತ್ರಿಕ ಆಕ್ಷೇಪಣೆ ನಾನು ಎತ್ತಿದ್ದೆ. ಒಂದು ವೇಳೆ ಅದಿಲ್ಲದಿದ್ದರೂ ಎರಡನೆಯದು ಬಹಳ ಮುಖ್ಯವಾದುದು ಇದರ ಬಗ್ಗೆ ಕೋರ್ಟಿನಲ್ಲಿ ಆಗಲೇ ಎರಡೂ ಕಡೆಯಿಂದ ವಾದಗಳು ನಡೆದಿವೆ.

ಶ್ರೀ ಕೆ.ಎಸ್. ಈಶ್ವರಪ್ಪ :— ಮಾಡಬಾರದ್ದೆಲ್ಲಾ ಮಾಡಿ ಈಗ ಹೀಗೆ ಹೇಳುವುದು ಬೇಡ; ನೀವು ಉತ್ತರಿಸುವಾಗ ಏನೆಲ್ಲಾ ಬೇಕೋ ಹೇಳಿ.

(ಗೊಂದಲ)